ಉಪನ್ಯಾಸ ಗ್ರಂಥಮಾಲೆ

೫೯

ಪುಸ್ತಕಭಾಂಡಾರ ಕಾಯದೆ

ಜಿ. ಎಂ. ಪಾಟೀಲ

ಕ್ಯೂರೇಟರ ಆಫ್ ಲಾಯಬ್ರರೀಜ (ನಿವೃತ್ತ)

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

೧೯೭೩

ಪುಸ್ತಕಭಾಂಡಾರ ಕಾಯದೆ

ಉಪನ್ಯಾಸ ಗ್ರಂಥಮಾಲೆ

೫೯

ಪುಸ್ತಕಭಾಂಡಾರ ಕಾಯದೆ

ಜಿ. ಎಂ. ಪಾಟೀಲ
ಕ್ಯೂರೇಟರ ಆಫ್ ಲಾಯಬ್ರರೀಜ (ನಿವೃತ್ತ)
ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೯೭೨

ಪ್ರಕಾಶಕರು:
ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.,
ರಜಿಸ್ಟ್ರಾರ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಥಮ ಮುದ್ರಣ, ೨,೦೦೦ ಪ್ರತಿಗಳು
ಜನೆವರಿ, ೧೯೬೭

ವಿಸ್ತೃರಿತ ದ್ವಿತೀಯ ಆವೃತ್ತಿ, ೫,೦೦೦ ಪ್ರತಿಗಳು
ಅಕ್ಟೋಬರ, ೧೯೭೨

ಬೆಲೆ: **೨೫ ಪೈಸೆ**

ಮುದ್ರಕರು:
ಫ ಶಿ. ಭಾಂಡಗೆ
ವಿದ್ಯಾವಾಹಿನಿ ವಿದ್ಯುನ್ಮುದ್ರಣ
ಗಂಗಾಪೂರಪೇಟೆ, **ಗದಗ.**

ಮಾಲೆಯ ಮುನ್ನುಡಿ
(ಪ್ರಥಮ ಮುದ್ರಣ)

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಗಳ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು. ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯಕ್ಕೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ

ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಗೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಉಪನ್ಯಾಸಗಳನ್ನು ಕೊಡಿಸಿದಷ್ಟಕ್ಕೆ ತೃಪ್ತಿಗೊಳ್ಳದೆ, ಇವುಗಳಲ್ಲಿ ಕೆಲವನ್ನಾದರೂ ಗ್ರಂಥರೂಪದಲ್ಲಿ ಬರೆಯಿಸಿ ಸುಲಭವಾದ ಬೆಲೆಗೆ ಪ್ರಕಟಿಸಿ ಕನ್ನಡ ಜನದಲ್ಲೆಲ್ಲ ಹರಡಬೇಕೆಂಬ ಯೋಜನೆ ಈಗ ಹತ್ತು ವರುಷಗಳ ಪೂರ್ವದಲ್ಲಿಯೇ ಈ 'ಉಪನ್ಯಾಸ ಗ್ರಂಥಮಾಲೆ'ಯು ರೂಪದಲ್ಲಿ ಮೂರ್ತಗೊಂಡು ಮುನ್ನಡೆದಿದೆ. ಈ ಮಾಲೆಯಲ್ಲಿ ಇದುವರೆಗೆ ಬೇರೆ ಬೇರೆ ವಿಷಯಗಳನ್ನು ಕುರಿತು ೫೮ ಪುಸ್ತಕಗಳು ಪ್ರಕಟವಾಗಿವೆ. ಅಲ್ಪಾವಧಿಯಲ್ಲಿಯೇ ಈ ಪುಸ್ತಕಗಳ ಸಾವಿರಾರು ಪ್ರತಿಗಳು ಮಾರಾಟಗೊಂಡಿವೆ. ಕೆಲವು ಪುಸ್ತಕಗಳು ಮೂರನೆಯ ಆವೃತ್ತಿಯನ್ನೂ ಕಾಣುತ್ತಿರುವುದು ಮಾಲೆಯ ಉಪಯುಕ್ತತೆಗೂ, ಜನಪ್ರಿಯತೆಗೂ ಸಾಕ್ಷಿಯಾಗಿದೆ.

ನಮ್ಮ ಪ್ರಾರ್ಥನೆಗೆ ಮನ್ನಣೆಕೊಟ್ಟು, ಉಪನ್ಯಾಸಕರು ಪುಸ್ತಕಗಳನ್ನು ಬರೆದುಕೊಡುತ್ತಿರುವದು ಶ್ಲಾಘ್ಯವಾದ ವಿಷಯ. ಇದಕ್ಕಾಗಿ ಈ ಲೇಖಕ ಮಹಾಶಯರಿಗೆ ವಿಶ್ವವಿದ್ಯಾಲಯದ ವಂದನೆಗಳನ್ನು ಸಂತೋಷದಿಂದ ಸಲ್ಲಿಸುತ್ತೇನೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ನಮ್ಮ ಈ

ಯೋಜನೆಯನ್ನು ಮೆಚ್ಚಿಕೊಂಡು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ಧನಸಹಾಯವೀಯುತ್ತಿದ್ದ ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ಈ ಕಿರುಹೊತ್ತಿಗೆಗಳ ಪ್ರಸಾರ ನೂರ್ಮಡಿಗೊಂಡು ತನ್ಮೂಲಕ ನಮ್ಮ ಜನತೆಯ ಜ್ಞಾನಾಸಕ್ತಿ ಪುಷ್ಟಿಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೨೬-೧-೧೯೬೭

ಡಿ. ಸಿ. ಪಾವಟೆ
ಕುಲಪತಿ

ಪೀಠಿಕೆ

ಮೈಸೂರು ಸಾರ್ವಜನಿಕ ಪುಸ್ತಕಭಾಂಡಾರ ಕಾಯದೆ ೧೯೬೫, ಇದು ಪಾಸಾಗುವದಕ್ಕೆ ಪೂರ್ವಭಾವಿಯಾಗಿ ಮೈಸೂರು ಸರಕಾರದವರು ಮಸೂದೆ ತಯಾರಕ ಸಮಿತಿಯೊಂದನ್ನು ೧೯೬೧ ರಲ್ಲಿ ನಿಯಮಿಸಿದರು. ಆ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಸಾರ್ವಜನಿಕ ಪುಸ್ತಕಭಾಂಡಾರಗಳ ಆಡಳಿತ ವ್ಯವಸ್ಥೆಗೆ ನಾನು 'ಕ್ಯೂರೇಟರ ಆಫ್ ಲಾಯಬ್ರರೀಜ' ಎಂಬ ರಾಜ್ಯ ಮಟ್ಟದ ಅಧಿಕಾರಿಯಾಗಿದ್ದುದರಿಂದ ಆ ಸಮಿತಿಯ ಸದಸ್ಯ-ಕಾರ್ಯದರ್ಶಿಯಾಗುವ ಸುಯೋಗವೊದಗಿತು. ಸಮಿತಿಯ ಕಾರ್ಯಸಾಧನೆ, ಚರ್ಚೆ, ಉಪಯುಕ್ತವಾದ ವಿಷಯ ಸಂಗ್ರಹಣೆಗಳಲ್ಲಿ ಪುಸ್ತಕಭಾಂಡಾರ ಕಾಯದೆಯ ಬಗ್ಗೆ ವಿಸ್ತಾರವಾಗಿ ಅಭ್ಯಸಿಸುವ ಪ್ರಸಂಗವೊದಗಿತು. ಅಲ್ಲದೆ ಕಾಯದೆ ಪಾಸಾಗುವ ವರೆಗಿನ ಎಲ್ಲ ಘಟಕಗಳಲ್ಲಿಯೂ ಪಾತ್ರ ವಹಿಸಬೇಕಾಯಿತು. ಕಾಯದೆ ಪಾಸಾದ ನಂತರ ಅದಕ್ಕೆ ಅವಶ್ಯವಿದ್ದ ನಿಯಮಾವಳಿಗಳನ್ನು ತಯಾರಿಸುವ ಸುಯೋಗವು ದೊರಕಿತು. ಹೀಗಾಗಿ ಪುಸ್ತಕಭಾಂಡಾರ ಕಾಯದೆ ವಿಷಯದಲ್ಲಿ ಪರಿಣತಿಯನ್ನು ಪಡೆದೆನೆಂದರೆ ಅತಿಶಯೋಕ್ತಿ ಆಗಲಿಕ್ಕಿಲ್ಲವೆಂದು ಭಾವಿಸುವೆ.

ಈ ಪುಸ್ತಕಭಾಂಡಾರ ಕಾಯದೆಯು ಪ್ರತಿಯೊಬ್ಬನ ಹಿತಾಸಕ್ತಿಯನ್ನು ಅನೇಕವಾಗಿ ಪ್ರೇರೇಪಿಸುವದು. ಒಂದ-ನೆಯದಾಗಿ ಅವನು ಪುಸ್ತಕಭಾಂಡಾರ ವ್ಯವಸ್ಥೆಗೆ ಒಂದಿ-ಲ್ಲೊಂದು ರೀತಿಯಲ್ಲಿ ಸುಂಕ ಕೊಡುವನು; ಎರಡನೆಯದಾಗಿ ಪುಸ್ತಕಭಾಂಡಾರ ಸೇವೆಯನ್ನು ಅವನು ಉದ್ದಿಷ್ಟ ರೀತಿಯಲ್ಲಿ ಪಡೆಯಬೇಕಾಗುವದು; ಮೂರನೆಯದಾಗಿ, ಪುಸ್ತಕಭಾಂಡಾರ ಗಳ ಯಶಸ್ವೀ ಸೇವೆಯಲ್ಲಿ ಸಹಕಾರ, ಸೇವೆಯನ್ನು ಹಲ ವಾರು ರೀತಿಯಿಂದ ನೀಡಬೇಕಾಗುವದು. ಹೀಗಿರುವದರಿಂದ ಈ ಚಿಕ್ಕ ಹೊತ್ತಿಗೆಯು ಶ್ರೀಸಾಮಾನ್ಯನಿಗೆ ಉಪಯುಕ್ತ ವಾಗುವದೆಂದು ಆಶಿಸಲಾಗಿದೆ.

ಪುಸ್ತಕಭಾಂಡಾರ ವಿಜ್ಞಾನ ತರಬೇತಿ ವರ್ಗಗಳಿಗೆ ಪುಸ್ತಕಭಾಂಡಾರ ಕಾಯದೆ ಒಂದು ಅಭ್ಯಾಸ ವಿಷಯ ಇಲ್ಲವೆ ಉಪ-ವಿಷಯವಾಗಿರುವದು. ಈ ವರೆಗೆ ಇಂತಹ ತರಬೇತಿ ವರ್ಗಗಳ ವಿದ್ಯಾರ್ಥಿಗಳಿಗೆ ಉಪಯುಕ್ತ ರೀತಿಯಲ್ಲಿ ಬರೆದ ಪುಸ್ತಕಗಳು ಇರಲಿಲ್ಲ. ಈ ವಿಷಯುವನ್ನು ಅವರು ತಿಳಿದು ಕೊಳ್ಳಬೇಕಾದರೆ ಅನೇಕ ಪುಸ್ತಕಗಳನ್ನು ಅಂಶತಃ ಓದಿಕೊಳ್ಳ ಬೇಕಾಗುತ್ತಿತ್ತು. ಇದು ನಾನು ಪುಸ್ತಕಭಾಂಡಾರ ತರಬೇತಿ ವರ್ಗಗಳಿಗೆ ಈ ವಿಷಯುವನ್ನು ಹೇಳಿಕೊಡುವಾಗ ಬಂದ ಅನುಭವ. ಆದ್ದರಿಂದ ಈ ಪುಸ್ತಕವು ಈಗಿರುವ ಕೊರತೆ ಯನ್ನು ಹೋಗಲಾಡಿಸಿ ಪುಸ್ತಕಭಾಂಡಾರ ವಿಜ್ಞಾನ ವರ್ಗದ ವಿದ್ಯಾರ್ಥಿಗಳಿಗೂ ಉಪಯೋಗವಾಗುವದೆಂದು ಬಗೆಯಲಾಗಿದೆ.

ನನ್ನ ಬಿಡುವಿನ ಸಮಯದಲ್ಲಿ ನನ್ನ ಅಭ್ಯಾಸ ಹಾಗು ಅನುಭವಗಳ ಫಲಶ್ರುತಿಯನ್ನು ಪುಸ್ತಕ ರೂಪವಾಗಿ ಪ್ರಕಟಿಸ ಬೇಕೆಂದು ಸ್ವಾಭಾವಿಕವಾಗಿ ಹೊಳೆಯಿತು. ಆದರೆ ಆದ ಕ್ಕೊಂದು ಅನುಕೂಲ ಸುಯೋಗ ಒದಗಿದ್ದು ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳ ಹಾಗೂ ನನ್ನ ಮಿತ್ರರಾದ ಶ್ರೀ. ಸಿ. ಎಸ್. ಕಣವಿಯವರ ಉಪಕಾರದ ಫಲವಾಗಿ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣದ ಕಾರ್ಯ ಕ್ರಮದ ಅಂಗವಾಗಿ ಜೂನ ೧೯೬೬ ರಲ್ಲಿ ಕಮತಗಿ ಪಟ್ಟಣದಲ್ಲಿ ಏರ್ಪಡಿಸಿದ ಶಿಬಿರದಲ್ಲಿ ಪುಸ್ತಕಭಾಂಡಾರ ಕಾಯದೆ ವಿಷಯದ ಮೇಲೆ ನನ್ನ ಉಪನ್ಯಾಸವನ್ನು ಏರ್ಪಡಿಸಿದರು. ಆ ಉಪ- ನ್ಯಾಸದ ವಿಸ್ತೃತ ರೂಪವೇ ಈ ಚಿಕ್ಕ ಹೊತ್ತಿಗೆ.

ಇದು ವಿಸ್ತರಿತ ಎರಡನೆಯ ಆವೃತ್ತಿಯಾಗಿದೆ. ಮೊದಲ ನೆಯ ಆವೃತ್ತಿಯ ನಂತರದಲ್ಲಿ ೧೯೬೭ ಡಿಶೆಂಬರದಲ್ಲಿ ಮಹಾ ರಾಷ್ಟ್ರ ಸರಕಾರವು ಪುಸ್ತಕಭಾಂಡಾರಗಳ ಕಾಯದೆಯನ್ನು ಪಾಸು ಮಾಡಿಕೊಂಡಿತು. ಅದರಲ್ಲಿ ಗಣನೀಯವಾದ ಇಲ್ಲವೆ ಹೊಸ ಅಂಶಗಳು ಇಲ್ಲ. ಪ್ರತಿಯಾಗಿ ಸರ್ವಮಾನ್ಯವಾಗಿ ಅಂಗೀ ಕೃತವಾದ ಕೆಲವು ಮೂಲಭೂತ ತತ್ವಗಳಿಗೆ ಅಪವಾದಾತ್ಮಕ ಅಂಶಗಳು ಇವೆ. ಅದು ಸಂಪ್ರದಾಯದ ರೀತಿಯಲ್ಲಿಯೆ ಪುಸ್ತಕಭಾಂಡಾರ ಚಳವಳಿಯನ್ನು ಸಾಗಿಸುವಂತಹದಾಗಿದೆ. ಅದು ಹೇಗೆಯೋ ಇರಲಿ, ಇತ್ತೀಚಿನ ಕಾಯದೆಯಾದುದರಿಂದ ಅದರ ಬಗ್ಗೆ ಸೂಕ್ತ ತಿಳಿವಳಿಕೆಯನ್ನು ನೀಡುವದು ಉಪ

ಯುಕ್ತವೆಂದು ಬಗೆದು ಲಕ್ಷಿಸತಕ್ಕ ಅಂಶಗಳನ್ನು ಈ ಪುಸ್ತಕದಲ್ಲಿ ಅನುಬಂಧ ರೂಪವಾಗಿ ಸಂಕ್ಷೇಪವಾಗಿ ಹೇಳಲಾಗಿದೆ.

ಉಪನ್ಯಾಸದ ಸಂದರ್ಭವನ್ನೊದಗಿಸಿ ನಂತರ ಈ ಪುಸ್ತಕವನ್ನು ಬರೆಯುವ ಅವಕಾಶವನ್ನು ಒದಗಿಸಿದ್ದಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳ ಉಪಕಾರವನ್ನು ಇನ್ನೊಮ್ಮೆ ಸ್ಮರಿಸುವೆ.

ಧಾರವಾಡ
೨-೧೦-೧೯೭೨

ಜಿ. ಎಂ. ಪಾಟೀಲ

ವಿಷಯ ಸೂಚಿಕೆ

೧. ಸಾರ್ವಜನಿಕ ಪುಸ್ತಕಭಾಂಡಾರ ಸೇವೆ

ಸಾರ್ವಜನಿಕ ಪುಸ್ತಕ ಭಾಂಡಾರವು ಒಂದು ಸಾರ್ವಜನಿಕ ಸಂಸ್ಥೆ. ಸಮಾಜದ ಹಿತಸಂರಕ್ಷಣೆ, ಪೋಷಣೆಗೆ ಅವಶ್ಯವಿದ್ದ ಸಂಸ್ಥೆ. ಜನರಿಗೆ ಪುಸ್ತಕ, ಪತ್ರಿಕೆಗಳನ್ನು ಒದಗಿಸಿ ಅವರಿಗೆ ಮನರಂಜನೆ, ಜ್ಞಾನ, ಶಿಕ್ಷಣ ಹಾಗೂ ಸ್ಫೂರ್ತಿಗಳನ್ನು ಒದಗಿಸುವ ಅವಕಾಶವನ್ನು ಕಲ್ಪಿಸುವದು ಅದರ ಗುರಿಯಾಗಿದೆ. ಅದು ಒಂದು ಸೇವಾ ಸಂಸ್ಥೆ. ಜನರ ಮಾನಸಿಕ ಹಾಗೂ ಬೌದ್ಧಿಕ ಪೋಷಣೆ, ಬೆಳವಣಿಗೆಗೆ ಮತ್ತು ಜನಾಂಗದ ಏಳ್ಗೆಗೆ ಸಾಹಿತ್ಯದ ಮುಖಾಂತರ ಸೇವೆಯನ್ನು ಒದಗಿಸುವದೇ ಅದರ ಕಾರ್ಯವಾಗಿದೆ.

ಪ್ರಾರಂಭದ ದಿಶೆಯಲ್ಲಿ ಪುಸ್ತಕಭಾಂಡಾರ ಸೇವೆಯ ಕಲ್ಪನೆ ಸರಿಯಾಗಿ ಇರಲಿಲ್ಲ. ಬಿಡುವಿನ ಸಮಯವನ್ನು ಉಲ್ಲಸಿತವಾಗಿ ಕಳೆಯುವದಕ್ಕಾಗಿ ಮನರಂಜನೆಯ ಸಾಹಿತ್ಯವನ್ನು ಪುಸ್ತಕಭಾಂಡಾರಗಳು ಒದಗಿಸುವವು ಎಂಬುದು

ಸಾಮಾನ್ಯ ಗ್ರಹಿಕೆಯಾಗಿದ್ದಿತು. ಇದು ಸಾಕಷ್ಟು ಆಸ್ಥೆಯನ್ನು ಹುಟ್ಟಿಸಿದ್ದಿಲ್ಲ; ಸಾರ್ವಜನಿಕರು ಅದರೆಡೆಗೆ ಲಕ್ಷ್ಯವನ್ನು ಹಾಕಿದ್ದಿಲ್ಲ. ಅದರ ಮಹತ್ವವನ್ನು ಕಂಡುಕೊಂಡಿದ್ದಿಲ್ಲ. ಬರಬರುತ್ತ ಶಿಕ್ಷಣವು ಸಾರ್ವತ್ರಿಕವಾಗಿ ಹಬ್ಬಿದುದರ ಫಲವಾಗಿ ಜೀವನದ ಕಕ್ಷೆ, ಕ್ಷೇತ್ರಗಳೂ ಆಳವಾಗಿ ಮತ್ತು ವಿಶಾಲವಾಗಿ ಬೆಳೆದು ರೀತಿ ನೀತಿಗಳು ಬದಲಾಗುತ್ತಿರುವುದರಿಂದ ಹಾಗೂ ಜೀವನದ ಸಮಸ್ಯೆಗಳು ಬೆಳೆದು ಜಟಿಲವಾಗುತ್ತ ನಡೆದುದ-ರಿಂದ ಜನರು ಹೆಚ್ಚು ಹೆಚ್ಚು ಜ್ಞಾನಾರ್ಜನೆಗೆ ಪ್ರಯತ್ನಿಸಬೇಕಾಯಿತು. ಇಂತಹ ಜ್ಞಾನಾರ್ಜನೆಗೆ ಗ್ರಂಥಸ್ಥ ಸಾಹಿತ್ಯವೇ ನಿಶ್ಚಿತ ನಿರ್ದುಷ್ಟ ಹಾಗೂ ಸುಲಭ ಸಾಧನವಾಗಿದೆ ಆದುದರಿಂದ ಸರ್ವರಿಗೂ ಸದಾಕಾಲವೂ ಬೇಕಾದ ಸಾಹಿತ್ಯವನ್ನು ಒದಗಿಸುವದಕ್ಕಾಗಿ ಸಾರ್ವಜನಿಕ ಪುಸ್ತಕಭಾಂಡಾರಗಳು ಹುಟ್ಟಿ ಬಂದಿರುತ್ತವೆ.

ಇನ್ನು ಸಾರ್ವಜನಿಕ ಪುಸ್ತಕಭಾಂಡಾರದ ಸ್ವರೂಪವನ್ನು ಆಲೋಚಿಸೋಣ. ಅದು ಸರ್ವೋಪಯೋಗಿಯಾಗಿರಬೇಕು. ಅಂದರೆ ಪ್ರತಿಯೊಬ್ಬ ಓದು ಬರಹ ಬಲ್ಲವನೂ ಅದರ ಪ್ರಯೋಜನ ಪಡೆಯುವಂತಾಗಿರಬೇಕು. ಹೀಗಾಗಬೇಕಾದರೆ—

(ಅ) ಪ್ರತಿಯೊಬ್ಬರಿಗೂ ತಮ್ಮ ಹಿತ, ಆಸಕ್ತಿ, ಅಭಿ-ರುಚಿ, ಅವಶ್ಯಕತೆಗಳಿಗನುಸಾರವಾಗಿ ಓದಲು, ಅಭ್ಯಾಸ ಮಾಡಲು ಬೇಕಾಗುವ ಸಾಹಿತ್ಯ—ಪುಸ್ತಕ, ಪತ್ರಿಕೆ ಮೊದ-

ಲಾದವು. ಹಾಗೂ ಸಾಮಗ್ರಿ—ಧ್ವನಿಮುದ್ರಿಕೆ, ಫಿಲ್ಮ, ಚಿತ್ರ ಮುಂತಾದವುಗಳು ಸಾರ್ವಜನಿಕ ಪುಸ್ತಕಭಾಂಡಾರಗಳಿಂದ ದೊರಕಬೇಕು.

(ಬ) ಅವುಗಳು ಪುಸ್ತಕಭಾಂಡಾರದ ಆವಾರದಲ್ಲಿ ಮಾತ್ರವಲ್ಲದೆ ಮನೆಗೆ ಓದಲಿಕ್ಕೆ, ಅಭ್ಯಸಿಸಲಿಕ್ಕೆ ಕೂಡ ದೊರಕಬೇಕು.

(ಕ) ಪುಸ್ತಕ ಭಾಂಡಾರ ಸೇವೆಯು ಪುಕ್ಕಟೆಯಾಗಿ ದೊರಕಬೇಕು. ಯಾವ ಕಾರಣಕ್ಕೂ ಯಾವ ರೀತಿಯಿಂದಲೂ ಶುಲ್ಕ ಕೇಳಲಾಗದು.

(ಡ) ಅವುಗಳು ಅವಶ್ಯವಾಗಿ ಸಾರ್ವಜನಿಕ ಹಣಕಾಸಿನಿಂದ ಸ್ಥಾಪಿಸಲ್ಪಡಬೇಕು, ನಡೆಯಿಸಲ್ಪಡಬೇಕು.

(ಇ) ಸಾಮಾನ್ಯವಾಗಿ ಇಂತಹ ಸಾರ್ವಜನಿಕ ಪುಸ್ತಕ ಭಾಂಡಾರ ಸೌಕರ್ಯಗಳು ಕಾಯುದೆಯ ಪೂರ್ವಕ ನಡೆಯಿಸಲ್ಪಡಬೇಕು. ಇಂತಹ ಘನೋದ್ದೇಶಗಳನ್ನು ಈಡೇರಿಸುವದು ಸರಕಾರದವರಿಗೆ ಸಾಧ್ಯ; ಹಾಗೂ ಅದರ ಬಗ್ಗೆ ಕಾಯುದೆಯು ಒಂದು ಉತ್ತಮ ಸಾಧನ.

೧. ಸಾರ್ವಜನಿಕ ಪುಸ್ತಕಭಾಂಡಾರಗಳು :

ಹುಟ್ಟು ಬೆಳವಣಿಗೆ

ಸಾರ್ವಜನಿಕ ಪುಸ್ತಕಭಾಂಡಾರಗಳು ಇಂದಿನ ಜನ ಜೀವನಕ್ಕೆ ಅವಶ್ಯ: ಜನತೆಯು ನಾಗರಿಕ ಜೀವನದಲ್ಲಿ. ರಾಜಕೀಯ ಹಾಗೂ ರಾಜ್ಯಾಡಳಿತೆಯ ರೀತಿ ನೀತಿಯಲ್ಲಿ ಸಮರಸವಾಗಿ ಪಾಲುಗೊಳ್ಳಲಿಕ್ಕೆ ಅಗತ್ಯ ಎಂದು ಕಂಡುಕೊಂಡಾಯಿತು. ಹೀಗಿರುವಾಗ ಇಂತಹ ಪುಸ್ತಕಭಾಂಡಾರಗಳನ್ನು ಯಾರು ಸ್ಥಾಪಿಸಬೇಕು? ಹೇಗೆ ಸ್ಥಾಪಿಸಬೇಕು? ಅದರಲ್ಲಿ ಜನತೆಯ ಅಂಗವೇನು? ಸಾರ್ವಜನಿಕರ ಹಾಗೂ ಸಾರ್ವಜನಿಕ ಸಂಸ್ಥೆಗಳ ಹೊಣೆ ಯಾವುದು? ಸರಕಾರದ ಕರ್ತವ್ಯವೆಷ್ಟು? ಇವೆಲ್ಲ ಪ್ರಶ್ನೆಗಳು ಉಂಟಾಗುತ್ತವೆ. ಆದುದರಿಂದ ಅವುಗಳ ಐತಿಹಾಸಿಕ ಬೆಳವಣಿಗೆಯನ್ನು ನಿರೀಕ್ಷಿಸುವದು ಸೂಕ್ತವಾಗಿದೆ.

ಪ್ರಾರಂಭದಲ್ಲಿ ಸಾರ್ವಜನಿಕ ಪುಸ್ತಕಭಾಂಡಾರಗಳು ಈಗಿನಂತೆ ಬಹುಮುಖ ವ್ಯಕ್ತಿತ್ವವನ್ನು ಪಡೆದಿದ್ದಿಲ್ಲ. ಅವುಗಳ ಉದ್ದೇಶ, ಕಾರ್ಯಕ್ಷೇತ್ರ ತೀರ ಅಲ್ಪವಾಗಿದ್ದವು. ಅವು ಸಾಮಾನ್ಯವಾಗಿ ಕೆಲವು ಸುಶಿಕ್ಷಿತರಿಗೆ ಮನರಂಜನೆಯ ಸಾಹಿತ್ಯವನ್ನು ಒದಗಿಸುವ ಸಾಧನಗಳಾಗಿದ್ದವು. ಇಲ್ಲವೆ ಕೆಲವು ಜನರಿಗೆ ತಮ್ಮ ವೈಯಕ್ತಿಕ ಆಸ್ಥೆ ಅಭಿಲಾಷೆಗಳನ್ನು ಪೂರೈಸುವಲ್ಲಿ ಸಹಾಯವಾಗುತ್ತಿದ್ದವು. ಹೀಗಾಗಿ ಅವುಗಳ ಉಪಯುಕ್ತತೆ, ಬಳಕೆ ಸಾರ್ವತ್ರಿಕವಾಗಿದ್ದಿಲ್ಲ. ಶ್ರೀಸಾಮಾನ್ಯನಿಗೆ ಅವುಗಳು ಬೇಕೆನಿಸಿದ್ದಿಲ್ಲ. ಕಾರಣ ತಮ್ಮ ತಮ್ಮ

ಹಿತ, ಆಸ್ತೆ, ಅಭಿಲಾಷೆಗಳನ್ನು ಪುಸ್ತಕಗಳ ಮೂಲಕ ಈಡೇರಿಸಿಕೊಳ್ಳಬೇಕೆನ್ನುವವರು, (ಅಂಥ ಜನರ ಗುಂಪುಗಳು) ತಮ್ಮದೇ ಆದ ಸಂಘವನ್ನು ಏರ್ಪಡಿಸಿಕೊಂಡು ಪುಸ್ತಕ, ಪತ್ರಿಕೆಗಳನ್ನು ಕೊಂಡುಕೊಂಡು ಪುಸ್ತಕಭಾಂಡಾರಗಳನ್ನು ನಡೆಯಿಸುತ್ತಿದ್ದರು. ಅಂಥವು ಒಂದು ರೀತಿಯಲ್ಲಿ ಅಂದರೆ ಬೇಕಾದವರು ಆ ಸಂಘ ಸಂಸ್ಥೆಗಳ ಸದಸ್ಯರಾಗಿ ಪ್ರಯೋಜನ ಪಡೆಯಬಹುದಾಗಿತ್ತು; ಅರ್ಥಾತ್ ಅವು ಯಾವುದೇ ಖಾಸಗಿ ವ್ಯಕ್ತಿ ಇಲ್ಲವೆ ವ್ಯಕ್ತಿಗಳ ಸೊತ್ತಾಗಿರದೆ ಸಾರ್ವಜನಿಕವಾಗಿರುತ್ತಿದ್ದವು. ಬರಬರುತ್ತ ಶಿಕ್ಷಣವು ಹಾಗೂ ಓದಿನ ಅವಶ್ಯಕತೆಯು ಬೆಳೆದಂತೆ ಇಂತಹ ಸಾರ್ವಜನಿಕ ಪುಸ್ತಕಭಾಂಡಾರಗಳ ಸಾರ್ವಜನಿಕ ಸ್ವರೂಪವು ವಿಸ್ತಾರವಾಗಿ ಸಾರ್ವಜನಿಕರಿಂದ ಸಹಾಯ, ದೇಣಿಗೆ ಪಡೆದುಕೊಂಡು ಸ್ವಲ್ಪ ಮಟ್ಟಿಗೆ ಅವುಗಳ ಪ್ರಯೋಜನವನ್ನು ವಿಸ್ತರಿಸಿದವು. ಆ ನಂತರ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಾದ ಲೋಕಲ್‌ಬೋರ್ಡ, ಮುನಸಿಪಾಲಿಟಿ, ಗ್ರಾಮಪಂಚಾಯತಿಗಳು ಜನಜೀವನದಲ್ಲಿ ಮತ್ತು ನಾಗರಿಕತೆಯಲ್ಲಿ ಸಾರ್ವಜನಿಕ ಪುಸ್ತಕಭಾಂಡಾರಗಳ ಮಹತ್ವವನ್ನು ಕಂಡು ಅವುಗಳಿಗೆ ಸಹಾಯಧನ ನೀಡಿ ಅವುಗಳ ಕಾರ್ಯವನ್ನು ಪ್ರೋತ್ಸಾಹಿಸಿದವು. ತೀರ ಇತ್ತೀಚಿನಿಂದ, ಎರಡು ದಶಕಗಳ ಕಾಲದಿಂದ, ಸರಕಾರಗಳು, ಸಾರ್ವಜನಿಕ ಪುಸ್ತಕಭಾಂಡಾರಗಳು ಸಮಾಜದ ಹಾಗೂ ರಾಷ್ಟ್ರದ ಏಳ್ಗೆಗೆ ಪೋಷಕವಾದ, ಅಷ್ಟೇ ಅಲ್ಲದೆ ಅಗತ್ಯವಾದ ಸಂಸ್ಥೆಗಳು ಎಂದು ಪರಿಗಣಿಸಿ ಅವುಗಳಿಗೆ ಸಹಾಯಧನವನ್ನು ನೀಡುತ್ತಲಿವೆ. ಇಷ್ಟೇ ಅಲ್ಲದೆ

ಕೆಲವು ಸರಕಾರಗಳು ಪುಸ್ತಕ ಭಾಂಡಾರಗಳನ್ನು ಸ್ಥಾಪಿಸುವದು, ನಡೆಯಿಸಿಕೊಂಡು ಹೋಗುವದು ಸರಕಾರದ ಆದ್ಯ ಕರ್ತವ್ಯವಾಗಿದೆ, ಹಾಗೂ ಅದೊಂದು ಗುರುತರವಾದ ಮತ್ತು ವಿಶಾಲವಾದ ಕಾರ್ಯ, ಅದಕ್ಕೆ ಆರ್ಥಿಕ ಸಂಪನ್ಮೂಲಗಳು ಬೇಕು. ಆದುದರಿಂದ ಅವುಗಳ ಹೊಣೆಯನ್ನು ಸಾರ್ವಜನಿಕರ ಮೇಲೆ ಅಥವಾ ಸಾರ್ವಜನಿಕ ಸಂಘ ಸಂಸ್ಥೆಗಳ ಮೇಲೆ ಹಾಕದೆ ಸಂಪೂರ್ಣವಾಗಿ **ಸರಕಾರವೇ** ವಹಿಸಿಕೊಂಡು ಅವುಗಳನ್ನು ಯಶಸ್ವಿಯಾಗಿ ನಡೆಯಿಸಿಕೊಂಡು ಹೋಗಬೇಕೆಂಬುದನ್ನು ಮನಗಂಡಿವೆ. ಹೀಗಾಗಬೇಕಾದರೆ ಪುಸ್ತಕ ಭಾಂಡಾರ ಚಳವಳಿಯು ಕಾಯದೆ ಮೂಲಕವಾಗಿ ಕಾಯದೆ ಬದ್ಧವಾಗಿ ನಡೆಯಬೇಕಾದುದು ಅನಿವಾರ್ಯ. ಆದುದರಿಂದ ಪುಸ್ತಕಭಾಂಡಾರ ಕಾಯದೆಗಳು ಹೊರಬರುತ್ತಿವೆ. ಮೊದಲು ಶೈಶವಾವಸ್ಥೆಯಲ್ಲಿ ಸಾರ್ವಜನಿಕರ ಗಮನವನ್ನು ಸೆಳೆದು ಅವರ ಬಗಲಗೂಸಾಗಿ, ಅವರಿಂದ ಪೋಷಣೆ ಹೊಂದಿ, ತರುವಾಯ ಅವುಗಳು ಸಾರ್ವಜನಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಸ್ಥಾನಮಾನ ಪಡೆದು. ಸ್ಥಾನಿಕ ಸಂಸ್ಥೆಗಳಿಂದ ಮನ್ನಣೆ ಹಾಗೂ ಸಹಾಯಧನ ಸಂಪಾದಿಸಿ. ಆ ನಂತರ ಪ್ರಬುದ್ಧಾವಸ್ಥೆಯನ್ನು ಹೊಂದಿ ಸರಕಾರದವರ ಮಾನ್ಯತೆ ಹಾಗೂ ಪ್ರೋತ್ಸಾಹ ಪಡೆದವು. ಇನ್ನು ಮೇಲೆ ಸಾರ್ವಜನಿಕ ಪುಸ್ತಕ ಭಾಂಡಾರಗಳು ಅವುಗಳ ಗುರುತರವಾದ ಕಾರ್ಯವನ್ನು ಯೋಗ್ಯ ರೀತಿಯಿಂದ ನಿರ್ವಹಿಸಬೇಕಾದರೆ ಸರಕಾರದವರ ಅಂಗಸಂಸ್ಥೆಗಳಾಗಿ ಕಾಯದೆಗನುಸಾರವಾಗಿ ನಡೆಯಬೇಕೆಂಬ ತತ್ವ ಪ್ರಣಾಳಿ ಸಾರ್ವತ್ರಿಕವಾಗಿ ಹಬ್ಬುತ್ತಲಿದೆ.

೩. ಧ್ಯೇಯ ಧೋರಣೆ

ಭಾರತದಲ್ಲಿ ಪುಸ್ತಕಭಾಂಡಾರಗಳು ಕಳೆದ ಶತಮಾನದ ಮಧ್ಯಭಾಗದಿಂದಲೂ ಹುಟ್ಟಿ ಬೆಳೆಯುತ್ತ ಬಂದಿವೆ. ಆದರೆ ಪ್ರಾರಂಭದಲ್ಲಿ ಅವುಗಳಿಗೆ ನಿಶ್ಚಿತ ಧ್ಯೇಯ ಧೋರಣೆಗಳು ಇದ್ದಿಲ್ಲ. ಯಾವದಾದರೊಂದು ಕಾರಣದಿಂದ ಆಕಸ್ಮಿಕವಾಗಿ ಹುಟ್ಟಿದವು ಕೆಲವು. ಜನರಿಗೆ ಮನರಂಜನೆ ಒದಗಿಸುವ ಸಾಹಿತ್ಯ ವನ್ನು ಒದಗಿಸಲಿಕ್ಕೆ ಪ್ರಾರಂಭವಾಗಿದ್ದರೆ, ಕೆಲವು, ಪರಕೀಯ ಆಡಳಿತಗಾರರಿಗೆ ಸ್ಥಳಿಕ ಇತಿಹಾಸ, ಭೂಗೋಲ, ಜನತೆ-ಅವರ ರೀತಿ, ನೀತಿ, ಧರ್ಮ, ತತ್ವವಿಚಾರ-ಇವುಗಳ ಬಗ್ಗೆ ತಿಳಿವಳಿಕೆ ಮಾಡಿಸುವದರ ಸಲುವಾಗಿ ಹುಟ್ಟಿದವು. ಅಲ್ಲದೆ ಕೆಲವು, ಐತಿಹಾಸಿಕ ಘಟನೆಗಳ ಯೋಗ್ಯ ಸ್ಮಾರಕ ಸಂಸ್ಥೆ ಗಳಿಗಾಗಿ ಪರಿಣಮಿಸಿದರೆ ಇನ್ನು ಕೆಲವು ರಾಷ್ಟ್ರೀಯ ಜನ ಜೀವನ, ಸ್ವಾತಂತ್ರ್ಯ ಆಂದೋಲನ ಇವುಗಳನ್ನು ಜಾಗ್ರತ ಗೊಳಿಸುವ ಸಲುವಾಗಿ ಉದಯಿಸಿದವು. ಈ ಕೊನೆಯ ತರಹದ ಸಾರ್ವಜನಿಕ ಪುಸ್ತಕ ಭಾಂಡಾರಗಳು ನಿಜವಾಗಿ ಆಧುನಿಕ ಪುಸ್ತಕಭಾಂಡಾರ ಸೇವೆಯ ಕಲ್ಪನೆಯನ್ನು—ಜನ ಸಾಮಾನ್ಯರಿಗೆ ಬೇಕಾಗುವ ಸಾಹಿತ್ಯವನ್ನು ಪುಕ್ಕಟೆಯಾಗಿ ಒದಗಿಸುವ ಮೂಲಕ—ಮೂಡಿಸಿದವು ಹಾಗೂ ರೂಢಿಸಿದವು.

ಆದರೆ ಇವುಗಳಿಗೆ ಸರಿಯಾದ, ಭದ್ರವಾದ ಹಾಗೂ ನಿರಂತರವಾದ ತಳಹದಿ ಇರಲಿಲ್ಲ. ಅವು ತಮಗೆ ಉಚಿತಕಂಡ ರೀತಿಯಲ್ಲಿ ಸಮಯಾನುಸಾರವಾಗಿ ಹುಟ್ಟಿ

ಕಾಲಪ್ರವಾಹದಲ್ಲಿ ಏರಿಳಿತ ಅಸ್ತಂಗತಗಳನ್ನು ಕಂಡರೆ ವಿಚಿತ್ರವೇನೂ ಇಲ್ಲ. ಅದು ಸ್ವಾಭಾವಿಕ. ಏಕೆಂದರೆ ಅವುಗಳ ಸ್ವರೂಪವೇ ಹಾಗಿತ್ತು.

ಸಾರ್ವಜನಿಕ ಪುಸ್ತಕಭಾಂಡಾರಗಳಿಗೆ ಸಾಮಾಜಿಕ ಹಾಗೂ ರಾಷ್ಟ್ರೀಯ ದೃಷ್ಟಿ ಮತ್ತು ಮಹತ್ವ ಉಂಟಾದುದು ಶಿಕ್ಷಣದ ಪ್ರಸಾರದಿಂದ. ಜನಾಂಗದ ಉತ್ಕರ್ಷೆಗೆ ಶಿಕ್ಷಣವೇ ಮೂಲವೆಂದು ಕಂಡು ಬಂದಾಗ ಸರಕಾರಗಳು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಮತ್ತು ಕಡ್ಡಾಯವಾಗಿ ಪ್ರಾರಂಭಿಸಿದವು. ಇದು ಮೊದಲು, ದೇಶಿಯ ಸಂಸ್ಥಾನವಾಗಿದ್ದ ಬಡೋದೆಯಲ್ಲಿ ಆಯಿತು. ಇದರ ಜೊತೆಯಲ್ಲಿಯೇ ಪ್ರಾಥಮಿಕ ಶಿಕ್ಷಣದ ಆನುಷಂಗಿಕವಾಗಿ ಪುಸ್ತಕಭಾಂಡಾರಗಳನ್ನು ಸ್ಥಾಪಿಸಲಾಯಿತು ಇದು ನಡೆದುದು ೧೯೦೭ ರಲ್ಲಿ. ಶಿಕ್ಷಣಕ್ಕೆ ಬಲ, ಪೋಷಣೆ ಹಾಗೂ ಬಾಳಿಕೆ ಬರಬೇಕಾದರೆ ಜನರು ಓದುವುದನ್ನು ಮುಂದುವರಿಸಿ ಕಾಯ್ದುಕೊಂಡು ಹೋಗುವದು ಅವಶ್ಯ. ಇಲ್ಲವಾದರೆ ಶಿಕ್ಷಣ ಪಡೆದವರು ಓದುವ ಅಭ್ಯಾಸವಿಲ್ಲದುದರಿಂದ ಪುನಃ ನಿರಕ್ಷರಿಗಳಾಗಿ ಶಿಕ್ಷಣಕ್ಕಾಗಿ ಮಾಡಿದ ಕಾರ್ಯ, ಪ್ರಯತ್ನ. ವೆಚ್ಚ ಇವೆಲ್ಲವೂ ಮಣ್ಣುಗೂಡಿ ರಾಷ್ಟ್ರೀಯ ಬೆಳವಣಿಗೆಗೆ ಒಂದು ದೊಡ್ಡ ಆಘಾತವನ್ನುಂಟು ಮಾಡುವವು. ಕೇವಲ ಪ್ರಾಥಮಿಕ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟು ಪುಸ್ತಕ ಭಾಂಡಾರ ಸೇವೆಯ ಸೌಕರ್ಯಗಳನ್ನೊದಗಿಸದಿದ್ದರೆ ಅದರಿಂದಾಗುವ ನಷ್ಟವನ್ನು 'ಮಣ್ಣಿನ ಮನೆಯನ್ನು ಕಟ್ಟಿ ಅದಕ್ಕೆ ಮೇಲ್ಛಾವಣಿಯನ್ನು

ಹಾಕದೆ ಬಿಟ್ಟಂತಾಗುವದು' ಎಂಬ ದೃಷ್ಟಾಂತದಿಂದ ಹೇಳುವ ದುಂಟು. ಜನರಿಗೆ ಓದಲಿಕ್ಕೆ ಪುಸ್ತಕಗಳು ಲಭ್ಯವಾಗಬೇಕಾದರೆ ಸಾರ್ವಜನಿಕ ಪುಸ್ತಕಭಾಂಡಾರಗಳು ಅಗತ್ಯ. ಹೀಗಾಗಿ ಈ ಮೊದಲು ಕಂಡುಕೊಳ್ಳದ ಧ್ಯೇಯ ಧೋರಣೆಗಳು ಸಾರ್ವತ್ರಿಕ ಶಿಕ್ಷಣದ ಮೂಲಕ ಅದರ ಆವಶ್ಯಕತೆಗಳಿಗಾಗಿ ಪುಸ್ತಕ ಭಾಂಡಾರಗಳಿಗೆ ಒಡಮೂಡಿದವು. ಈ ದಿಶೆಯಲ್ಲಿ ಬಡೋದೆ ಸಂಸ್ಥಾನವು ಭಾರತಕ್ಕೆ ಮುಂದಾಳಾಗಿ ಮಾರ್ಗದರ್ಶನ ಮಾಡಿತು.

ತದನಂತರ, ಹಳೆಯ ಮುಂಬೈ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಪುಕ್ಕಟೆ ಹಾಗೂ ಕಡ್ಡಾಯ ಗೊಳಿಸಿದುದರಿಂದ ಅಲ್ಲದೆ ವಯಸ್ಕರ ಶಿಕ್ಷಣ ಪ್ರಾರಂಭಿಸಿ ದುದರಿಂದ ಪುಸ್ತಕ ಭಾಂಡಾರಗಳ ಧ್ಯೇಯ ಧೋರಣೆಗಳು ವಿಸ್ತಾರವಾದವು. ಮುಂಬಯಿ ಸರಕಾರದವರು ಸರ್ವವ್ಯಾಪಿ ಪುಸ್ತಕಭಾಂಡಾರ ಚಳವಳಿಯನ್ನು ನಿರೂಪಿಸುವ ಸಲುವಾಗಿ ಆ ಸಮಿತಿಯನ್ನು ನಿಯಮಿಸುವ ಭೂಮಿಕೆಯನ್ನು ಕುರಿತು ಪುಸ್ತಕಭಾಂಡಾರ ಸಮಿತಿಯ ವರದಿ (೧೯೩೯-೪೦) ಯಲ್ಲಿ ಈ ರೀತಿಯಾಗಿ ಕಾಣಿಸಲಾಗಿದೆ.

"ಮುಂಬಯಿ ಸರಕಾರದವರು ಶಿಕ್ಷಣದ ಸೌಕರ್ಯಗಳ ಸಲಕರಣೆಗಳನ್ನು ಸುಧಾರಿಸುವ ಬಗೆಗೆ ಪ್ರಯತ್ನಿಸುತ್ತಿದ್ದಾರೆ; ಮತ್ತು ಸಾಕ್ಷರತಾ ಚಳವಳಿಯನ್ನು ರಾಜ್ಯದಲ್ಲಿ ಈ ಮೊದಲೇ ಪ್ರಾರಂಭಿಸಿದ್ದಾರೆ. ಸಾಕ್ಷರತೆಯು ಬೆಳೆದಂತೆ ಪುಸ್ತಕಭಾಂಡಾರ ಗಳಲ್ಲಿ ಓದುವ ಸಲುವಾಗಿ ಹೆಚ್ಚಿನ ಸೌಕರ್ಯಗಳು ಬೇಕೆಂಬುದು ಅಗತ್ಯವಾಗಿ ಕಂಡು ಬರುತ್ತಿದೆ. ಆದುದರಿಂದ ಕಾರ್ಯಶೀಲ

ಮತ್ತು ಸತ್ವಯುಕ್ತ ಪುಸ್ತಕಭಾಂಡಾರ ಚಳವಳಿಯು ಸಾರ್ವತ್ರಿಕ ಸಾಕ್ಷರತೆಗೆ ಮಾತವಲ್ಲದೆ ಇಂತಹ ಸಾಕ್ಷರರು ಪ್ರತಿಯೊಂದು ವಿಷಯದ ಮೇಲೆ ಹೆಚ್ಚು ಹೆಚ್ಚಾಗಿ ಜ್ಞಾನವನ್ನು ದೊರಕಿಸಬೇಕೆಂಬ ಅವರ ಜ್ಞಾನ ತೃಷೆಯನ್ನು ಹಿಂಗಿಸಲೂ ಸಹ ಅವಶ್ಯವಾಗಿದೆ.

ಮಾನವನ ಮನಸ್ಸು ಯಾವಾಗಲೂ ಕುತೂಹಲಿಕಾರಿಯಾಗಿದೆ. ಹೆಚ್ಚು ಜ್ಞಾನ ಸಂಪಾದಿಸಿದಂತೆ ಅದರ ಅವಶ್ಯ-ಕತೆಯು ಇನ್ನೂ ಬೆಳೆಯುತ್ತ ಹೋಗುತ್ತದೆ. ಇದನ್ನು ಸ್ಪಷ್ಟವಾಗಿ ಅರಿತುಕೊಂಡು ಮುಂಬಯಿ ಸರಕಾರದವರು ಮುಂಬಯಿ ರಾಜ್ಯದಲ್ಲಿ ಪುಸ್ತಕ ಭಾಂಡಾರ ಚಳವಳಿಯನ್ನು ಪ್ರಾರಂಭಿಸುವದನ್ನು ಕುರಿತು ಈಗ ಆಲೋಚಿಸುತ್ತಿದ್ದಾರೆ. ಈ ಚಳವಳಿಯು ರಾಜ್ಯದ ತುಂಬ ಪುಸ್ತಕಭಾಂಡಾರಗಳ, ಹಳ್ಳಿ ಮತ್ತು ಪಟ್ಟಣದ ಪುಸ್ತಕ ಭಾಂಡಾರಗಳ – ಕ್ಷಿಪ್ರದಲ್ಲಿಯೇ ಅವುಗಳ ತೀವ್ರ ಬೆಳವಣಿಗೆಯನ್ನು ನಿರೀಕ್ಷಿಸಿ-ಕಾರ್ಯವನ್ನು ಸಂಯೋಜಿಸಿ ಮತ್ತು ಅದಕ್ಕೆ ಪೂರಕವಾಗಿ ಒಂದು ಜಾಳಿಗೆಯನ್ನು ಪಸರಿಸುವದು ಆಗಿರುತ್ತದೆ."

ಅದರಲ್ಲಿ ಮತ್ತೂ ಹೇಳಿರುವದೇನೆಂದರೆ– "ಪುಸ್ತಕ ಭಾಂಡಾರಗಳ ವಿಶೇಷ ಶೈಕ್ಷಣಿಕ ಮೌಲ್ಯವು ಸಾರ್ವಜನಿಕರಲ್ಲಿ ಓದುವ ಅಭ್ಯಾಸವನ್ನು ಪ್ರೇರೇಪಿಸುವದು ಆಗಿರುತ್ತದೆ. ಇವನ್ನು ಯಾರೂ ಅಲ್ಲಗಳೆಯಲಾರರು. ಜೀವನದ ಪ್ರತಿಯೊಂದು ರಂಗದಲ್ಲಿಯು ಸಮಸ್ಯೆಗಳು– ನಾಗರಿಕತನದವೇ ಆಗಿರಲಿ. ಶಿಕ್ಷಣ.

ಜ್ಞಾನ ಇವುಗಳಿಗೆ ಸಂಬಂಧಿಸಿದುವೇ ಆಗಲಿ ಇವೆಲ್ಲ ಬಾಳುವೆ ಸಾಗಿಸುವಲ್ಲಿ ಉಂಟಾಗುವ ತೀಕ್ಷ್ಣ ಮತ್ತು ಒತ್ತಡ ತರುವಂತಹ ಸಮಸ್ಯೆಗಳೇ ಆಗಿವೆ. ಆದಕಾರಣ ಪ್ರತಿಯೊಬ್ಬನೂ ಅವುಗಳ ಕುರಿತು ಅಭ್ಯಾಸ ಮಾಡಬೇಕಾಗಿದೆ. ಜ್ಞಾನ ವಿಜ್ಞಾನಗಳಲ್ಲಿ ಮುಂದುವರೆವ ಜಗತ್ತಿನಿಂದ ಯಾವ ನಾಗರಿಕರಿಗೂ ಮತ್ತು ರಾಷ್ಟ್ರಗಳಿಗೂ ದೂರವಿರಲು ಸಾಧ್ಯವಿಲ್ಲ. ಅಂತಹ ಜ್ಞಾನವನ್ನು ಅರಿತುಕೊಳ್ಳುವ ಸಾಧನವು ಉತ್ತಮ ಪುಸ್ತಕಗಳ ಮುಖಾಂತರವಾಗಿ ಲಭ್ಯವಾಗುತ್ತದೆ. ಆದುದರಿಂದ ಉತ್ತಮ ಪುಸ್ತಕಭಾಂಡಾರಗಳ ಅಸ್ತಿತ್ವವು ಜನತೆಯ ಸಂಸ್ಕೃತಿ ಹಾಗೂ ಉತ್ಕರ್ಷ ಇವುಗಳ ಮೇಲೆ ವಿಶೇಷವಾಗಿ ಆಧರಿಸಿದೆ."

ಗ್ರೇಟ ಬ್ರಿಟನ್‌ದಲ್ಲಿ ಪುಸ್ತಕಭಾಂಡಾರ ಚಳವಳಿಯು ನಿರಂತರವಾಗಿ ಸಾರ್ವಜನಿಕರ ಪ್ರೋತ್ಸಾಹ-ಪೋಷಣೆಗಳಿಂದ, ವಿಶೇಷವಾಗಿ ಕಾರ್ನೆಗಿ ವಿಶ್ವಸ್ಥ ನಿಧಿಯಿಂದ ಅಪಾರ ಧನ-ಸಹಾಯವನ್ನು ಹೊಂದಿ ಅಲ್ಲದೆ ಕಾಯದೆಯ ಬೆಂಬಲ ಪಡೆದು ಮುಕ್ಕಾಲು ಶತಮಾನಗಳ ವರೆಗೆ ಅಭಿವೃದ್ಧಿ ಹೊಂದಿದ ತರುವಾಯ ಬ್ರಿಟಿಶ್ ಸರಕಾರದಿಂದ ನಿಯುಕ್ತವಾದ ಕೆನಿಯಾನ್ ಕಮಿಟಿಯು ಸಾರ್ವಜನಿಕ ಪುಸ್ತಕ ಭಾಂಡಾರಗಳ ಧ್ಯೇಯ ಧೊರಣೆಗಳ ಬಗ್ಗೆ ೧೯೨೭ರಲ್ಲಿ ಈ ರೀತಿಯಾಗಿ ಉಲ್ಲೇಖಿಸಿದೆ.

"ಪುಸ್ತಕ ಭಾಂಡಾರಗಳ ಬಗೆಗೆ ಸಾರ್ವಜನಿಕರ ಹಿತಾ-ಸಕ್ತಿಯು ವಿಶೇಷವಾಗಿ ಬೆಳೆದಿದೆ. ಜ್ಞಾನದ ಮಹತಿಯ ಬಗೆಗೆ ಹಾಗೂ ಬೌದ್ಧಿಕ ಜೀವನದ ಮಹತ್ವದ ಬಗೆಗೆ ರಾಷ್ಟ್ರೀಯ

ಚಟುವಟಿಕೆಗಳು ಎಡೆಬಿಡದೆ ನಡೆಯುವ ಕೇಂದ್ರಗಳಲ್ಲಿ ಈ ಮೊದಲು ಇತಿಹಾಸದ ಯಾವ ಕಾಲದಲ್ಲಿಯಕ್ಕಿಂತ ಹೆಚ್ಚು ಸುಸ್ಪಷ್ಟವಾದ ತಿಳಿವಳಿಕೆಯು ಉಂಟಾಗಿದೆಯೆಂದು ನಮಗೆ ನಂಬಿಗೆ ಇದೆ. ಇಂತಹ ಕೇಂದ್ರಗಳಲ್ಲಿ ಸಾರ್ವಜನಿಕ ಪುಸ್ತಕ ಭಾಂಡಾರವು ಸ್ವಲ್ಪ ಮಟ್ಟಿಗೆ ಗೌಣವೆನಿಸಿದ ಆದರೆ ಸಾತ್ವಿಕ ಸ್ವರೂಪದ ಮನರಂಜನೆಯನ್ನು ಆಕಸ್ಮಿಕವಾಗಿ ಒದಗಿಸುವ ಸಾಧನೆಯೆಂದು ಯಾರೂ ಪರಿಗಣಿಸುವದಿಲ್ಲ; ಅದು ರಾಷ್ಟ್ರ ಕಲ್ಯಾಣಕ್ಕೆ ಹೇರಳವಾದ ಅಂತಃಶಕ್ತಿಯುಳ್ಳ ಎಂಜಿನ್ನು (Engine) ಮತ್ತು ಶಿಕ್ಷಣ ಹಾಗೂ ಸಂಸ್ಕೃತಿಯ ಪ್ರಗತಿಗಾಗಿ ಅಗತ್ಯವಾದ ತಳಹದಿಯೆಂದು ಹಾಗೂ ಅದು ಇಲ್ಲದಿದ್ದರೆ ಯಾವ ಜನತೆಯೂ ಜೀವನದ ಹೋರಾಟದಲ್ಲಿ ತನ್ನ ಸ್ಥಾನ ಮಾನವನ್ನು ಕಾಯ್ದುಕೊಳ್ಳಲಾರದು ಎಂಬ ಅಭಿಪ್ರಾಯ ಮನ್ನಣೆ ಹೊಂದಿದೆ.”

ಇನ್ನು ಭಾರತದಲ್ಲಿಯ ತೀರ ಇತ್ತೀಚಿನ ಅಭಿಪ್ರಾಯ ವನ್ನು ಗಮನಿಸೋಣ. ಭಾರತ ಸರಕಾರದವರು ನಿಯಮಿಸಿದ ಪುಸ್ತಕ ಭಾಂಡಾರಗಳ ಸಮಿತಿಯು ತನ್ನ ವರದಿ (೧೯೫೯) ಯಲ್ಲಿ ಸಾರ್ವಜನಿಕ ಪುಸ್ತಕ ಭಾಂಡಾರಗಳ ಮಹತ್ವ ಹಾಗೂ ಅವಶ್ಯಕತೆಗಳ ಕುರಿತು ಈ ರೀತಿಯಾಗಿ ನಿರೂಪಿಸಿದೆ.

“ ಸಾತಂತ್ರ್ಯ ಸಂಪಾದಿಸಿದ ನಂತರ ಭಾರತದಲ್ಲಿ ಸರಿಯಾಗಿ ಆಲೋಚಿಸಿ ಲೋಕಹಿತಕ್ಕಾಗಿ ಸಮರ್ಪಿಸಿದ ಸಾರ್ವಜನಿಕ ಪುಸ್ತಕ ಭಾಂಡಾರಗಳ ಅವಶ್ಯಕತೆಯು ಈ

ಮೊದಲಿನಗಿಂತ ತೀಕ್ಷ್ಣವಾಗಿ ಕಂಡು ಬಂದಿದೆ. ಪುಸ್ತಕಗಳನ್ನು ಓದಲಿಕ್ಕೆ ಸೌಕರ್ಯಗಳನ್ನು ಎಲ್ಲ ನಾಗರಿಕರ ಹಾಗೂ ವಿಶೇಷವಾಗಿ ಹಳ್ಳಿಗರ ಆಳವಿನಲ್ಲಿ ತರಲೇಬೇಕೆಂಬುದು ಎಲ್ಲ ರಾಷ್ಟ್ರೀಯ ಮುಂದಾಳುಗಳ ವಿಶೇಷವಾಗಿ ಹೇಳಿಕೊಳ್ಳುವಂತಹ ಸರ್ವಾನುಮತದ ಅಭಿಪ್ರಾಯವಾಗಿದೆ. ಇದರಿಂದ ಅವರ ತಿಳಿವಳಿಕೆಯ ಜಗತ್ತು ವೈಯಕ್ತಿಕ ಅನುಭವ ಹಾಗೂ ನಿರೀಕ್ಷಣೆಗಳಿಗೆ ಮರ್ಯಾದಿತಗೊಳ್ಳದಂತೆ ಆಗುವದು ಎಂದು ನಂಬಲಾಗಿದೆ. ಓದು ಸ್ಥಳ, ಕಾಲಗಳಿಗೆ ಅತೀತವಾಗಿ ಜನತೆಯ ಜ್ಞಾನ ಚಕ್ಷುವನ್ನು ವಿಸ್ತರಿಸುತ್ತದೆ. ಪ್ರಜಾಸತ್ತೆಯಲ್ಲಿ ಪ್ರತಿಯೊಬ್ಬನೂ ಆಧಿಪತ್ಯವನ್ನು ಹೊಂದಿರುತ್ತಾನೆ. ಮತ್ತು ಅದನ್ನು ಜಾಣತನದಿಂದ ಚಲಾಯಿಸಬೇಕಾದರೆ ಪ್ರತಿಯೊಬ್ಬರೂ ಚನ್ನಾಗಿ ಜ್ಞಾನ ಸಂಪಾದಿಸಿರಬೇಕು. ಮತ್ತು ಸರಿಯಾದುದಾವುದು, ಯಾವುದು ಸರಿ ಅಲ್ಲ ಎಂಬುದನ್ನು ನಿರ್ಣಯಿಸಲು ತರಬೇತಿ ಹೊಂದಿದವನಿರಬೇಕು. ಇವೆರಡೂ ಆಗತ್ಯವಾಗಿ ಇರಬೇಕು. ಪುಸ್ತಕಗಳನ್ನು ಓದುವುದರಿಂದ ಮನಸ್ಸು ಅರಳುತ್ತದೆ. ಮತ್ತು ಓದುಗನಿಗೆ ಸಮಸ್ಯೆಗಳನ್ನು ನಿಶ್ಚಿತವಾಗಿ ಅವಲೋಕಿಸಿ ಹಾಗೂ ಸಮಗ್ರವಾಗಿ ಪರಿಶೀಲಿಸಲು ಸಹಾಯವಾಗುತ್ತದೆ. ಸರಕಾರದ ನೀತಿಗಳಿಗೆ ಅವುಗಳ ಗುಣಗಳನ್ನು ಅರಿತು ಅನುಗ್ರಹಿಸಿದ ಜನತೆಯ ಹಾರ್ದಿಕ ಬೆಂಬಲವು, ಕಾಯಿದೆಯ ಬೆಂಬಲದಿಂದ ಜಾರಿಗೊಳಿಸುವ ಮೂಲಕ ದೊರಕಬಹುದಾದ ಪರಿಪಾಲನೆಗಿಂತ ಅಧಿಕವಾಗಿ ಬಾಳಬಹುದೆಂಬುದು ರಾಜಕಾರಣಿಗಳಿಗೆ ಚೆನ್ನಾಗಿ ಗೊತ್ತು."

ಈ ಪ್ರಕಾರವಾಗಿ ಕಾಲಕ್ರಮೇಣ ಸಾರ್ವಜನಿಕ ಪುಸ್ತಕ ಭಾಂಡಾರಗಳ ಅವಶ್ಯಕತೆಯು ಜನಜೀವನದಲ್ಲಿ ನಾಗರಿಕತೆ-ಯಲ್ಲಿ ಹಾಸು ಹೊಕ್ಕಾಗಿ, ಆಳವಾಗಿ, ವಿಸ್ತಾರವಾಗಿ ಬೆಳೆದು ಬಂದಿದೆ. ಅವುಗಳ ಪ್ರಯೋಜನ, ಅವಶ್ಯಕತೆಗಳ ಬಗೆಗೆ ಯಾವ ಭಿನ್ನಾಭಿಪ್ರಾಯವು ಇರಲಾರದು. ಅವು ಕಾಲ-ಕ್ರಮೇಣ ಬೆರೆತು ಪುಷ್ಟ ಪುಷ್ಟವಾಗಿ ಸತ್ವಯುತವಾಗಿ ಬೆಳೆದು ಬಂದ ಚಿರಂತನ ಸಾರ್ವಜನಿಕ ಸಂಸ್ಥೆಗಳಾಗಿವೆ.

೪. ಸಾರ್ವಜನಿಕ ಪುಸ್ತಕಭಾಂಡಾರ ಪದ್ಧತಿ

ಈ ಮೊದಲು ಹೇಳಿದ ಘನ ಉದ್ದೇಶವನ್ನು ಈಡೇರಿಸಬೇಕಾದರೆ ಒಂದು ಸಾರ್ವಜನಿಕ ಪುಸ್ತಕಭಾಂಡಾರಗಳ ಪದ್ಧತಿಯನ್ನು ರಚಿಸಬೇಕಾಗುವದು. ಆ ಪದ್ಧತಿಯು ಪುಸ್ತಕಭಾಂಡಾರಗಳ ನಡುವೆ ಸುಸಂಬದ್ಧ ಸಹಕಾರ, ಸಂಯೋಜನೆಗಳನ್ನು ಏರ್ಪಡಿಸುವದು.

ಪುಸ್ತಕಭಾಂಡಾರ ಸೇವೆಯಲ್ಲಿ ಪರಸ್ಪರ ಸಹಕಾರ, ಸಂಯೋಜನೆ ಅತ್ಯಗತ್ಯ. ಯಾವ ಪುಸ್ತಕಭಾಂಡಾರವಾದರೂ ತನ್ನಷ್ಟಕ್ಕೆ ತಾನೇ ಉತ್ತಮ ಕಾರ್ಯ ಸಾಗಿಸಲಾರದು. ಅದು ಇತರರಿಂದ ನೆರವು ಪಡೆದು ಇತರರಿಗೆ ನೆರವು ನೀಡಬೇಕಾಗುವದು. ಏಕೆಂದರೆ ಯಾವ ಪುಸ್ತಕ ಭಾಂಡಾರವಾದರೂ ಪುಸ್ತಕ, ಪತ್ರಿಕೆ ಮೊದಲಾದ ಸೇವಾ ಸಾಹಿತ್ಯ, ಸಾಮುಗ್ರಿಗಳ ವಿಷಯದಲ್ಲಿ ಸ್ವಯಂ ಪರಿಪೂರ್ಣವಿರಲಾರದು. ಹಾಗೆ ಇರಲೂ ಸಾಧ್ಯವಿಲ್ಲ. ಏಕೆಂದರೆ ಅದರಲ್ಲಿ ಆರ್ಥಿಕ ವೆಚ್ಚ, ಸ್ಥಳ, ನೌಕರವರ್ಗ, ಪುಸ್ತಕ ಮುಂತಾದವುಗಳ ಲಭ್ಯತೆ, ಅವುಗಳ ಉಪಯೋಗದ ಪರಿಮಾಣ, ಸಂಬಂಧಿಸಿದ ಪುಸ್ತಕಭಾಂಡಾರದ್ದಲ್ಲದೆ ರಾಷ್ಟ್ರೀಯ ದೃಷ್ಟಿಯಿಂದಲೂ ಮಿತವ್ಯಯ ಇವೆಲ್ಲ ಸಮಸ್ಯೆಗಳು ಇದರಲ್ಲಿ ಅಡಕವಾಗಿವೆ. ಆದುದರಿಂದ ಯಾವುದೇ ಪುಸ್ತಕಭಾಂಡಾರ ತನ್ನಲ್ಲಿ ಎಷ್ಟೇ ಅಪಾರ ಸಾಹಿತ್ಯ ಸಂಗ್ರಹ

ವಿದ್ದರೂ ತನ್ನ ಎಲ್ಲ ಓದುಗರ ಅವಶ್ಯಕತೆಗಳನ್ನು ಪೂರೈಸ
ವದಕ್ಕಾಗಿ ಸ್ವಾವಲಂಬಿಯಾಗದು. ಅದು ಇತರ ಪುಸ್ತ
ಭಾಂಡಾರಗಳ ನೆರವನ್ನು ಪಡೆಯಲೇಬೇಕಾಗುವದು.

ಆದುದರಿಂದ ಪುಸ್ತಕಭಾಂಡಾರಗಳಲ್ಲಿ ಪರಸ್ಪ
ಸಂಯೋಜನೆ, ಸಹಕಾರ ಈ ತಳಹದಿಯ ಮೇಲೆ ಯಾವದೆ
ಒಂದು ರಾಷ್ಟ್ರಕ್ಕೆ ಇಲ್ಲವೆ ರಾಜ್ಯಕ್ಕೆ ಒಂದು ಸಾರ್ವಜನಿಕ
ಪುಸ್ತಕಭಾಂಡಾರ ಯೋಜನೆಯನ್ನು ರೂಪಿಸಬೇಕಾಗುವದು

ಸಂಯೋಜನೆಯು ಬೇರೆ ಬೇರೆ ಪುಸ್ತಕಭಾಂಡಾರ
ಗಳಲ್ಲಿ ವಿಶಿಷ್ಟ ತರಹದ—ಸಾಮಾನ್ಯ ತರಹದ ಬೇಡಿಕೆಗಳಿಗೆ
ಹೊರತಾದ—ಪುಸ್ತಕಗಳ ಶೇಖರಣೆಯಲ್ಲಿ ಉಂಟಾಗುವದು.
ಸಮಾನ ದರ್ಜೆಯ ಪುಸ್ತಕಭಾಂಡಾರಗಳು ವಿಶಿಷ್ಟ ವಿಷಯ
ಗಳ ಮೇಲೆ ಹಾಗೂ ಭಾಷೆಗಳಲ್ಲಿಯ ಪುಸ್ತಕಗಳನ್ನು
ವಿಂಗಡಿಸಿ. ದೊರಕಿಸಿ. ಶೇಖರಿಸುವ ಯೋಜನೆಯನ್ನು ತಮ್ಮ
ತಮ್ಮೊಳಗೆ ಆಲೋಚಿಸಿ ನಿರ್ಧರಿಸುವವು. ಇದರಿಂದ ಯಾವ
ದೊಂದು ಪ್ರದೇಶದ ಪುಸ್ತಕಗಳ ಬೇಡಿಕೆಯು ಸಾಮಾನ್ಯ
ವಾಗಿ ಅಲ್ಲಿಯ ಒಂದಿಲ್ಲೊಂದು ಪುಸ್ತಕಭಾಂಡಾರದಲ್ಲಿ
ಸಲುವಳಿಯಾಗುವದು. ಇದರಿಂದಾಗಿ ಪರಿಪೂರ್ಣತೆ ಒಂದ
ಪುಸ್ತಕಭಾಂಡಾರ ಮಟ್ಟದಲ್ಲಿ ಆಗದೆ ಒಂದು ಪ್ರದೇಶ
ರಾಜ್ಯ ಈ ಮಟ್ಟದಲ್ಲಿ ಆಗುವದು.

ಎರಡನೆಯದಾಗಿ ಪುಸ್ತಕಭಾಂಡಾರಗಳ ನಡುವೆ
ಪರಸ್ಪರ ಸಹಕಾರವಿರಬೇಕು. ಅಂದರೆ ಪುಸ್ತಕಭಾಂಡಾರ
ಗಳಲ್ಲಿ ಅಂತರ್—ಪುಸ್ತಕಭಾಂಡಾರ ಕೊಡಕೊಳ್ಳುವ

ಯೋಜನೆಯನ್ನು ಸಂಘಟಿಸತಕ್ಕದ್ದು. ಪುಸ್ತಕಭಾಂಡಾರಗಳ ಸಂಯೋಜನೆಯ ಫಲ ಪರಸ್ಪರ ಸಹಕಾರದಿಂದ ದೊರಕುತ್ತದೆ. ಇಂತಹ ಸಹಕಾರದ ಪ್ರಕಾರ ಪುಸ್ತಕಭಾಂಡಾರಗಳು ಬೇರಾವ ಪುಸ್ತಕಭಾಂಡಾರದಿಂದ ತಮ್ಮಲ್ಲಿರುವ ಪುಸ್ತಕಗಳಿಗೆ ಬೇಡಿಕೆ ಬಂದಾಗ ಅನುಮಾನಿಸದೆ, ಅಸಂತೋಷ ಪಟ್ಟುಕೊಳ್ಳದೆ ಕಳಿಸಲಿಕ್ಕೆ ತಗಲುವ ವೆಚ್ಚವನ್ನೂ ಕೂಡ ತಾವೇ ವಹಿಸಿಕೊಂಡು ಕೇಳಿಕೊಂಡ ಪುಸ್ತಕಭಾಂಡಾರಕ್ಕೆ ಪುಸ್ತಕಗಳನ್ನು ಕಡ ಕೊಡಬೇಕಾಗುವದು. ಇದರಿಂದ ಪುಸ್ತಕಗಳ ಪ್ರಯೋಜನವು ನಿರ್ದಿಷ್ಟ ಪ್ರಮಾಣದಲ್ಲಿ ಬೇಕಾದಷ್ಟು ಜನರಿಗೆ ಒದಗುವದು.

ಇಂತಹ ಸಹಕಾರವನ್ನು ಸರಿಯಾಗಿ ತಿಳಿದುಕೊಳ್ಳ-ಲಿಕ್ಕೆ ಪ್ರಯೋಗದಲ್ಲಿರುವ ಒಂದು ವ್ಯವಸ್ಥೆಯನ್ನು ನೋಡಿದರೆ ಸಾಕು. ಇದಕ್ಕೆ ಸರಿಯಾದ ಉದಾಹರಣೆಯೆಂದರೆ ಪುಸ್ತಕ ಕಡ ಕೊಡುವದಕ್ಕೆ ಸಮಾನವಾದ ಆರ್ಥಿಕ ಸಾಲ-ಕೊಡುವದು. ಹಣ ಸಾಲಕೊಡಲಿಕ್ಕೆ ಸಹಕಾರಿ ಬ್ಯಾಂಕುಗಳ ವ್ಯವಸ್ಥೆಯುಂಟು. ಅವುಗಳಲ್ಲಿ ಕೇಂದ್ರ ಬ್ಯಾಂಕು, ಅದರ ಶಾಖೆ, ಅದರ ಹಣ ಪಾವತಿ ಮಾಡುವ ಕಚೇರಿ ಈ ರೀತಿಯಾಗಿ ಒಂದರಿಂದ ಮತ್ತೊಂದು ಹಣ ಪಡೆದುಕೊಳ್ಳುವ ವ್ಯವಸ್ಥೆ ಇದ್ದಂತೆ, ಪುಸ್ತಕಗಳನ್ನು ಕಡ ಕೊಡುವ ಕುರಿತು ಒಂದು ಕೇಂದ್ರ ಪುಸ್ತಕಭಾಂಡಾರ, ಅದರ ಆಧೀನ ಸಂಸ್ಥೆ-ಗಳು ಈ ಪ್ರಕಾರ ಕಡ ಕೊಡುವ ಸಲುವಾಗಿ ಸಂಘಟಿತ ಸಹಕಾರ ಪದ್ಧತಿಯು ಉಂಟಾಗುವದು.

ಹಿತಾಸಕ್ತಿ ವಹಿಸುವ ವ್ಯಕ್ತಿಗಳಿಂದ ಅವರ ಉಪಯೋಗಕ್ಕಾಗಿ ಪುಸ್ತಕಭಾಂಡಾರಗಳು ಹುಟ್ಟಿ ನಡೆದು ಬಂದಾಗ ಅಂಥ ಪುಸ್ತಕಭಾಂಡಾರಗಳು ತಮ್ಮಷ್ಟಕ್ಕೆ ತಾವೇ ಸ್ವತಂತ್ರ ರೀತಿಯಲ್ಲಿ–ಒಂದು ವ್ಯಾಪಕ ಕಾರ್ಯಕ್ರಮದಲ್ಲಿಯ ಘಟಕಗಳಾಗದೆ – ಇದ್ದವು. ಅವುಗಳಿಗೆ ಇತರ ಪುಸ್ತಕಭಾಂಡಾರಗಳ ಅರಿವು, ಅವುಗಳ ನಡುವೆ ಸಂಬಂಧ ಇವಾವೂ ಇದ್ದಿಲ್ಲ. ಸರಕಾರದವರು ಪುಸ್ತಕಭಾಂಡಾರ ಚಳವಳಿಯತ್ತ ಲಕ್ಷ್ಯ ಹರಿಸಿದಾಗ ಮತ್ತು ತಮ್ಮ ಕಾರ್ಯ ಹಾಗೂ ಪಾತ್ರಗಳನ್ನು ಕಂಡುಕೊಂಡಾಗ, ಇಂತಹ ಒಂದು ಪದ್ಧತಿಯ ಅರಿವು, ಅವಶ್ಯಕತೆ ಉಂಟಾದವು. ಸರಕಾರದವರು ಸಾರ್ವಜನಿಕ ಪುಸ್ತಕಭಾಂಡಾರಗಳನ್ನು ಬಿಡಿಬಿಡಿಯಾಗಿ ನೋಡದೆ ಅವುಗಳನ್ನು ಒಂದು ವ್ಯಾಪಕ ಹಾಗೂ ಸಮಗ್ರ ಪುಸ್ತಕಭಾಂಡಾರ ಚಳವಳಿಯಲ್ಲಿ ಅಂಗ ಪ್ರತ್ಯಂಗಗಳಾಗಿ ಗಣಿಸಬೇಕಾಯಿತು. ಆದಕಾರಣ ಸಮಗ್ರ ದೇಶದಾದ್ಯಂತ ಒಂದು ವಿಸ್ತೃತವಾದ ಪುಸ್ತಕಭಾಂಡಾರ ಪದ್ಧತಿಯನ್ನು ಸರಕಾರದವರು ರೂಪಿಸಬೇಕಾಯಿತು.

ಇನ್ನು ಇಂತಹ ಪದ್ಧತಿಯ ರೂಪರೇಷೆಗಳನ್ನು ನೋಡೋಣ. ಸಾರ್ವಜನಿಕ ಪುಸ್ತಕಭಾಂಡಾರಗಳ ವಿಷಯಕ್ಕೆ ಮೊಟ್ಟಮೊದಲು ಲಕ್ಷ್ಯ ಹಾಕಿದವರು ಈ ಹಿಂದೆ ದೇಶೀಯ ಸಂಸ್ಥಾನವಾಗಿದ್ದ ಬಡೋದೆ ಸರಕಾರದವರು. ಅವರಿಗೆ ಈ ದಿಶೆಯಲ್ಲಿ ಅಗ್ರಪಟ್ಟ ಸಲ್ಲುತ್ತದೆ. ಅದು ನಡೆದುದು ೧೯೧೦ರಲ್ಲಿ. ಆಗ್ಗೆ ಅವರು ಒಂದು ಕೇಂದ್ರ ಪುಸ್ತಕಭಾಂಡಾರ, ಜಿಲ್ಲಾ ಪುಸ್ತಕಭಾಂಡಾರ, ತಾಲೂಕಾ ಪುಸ್ತಕಭಾಂಡಾರ, ಪಟ್ಟಣ

ಪುಸ್ತಕಭಾಂಡಾರ, ಹಳ್ಳಿಯ ಪುಸ್ತಕಭಾಂಡಾರ ಈ ಪ್ರಕಾರವಾಗಿ ಒಂದು ಭದ್ರ ತಳಹದಿಯ ಮೇಲೆ ಅಂತಸ್ತು-ಅಂತಸ್ತಾಗಿ ಯೋಜನೆ ರಚಿಸಿದರು. ಈ ತರಹದ ಯೋಜನೆ ಮಾಡುವಾಗ ಕಾಲಕ್ರಮೇಣ ಪರಸ್ಪರ ಸಂಯೋಜನೆ, ಸಹಕಾರ ಉಂಟುಮಾಡಬೇಕೆಂಬುದೇ ಉದ್ದೇಶವಾಗಿತ್ತು. ಅದಕ್ಕೆ ಬುನಾದಿಯಾಗಿ ಕೇಂದ್ರ ಪುಸ್ತಕಭಾಂಡಾರದಿಂದ ಹಳ್ಳಿಯ ಪುಸ್ತಕಭಾಂಡಾರಗಳಿಗೆ ಪುಸ್ತಕ ಪರಿಚಾಲನೆ, ವಿತರಣೆ ಪ್ರಾರಂಭಿಸಿ ನಡೆಯಿಸಲಾಗುತ್ತಿತ್ತು. ಆದರೆ ಯೋಚಿತ ಸಂಯೋಜನೆ, ಸಹಕಾರಗಳು ಅನೇಕ ಕಾರಣಗಳಿಂದಾಗಿ ಅಸ್ತಿತ್ವದಲ್ಲಿ ಬರಲೇ ಇಲ್ಲ. ಜಿಲ್ಲೆ, ತಾಲೂಕು, ಪಟ್ಟಣ, ಹಳ್ಳಿ ಈ ಪ್ರಕಾರ ಪುಸ್ತಕಭಾಂಡಾರಗಳ ದರ್ಜಾಕ್ರಮ ವಿಂಗಡಣೆಯು ಅವುಗಳಿಗೆ ಬೇರೆ ಬೇರೆ ಪ್ರಮಾಣದ ಸಹಾಯ ಧನವನ್ನು ಕೊಡಲಿಕ್ಕೆ ಮಾತ್ರ ಉಪಯೋಗವಾಯಿತು.

ಭಾರತದಲ್ಲಿ ಈ ಬಗೆಯ ಸಾರ್ವಜನಿಕ ಪುಸ್ತಕಭಾಂಡಾರ ಪದ್ಧತಿಯನ್ನು ನಿರ್ಮಿಸಿದ ಎರಡನೆಯ ಸರಕಾರವೆಂದರೆ ಹಿಂದಿನ ಮುಂಬಯಿ ಸರಕಾರ. ಸಮಗ್ರವಾಗಿ ಪರಿಶೀಲಿಸಿ ಯೋಗ್ಯವಾದ ಒಂದು ಪದ್ಧತಿಯನ್ನು ಶಿಫಾರಸು ಮಾಡಲಿಕ್ಕೆ ಆಗಿನ ಮುಂಬಯಿ ಸರಕಾರದವರು ಫೈಜಿ ಸಮಿತಿಯನ್ನು ನೇಮಿಸಿದರು. ಅವರ ವರದಿಯು ೧೯೪೦ ರಲ್ಲಿ ಪ್ರಕಟವಾಯಿತು. ಈ ಸಮಿತಿಯವರು ಬಡೋದೆಯ ಪದ್ಧತಿಯನ್ನೇ ಅಂಗೀಕಾರ ಮಾಡಿ ಅದರಂತೆಯೇ ರಾಜ್ಯಕೇಂದ್ರ, ಪ್ರಾದೇಶಿಕ, ಜಿಲ್ಲೆ, ತಾಲೂಕು, ಪಟ್ಟಣ ಮತ್ತು ಹಳ್ಳಿ ಈ

ಪ್ರಕಾರ ವಿವಿಧ ಮಟ್ಟದ ಪುಸ್ತಕಭಾಂಡಾರಗಳುಂಟಾಗಿ ಕಾಲಾವಕಾಶದಲ್ಲಿ ಪುಸ್ತಕಭಾಂಡಾರ ಸಂಯೋಜನೆ, ಸಹಕಾರಗಳು ಉಂಟಾಗುವವು ಎಂದು ಗ್ರಹಿಸಿದ್ದರು. ಈ ಬಗೆಗೆ ಅವರು ಹೇಳಿರುವದೇನಂದರೆ—

"ಕೇಂದ್ರ ಮತ್ತು ಪ್ರಾದೇಶಿಕ ಪುಸ್ತಕಭಾಂಡಾರಗಳ ಮುಖ್ಯ ಹೊಣೆಯು, ಪ್ರಾಂತದಲ್ಲಿಯ ಪುಸ್ತಕಭಾಂಡಾರಗಳಲ್ಲಿರುವ ಎಲ್ಲ ಬಗೆಯ ಪುಸ್ತಕಗಳು ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಲಭ್ಯವಾಗುವಂತೆ ಮಾಡುವದಕ್ಕಾಗಿ ಪ್ರಾಂತದಲ್ಲಿಯ ಪುಸ್ತಕಭಾಂಡಾರ ಪದ್ಧತಿಯನು ಏಕೀಕರಿಸುವದಾಗಿದೆ. ಇದು ಅಂತರ ಪುಸ್ತಕಭಾಂಡಾರ ಸಹಕಾರದ ಅಂತಿಮ ಗುರಿಯಾಗಿರುವುದರಿಂದ ಕೇಂದ್ರ ಮತ್ತು ಪ್ರಾದೇಶಿಕ ಪುಸ್ತಕಭಾಂಡಾರಗಳು ಯೋಗ್ಯವಾಗಿ ತರಬೇತಿ ಹೊಂದಿದ ಸಿಬ್ಬಂದಿಯ ವ್ಯವಸ್ಥೆಯಲ್ಲಿರಬೇಕಾಗುವವು." ಅವರು ಮತ್ತೂ ಹೇಳಿರುವದೇನಂದರೆ "ಸಮಗ್ರ ಪ್ರಾಂತದಲ್ಲಿ ಹಳ್ಳಿಯ ಪುಸ್ತಕಭಾಂಡಾರ ಆದಿಯಾಗಿ ಕೇಂದ್ರ ಪುಸ್ತಕಭಾಂಡಾರ ಕೊನೆಯಾಗಿ ಪುಸ್ತಕಭಾಂಡಾರಗಳ ಒಂದು ಜಾಲವನ್ನು ಹಬ್ಬಿಸಬೇಕೆಂದು ಸರಕಾರದವರ ಇಚ್ಛೆಯಾಗಿದೆಯೆಂದು ಈ ಮೊದಲೇ ನಾವು ಉಲ್ಲೇಖಿಸಿದ್ದೇವೆ. ಹಳ್ಳಿಯ ಪುಸ್ತಕಭಾಂಡಾರ ಮತ್ತು ಕೇಂದ್ರ ಪುಸ್ತಕಭಾಂಡಾರ ಇವೆರಡು ತುದಿಗಳ ನಡುವೆ ಜಿಲ್ಲಾ ಮತ್ತು ತಾಲೂಕು ಪುಸ್ತಕಭಾಂಡಾರಗಳಿರುತ್ತವೆ. ಮತ್ತು ಇವೆಲ್ಲ ಪುಸ್ತಕಭಾಂಡಾರಗಳ ನಡುವೆ ಸಹಕಾರವನ್ನು ನಾವು ನಿರೀಕ್ಷಿಸಿದ್ದೇವೆ."

ಈ ವಿಷಯವನ್ನು ಭಾರತದಾದ್ಯಂತ ವಿಚಾರಿಸಿದ ಕೇಂದ್ರ ಸರಕಾರದಿಂದ ನಿಯಮಿಸಲ್ಪಟ್ಟ ಸಿನ್ಹ ಸಮಿತಿ (೧೯೫೯) ಯುವರು ರಾಜ್ಯ ಕೇಂದ್ರ ಪುಸ್ತಕಭಾಂಡಾರ, ಜಿಲ್ಲಾ ಪುಸ್ತಕ ಭಾಂಡಾರ, ಬ್ಲಾಕ್ ಪುಸ್ತಕಭಾಂಡಾರ, ನಗರ ಪುಸ್ತಕ ಭಾಂಡಾರ ಹಾಗೂ ಪಂಚಾಯತಿ ಪುಸ್ತಕಭಾಂಡಾರ ಈ ಪ್ರಕಾರ ಒಂದು ಸುಸಂಬದ್ಧ ಪದ್ಧತಿಯನ್ನು ಶಿಫಾರಸು ಮಾಡಿದ್ದಾರೆ. ಅವರು ಪುಸ್ತಕಭಾಂಡಾರ ಪದ್ಧತಿಯನ್ನು ಕುರಿತು ಹೀಗೆ ಹೇಳಿದ್ದಾರೆ. "ಪದ್ಧತಿ ಶಬ್ದವು ಮಹತ್ವಪೂರ್ಣ ವಾಗಿದೆ; ಯಾಕಂದರೆ ಅದು ತಾಳಮೇಳ, ಸಂಘಟನೆ ಹಾಗೂ ಜನತೆಗೆ ನಿರಂತರ ಸೇವೆ ಎಂದು ಅರ್ಥವಾಗುತ್ತದೆ."

ತರುವಾಯದಲ್ಲಿ (೧೯೬೩) ಮೈಸೂರು ಸಾರ್ವಜನಿಕ ಪುಸ್ತಕಭಾಂಡಾರ ಮಸೂದೆ ಸಮಿತಿಯು ಇದನ್ನೇ ಲಕ್ಷ್ಯ ದಲ್ಲಿಟ್ಟುಕೊಂಡು ಒಂದು ರಾಜ್ಯ ಕೇಂದ್ರ ಪುಸ್ತಕಭಾಂಡಾರ ಹಾಗೂ ಅದರ ಕಕ್ಷೆಯಲ್ಲಿ ನಗರ ಕೇಂದ್ರ ಪುಸ್ತಕಭಾಂಡಾರ ಮತ್ತು ಜಿಲ್ಲಾ ಕೇಂದ್ರ ಪುಸ್ತಕಭಾಂಡಾರ—ಕೇಂದ್ರ ಪುಸ್ತಕ ಭಾಂಡಾರ, ಅದರ ಶಾಖೆಗಳು, ಸೇವಾಕೇಂದ್ರಗಳು ಇವುಗಳ ನ್ನೊಳಗೊಂಡ— ಇವುಗಳಿಂದ ಉಂಟಾದ ಪದ್ಧತಿಯನ್ನು ಸೂಚಿಸಿತು. ಈ ತಳಹದಿಯ ಮೇಲೆ ಮೈಸೂರು ಪುಸ ಕ-ಭಾಂಡಾರಗಳ ಕಾಯದೆ (೧೯೬೫) ಆಗಿದೆ. ಅಲ್ಲದೆ ಪುಸ್ತಕ ಭಾಂಡಾರ ಸಹಕಾರವನ್ನು ಸ್ಪಷ್ಟವಾಗಿ ನಿರ್ದೇಶಿಸಿ, ಆ ಕಾಯದೆಯ ಕಲಮು ೩೭ (೩) (ಅ) ಮತ್ತು (ಬ) ಗಳಲ್ಲಿ ಮುಂದಿನಂತೆ ಉಲ್ಲೇಖಿಸಿದೆ.

" ೩೭ (೩) (ಅ) ರಾಜ್ಯ ಅಂತರ–ಪುಸ್ತಕಭಾಂಡಾರ ಕಡಕೊಡುವ ಕಾರ್ಯಶಾಲೆಯು ಸಾರ್ವಜನಿಕ ಪುಸ್ತಕ ಭಾಂಡಾರ, ಶೈಕ್ಷಣಿಕ ಪುಸ್ತಕಭಾಂಡಾರ, ಸರಕಾರೀ ಪುಸ್ತಕ ಭಾಂಡಾರ, ಸಹಾಯಧನ ಪಡೆಯುವ ಪುಸ್ತಕಭಾಂಡಾರ ಮತ್ತು ರಾಜ್ಯದಲ್ಲಿರುವ ಬಾಹ್ಯ (Outlier) ಪುಸ್ತಕ-ಭಾಂಡಾರ ಇವುಗಳಲ್ಲಿ ಇಂತಹ ಅಂತರ–ಪುಸ್ತಕಭಾಂಡಾರ ಕಡಕೊಡುವ ಯೋಜನೆಯನ್ನು ಜಾರಿಯಲ್ಲಿ ತರುವದು.

"(ಬ) ರಾಜ್ಯ ಕೇಂದ್ರ ಪುಸ್ತಕಭಾಂಡಾರವು ರಾಜ್ಯ ಸರಕಾರದ ಮಂಜೂರಿ ಪಡೆದು ಯಾವುದೇ ಅಂತರ–ರಾಜ್ಯ ಪುಸ್ತಕಭಾಂಡಾರ ಕಡ ಕೊಡುವ ಯೋಜನೆಯಲ್ಲಿ ಪಾಲುಗೊಳ್ಳ ಬಹುದು."

ಇದರಿಂದ ಸಾರ್ವಜನಿಕ ಪುಸ್ತಕಭಾಂಡಾರ ಸೇವೆಯು ಪೂರ್ಣ ತೃಪ್ತಿಕರವಾಗಿ ಹಾಗೂ ದಕ್ಷವಾಗಿ ಸಾಗಬೇಕಾದರೆ ಒಂದು ಪ್ರದೇಶದಲ್ಲಿಯ ಎಲ್ಲ ಪುಸ್ತಕಭಾಂಡಾರಗಳನ್ನು ಸುಸಂಬದ್ಧ ಪದ್ಧತಿಯಲ್ಲಿ ಸಂಘಟಿಸಿ ಅವುಗಳಲ್ಲಿ ಪರಸ್ಪರ ಸಹಕಾರವನ್ನು ಉಂಟುಮಾಡುವದು ಅವಶ್ಯವೆಂದು ಕಂಡು ಬರುತ್ತದೆ.

೫. ರೀತಿ ನೀತಿ

ಪುಸ್ತಕಭಾಂಡಾರಗಳು ವಿದ್ಯೆ, ಸಂಸ್ಕೃತಿಗಳ ಅಭಿವೃದ್ಧಿಗೆ ಹಾಗೂ ರಾಜಕೀಯ ಬೆಳವಣಿಗೆಗೆ ಅವಶ್ಯವಾದ ಸಂಸ್ಥೆಗಳೆಂಬುವವನ್ನು ಯಾರೂ ಅಲ್ಲಗಳೆಯಲಾರರು. ಎಲ್ಲ ಸರಕಾರದವರು ಇದನ್ನು ಒಪ್ಪಿಕೊಳ್ಳುತ್ತಾರೆ. ಹಾಗಾದರೆ ಸಾರ್ವಜನಿಕ ಪುಸ್ತಕಭಾಂಡಾರಗಳ ಕುರಿತು ಸರಕಾರದವರ ರೀತಿ ನೀತಿ ಏನು? ಅವುಗಳ ಹೊಣೆ ಸಂಪೂರ್ಣವಾಗಿ ಸಮಾಜದ ಮೇಲಿರಬೇಕೋ? ಅವು ಸ್ಥಳಿಕ ಸಂಸ್ಥೆಗಳಾದುದರಿಂದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಾದ ಲೋಕಲ್ ಬೋರ್ಡ ಮುನಸಿಪಾಲಿಟಿ, ಗ್ರಾಮ ಪಂಚಾಯಿತಿ ಇವುಗಳ ಮೇಲೆ ಪುಸ್ತಕಭಾಂಡಾರಗಳ ಹೊಣೆ ಹೊರಿಸಬೇಕೋ? ಸರಕಾರದವರೇ ಮುಂದೆ ಬಂದು ಶಿಕ್ಷಣದ ಬಗ್ಗೆ ಹೊಣೆ ಹೊತ್ತಂತೆ ತಾವೇ ಸಾರ್ವಜನಿಕ ಪುಸ್ತಕಭಾಂಡಾರಗಳ ಬಗೆಗೂ ಕೂಡ ಸಂಪೂರ್ಣ ಹೊಣೆ ವಹಿಸಬೇಕೋ? ಜನತೆ, ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಮತ್ತು ಸರಕಾರ ಇವರೆಲ್ಲರೂ ಜೊತೆ-ಗೂಡಿ ಸಾರ್ವಜನಿಕ ಪುಸ್ತಕ ಭಾಂಡಾರಗಳನ್ನು ನಡೆಯಿಸ-ಬೇಕೋ? ಇವೆಲ್ಲ ಸಮಂಜಸ ಪ್ರಶ್ನೆಗಳಾಗಿವೆ. ಪ್ರಾರಂಭದಲ್ಲಿ ಅವು ಸಂಪೂರ್ಣವಾಗಿ ಜನತೆಯ ಸಂಸ್ಥೆಗಳಾಗಿ ಹುಟ್ಟಿ ಬೆಳೆದುವು. ನಂತರ ಸಾರ್ವಜನಿಕರ, ಸ್ಥಾನಿಕ ಸಂಸ್ಥೆಗಳ ಗಮನ ಸೆಳೆದಾಗ ಅವುಗಳಿಂದ ಅಲ್ಪ ಸ್ವಲ್ಪ ಸಹಾಯ ಪ್ರೋತ್ಸಾಹಗಳನ್ನು ಪಡೆದವು. ಇತ್ತಿತ್ತಲಾಗಿ ಎಲ್ಲ ಸರಕಾರ

ಗಳೂ ಅವುಗಳಿಗೆ ಮನ್ನಣೆ ನೀಡಿ ಸಹಾಯ ಧನವನ್ನು ಕೊಡುತ್ತಿವೆ.

ಮೊದಲು ಬಡೋದೆ ಸಂಸ್ಥಾನದಲ್ಲಿ ಈ ಕುರಿತು ಆರ್ಥಿಕ ಹೊಣೆಯನ್ನು ಸಂಬಂಧಿಸಿದ ಮೂವರೊಳಗೆ ಸಮಾನವಾಗಿ ಹಂಚಲಾಯಿತು. ಪುಸ್ತಕಭಾಂಡಾರಗಳನ್ನು ನಡೆಯಿಸಲಿಕ್ಕೆ ಅವಶ್ಯವಿದ್ದ ಹಣದ ಜವಾಬ್ದಾರಿಯು ಜನತೆ, ಲೋಕಲ್ ಬೋರ್ಡ ಇಲ್ಲವೆ ಮುನಸಿಪಾಲಿಟಿ ಇಲ್ಲವೆ ಗ್ರಾಮಪಂಚಾಯತಿ ಮತ್ತು ಸರಕಾರ ಈ ಮೂವರು ಸಮಸಮನಾಗಿ ಹಣ ಕೊಡುವಂತೆ ಇತ್ತು. ಹಾಗೂ ಸರಕಾರದವರು ತಾವು ಕೊಡಬೇಕಾದ ಸಹಾಯಧನದ ಪರಮಾವಧಿಯನ್ನು ಗೊತ್ತುಪಡಿಸಿದರು. ಈ ಸಹಾಯಧನವು ಪುಸ್ತಕಭಾಂಡಾರಗಳ ತರಗತಿಯ ಪ್ರಕಾರ ನಿರ್ಣಯವಾಗಿತ್ತು.

ತದನಂತರ ೧೯೪೬ರಲ್ಲಿ ಪುಸ್ತಕಭಾಂಡಾರ ಚಳವಳಿಯನ್ನು ಒಂದು ನಿರ್ದಿಷ್ಟ ಯೋಜನೆಯ ಪ್ರಕಾರ ಪ್ರಾರಂಭಿಸಿದ ಮುಂಬಯಿ ಸರಕಾರವು ಸಹ ಇದೇ ರೀತಿ ನೀತಿಯನ್ನು ಅನುಸರಿಸಿತು. ಆದರೆ ಇವರು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಸಹಾಯಧನ ಕೊಡಬೇಕೆಂಬ ಕಟ್ಟುಪಾಡು ಹಾಕಲಿಲ್ಲ. ಅದು ಆ ಸಂಸ್ಥೆಗಳ ಇಚ್ಛೆ ಹಾಗೂ ಸದಭಿಪ್ರಾಯಗಳ ಮೇಲೆ ಅವಲಂಬಿಸಿತ್ತು. ಅವರು ಯೋಗ್ಯ ಕಂಡರೆ ತಮಗೆ ಸರಿದೋರಿದಷ್ಟು ಸಹಾಯಧನವನ್ನು ಕೊಡಬಹುದು ಇಲ್ಲವೆ ಬಿಡಬಹುದು. ಸರಕಾರದವರು ಮಾತ್ರ ಆಯಾ ಪುಸ್ತಕಭಾಂಡಾರಗಳ ಸಂಚಾಲಕರು ಕೂಡಿಸಿದ ಹಣಕ್ಕೆ ಸಮ–

ನಾದಷ್ಟು, ಬೇರೆ ಬೇರೆ ತರಗತಿಯ ಪುಸ್ತಕಭಾಂಡಾರಗಳಿಗೆ ನಿರ್ದಿಷ್ಟಗೊಳಿಸಿದ ಪರಮಾವಧಿಗೆ ಮಿಕ್ಕದಂತೆ, ಸಹಾಯಧನವನ್ನು ಕೊಡುತ್ತಿದ್ದರು.

ಈ ಪ್ರಕಾರ ಪುಸ್ತಕಭಾಂಡಾರಗಳನ್ನು ನಡೆಯಿಸಿಕೊಂಡು ಹೋಗುವ ಹೊಣೆಯನ್ನು ಜನತೆಯ ಮೇಲೆ ಹೊರಿಸಿ, ಅವುಗಳು ಮಾಡುವ ಕಾರ್ಯವು ಸಾರ್ವಜನಿಕರಿಗೆ ಹಿತಕರವಾದುದೆಂದು ಮನ್ನಿಸಿ, ಅವುಗಳಿಗೆ ಧನ ಸಹಾಯ ರೂಪದಲ್ಲಿ ಪ್ರೋತ್ಸಾಹ ಕೊಡುವದು ಒಂದು ದುರ್ಬಲ ನೀತಿಯಾಗಿತ್ತು. ಏಕೆಂದರೆ-

(೧) ಓದುಗರಿಂದ ಶುಲ್ಕ ಪಡೆಯಬೇಕಾಗುತ್ತಿತ್ತು.

(೨) ಆ ಶುಲ್ಕವು ತಕ್ಕಮಟ್ಟಿಗೆ ದೊರಕದ್ದರಿಂದ ಸಾರ್ವಜನಿಕ ದೇಣಿಗೆ ಹಾಗೂ ಇತರ ಸಹಾಯಗಳಿಗೆ ಮೊರೆ ಹೋಗಬೇಕಾಗುತ್ತಿತ್ತು.

(೩) ಮೇಲಿನ ಕಾರಣಗಳಿಂದ ಆರ್ಥಿಕ ಪರಿಸ್ಥಿತಿಯು ಅನಿಶ್ಚಿತವಿತ್ತು.

(೪) ಸರಕಾರದ ಸಹಾಯಧನದ ನಿಯಮಗಳಿಗನುಸಾರವಾಗಿ ಹಣ ದೊರಕಿಸಿ ಸರಕಾರಿ ಸಹಾಯಧನ ಪಡೆವರೂ ಅಷ್ಟು ಹಣವು ಪುಸ್ತಕಭಾಂಡಾರದ ತಕ್ಕ ಹಾಗೂ ಸರಿಯಾದ ವ್ಯವಸ್ಥೆಗೆ ಸಾಕಾಗುತ್ತಿದ್ದಿಲ್ಲ. ಮತ್ತು

(೫) ಪುಸ್ತಕಭಾಂಡಾರ ಸೇವೆಯು ಪುಕ್ಕಟೆಯಾಗಿರುತ್ತಿದ್ದಿಲ್ಲ.

ಇಂಥ ದುರ್ಬಲತೆಗಳನ್ನೊಳಗೊಂಡ ಪದ್ಧತಿಯು ಸಮರ್ಪಕವಾಗಿ, ಪ್ರಗತಿಪರವಾಗಿ ನಡೆಯಲಾರದೆಂದು ಬೇರೆ

ಹೇಳಬೇಕಾಗಿಲ್ಲ. ಇದರ ಪರಿಣಾಮವಾಗಿ ಪುಸ್ತಕಭಾಂಡಾರಗಳ ಸಂಖ್ಯೆಯೇನೋ ಬೆಳೆಯಿತು. ಆದರೆ ಅವುಗಳಲ್ಲಿ ಯೋಗ್ಯತೆ ಹಾಗೂ ಗುಣಗಳಿರಲಿಲ್ಲ. ಕೇಂದ್ರ ಸರಕಾರದವರಿಂದ ನಿಯಮಿತವಾದ ಪುಸ್ತಕಭಾಂಡಾರ ಸಲಹಾಸಮಿತಿ (೧೯೫೮)ಯು ತನ್ನ ವರದಿಯಲ್ಲಿ ಇವುಗಳ ಬಗೆಗೆ ಈ ಪ್ರಕಾರ ಉಲ್ಲೇಖಿಸಿದೆ—

"೧೯೫೪ ಮಾರ್ಚ ತಿಂಗಳ ಕೊನೆಗೆ ಭಾರತದಲ್ಲಿ ಸುಮಾರು ೩೨,೦೦೦ ಪುಸ್ತಕಭಾಂಡಾರಗಳಿದ್ದವು ಅವುಗಳಲ್ಲಿ ಅನೇಕ ತೀರ ಚಿಕ್ಕ ಹಾಗೂ ನಿರುಪಯುಕ್ತ ಪುಸ್ತಕ ಸಂಗ್ರಹವುಳ್ಳವಾಗಿದ್ದವು. ಅವುಗಳಲ್ಲಿ ೬೧ ಲಕ್ಷಕ್ಕಿಂತಸ್ವಲ್ಪ ಹೆಚ್ಚು ಪುಸ್ತಕ ಸಂಗ್ರಹವಿತ್ತು. ಅವುಗಳಲ್ಲಿರುವ ಉಪಯೋಗಿಸಿದ ಪುಸ್ತಕಗಳ ಸಂಖ್ಯೆಯು ವರ್ಷದಲ್ಲಿ ೩೬೭ ಲಕ್ಷದಷ್ಟಿತ್ತು. ರಾಷ್ಟ್ರವು ಇಂತಹ ಸೇವೆಯ ಮೇಲೆ ಅರ್ಧ-ಕೋಟಿಗಿಂತಲೂ ಕಡಿಮೆ ರೂಪಾಯಿಗಳನ್ನು ವೆಚ್ಚ ಮಾಡುತ್ತಿತ್ತು. ಲಕ್ಷಗಟ್ಟಲೆ ಇರುವ ಈ ಸಂಖ್ಯೆಯು ದೊಡ್ಡದಾಗಿ ಕಂಡುಬಂದರೂ, ಸಾರ್ವಜನಿಕ ಪುಸ್ತಕ ಭಾಂಡಾರಗಳು ೫೦ ಜನರಿಗೆ ಒಂದರಂತೆ ಪುಸ್ತಕಗಳನ್ನು ಹೊಂದಿದ್ದವು. ಮತ್ತು ಪುಸ್ತಕ ಓದಿದ ಪ್ರಮಾಣವು ವರ್ಷದಲ್ಲಿ ಪ್ರತಿ ೨೦ ಜನರಿಗೆ ಒಂದರಷ್ಟು ಇತ್ತು. ಸಾಕ್ಷರ ವಯಸ್ಕರ ಸಂಖ್ಯೆಯನ್ನಷ್ಟೇ ಲೆಕ್ಕಕ್ಕೆ ಹಿಡಿದರೂ, ಒಬ್ಬ ವಯಸ್ಕನು ವರ್ಷದಲ್ಲಿ ಒಂದೇ ಪುಸ್ತಕವನ್ನು ಓದುತ್ತಾನೆ. ಹಣದ ವಿಷಯವಾಗಿ ಹೇಳಬೇಕಾದರೆ, ಐವರು ಭಾರತೀಯರು ಕೂಡಿ ವರ್ಷಕ್ಕೆ

ಆರು ಪೈಸೆಯಷ್ಟು – ಒಬ್ಬರು ಎರಡು ಪೈಸೆಗಿಂತಲೂ ಕಡಿಮೆ ಪುಸ್ತಕಭಾಂಡಾರ ಸೇವೆಗಾಗಿ ಕೊಡುತ್ತಾರೆ."

ಈ ಉಲ್ಲೇಖವು ಸಾಮಾನ್ಯವಾಗಿ ಸಹಾಯಧನ ಪದ್ಧತಿಯ ಮೂಲಕ ಸಾಗಿದ ಸಾರ್ವಜನಿಕ ಪುಸ್ತಕ ಭಾಂಡಾರ ಸೇವೆಯು ಅಷ್ಟು ಉತ್ಸಾಹದಾಯಕವಾಗಿಲ್ಲವೆಂದು ಅಷ್ಟೇ ಅಲ್ಲ ಪ್ರತಿಯಾಗಿ ಅತೃಪ್ತಿಕರವಾಗಿದೆಯೆಂಬುದನ್ನು ಸ್ಪಷ್ಟಪಡಿಸಲು ಸಾಕು.

——

೬. ಕಾಯಿದೆ ಏಕೆ ಬೇಕು ?

ಜನತೆಯೊಡನೆ ಪಾಲುಗೊಂಡು ಅವರ ಉತ್ಸಾಹ, ಪ್ರಯತ್ನ, ಪ್ರೋತ್ಸಾಹ, ಪುರಸ್ಕಾರಗಳನ್ನು ಅವಲಂಬಿಸಿ ಅವು-ಗಳಿಂದೊದಗಿದ ಆರ್ಥಿಕ ಇತಿ ಮಿತಿಗಳೊಳಗೆ ಪುಸ್ತಕ ಭಾಂಡಾರಗಳನ್ನು ನಡೆಯಿಸಿಕೊಂಡು ಹೋಗುವದು ವಿಫಲ-ವೆಂದು ಕಂಡುಬಂದಿದೆ. ಆದಕಾರಣ ಸರಕಾರವೇ ಪುಸ್ತಕ ಭಾಂಡಾರ ಸೇವೆಯ ಸಂಪೂರ್ಣ ಹೊಣೆ ಹೊತ್ತು ಸಾರ್ವಜನಿಕ ರಿಂದ ಯಾವ ಆರ್ಥಿಕ ಸಹಾಯವನ್ನೂ ನಿರೀಕ್ಷಿಸದೆ ಸಾರ್ವಜನಿಕ ಹಣದಿಂದಲೇ ಸಾರ್ವಜನಿಕ ಪುಸ್ತಕ ಭಾಂಡಾರಗಳನ್ನು ನಡೆ-ಯಿಸಿಕೊಂಡು ಹೋಗುವದು ಯುಕ್ತವಾಗಿದೆಯೆಂದು ಹೊಳೆ ದಿದೆ. ಅದು ಅಲ್ಲದೆ ಈ ದಿಶೆಯಲ್ಲಿ ಸರಕಾರದವರ ಘಟನಾತ್ಮಕ ಹೊಣೆಯೂ ಉಂಟು. ಇದನ್ನು ಮೈಸೂರು ಸರಕಾರದವರು ನಿಯಮಿಸಿದ ಸಾರ್ವಜನಿಕ ಪುಸ್ತಕ ಭಾಂಡಾರ ಮಸೂದೆ ಕಮಿಟಿಯು ವರದಿಯಲ್ಲಿ ಈ ಪ್ರಕಾರ ಕಾಣಿಸಿದೆ –

ಸಾರ್ವಜನಿಕ ಪುಸ್ತಕಭಾಂಡಾರ ಕಾಯಿದೆಯು ಸಾಮಾ-ಜಿಕ ಕಾಯದೆಗಳ ಮಾಲಿಕೆಯಲ್ಲಿ ಸೇರಿದೆ. ಇದು ಭಾರತದ ಸಂವಿಧಾನದ ‘ ರಾಜ್ಯ-ನೀತಿಯ ನಿರ್ದೇಶಕ ತತ್ವ ’ ಗಳಲ್ಲಿ ಅಡಕವಾಗಿದೆ. ರಾಜ್ಯವು ಜನತೆಯ ಕಲ್ಯಾಣವನ್ನು ಸಾಧಿಸ-ಬೇಕು. ಅದರ ಸಲುವಾಗಿ ರಾಜ್ಯ ಸರಕಾರವು ತನ್ನ ಆರ್ಥಿಕ ಶಕ್ತಿ ಹಾಗೂ ಬೆಳವಣಿಗೆಯ ಅಳವಿನಲ್ಲಿ ಜನತೆಯು ಶಿಕ್ಷಣ ಪಡೆಯಲಿಕ್ಕೆ ಯೋಗ್ಯ ವ್ಯವಸ್ಥೆಯನ್ನು ಮಾಡಬೇಕು. ಸಾರ್ವಜನಿಕ ಪುಸ್ತಕ ಭಾಂಡಾರ ವ್ಯವಸ್ಥೆಯು ಜನತೆಯ

ಸ್ವಯಂ-ಶಿಕ್ಷಣಕ್ಕೆ ಅಗತ್ಯ, ಹಾಗೂ ಅದು ಒಂದು ಮನ್ನಣೆ-ವೆತ್ತ ಸಾಧನವಾಗಿರುತ್ತದೆ. ಆದುದರಿಂದ ಪುಸ್ತಕಭಾಂಡಾರ ಕಾಯದೆಯು ಸಂವಿಧಾನದಲ್ಲಿ ನಿರೂಪಿಸಿರುವ ಉದ್ದೇಶಗಳನ್ನು ಹಾಗೂ ಜನತೆಯ ಆಶೋತ್ತರಗಳನ್ನು ಈಡೇರಿಸುವಂತಹ-ದಾಗಿರಬೇಕು.

ಸಾರ್ವಜನಿಕ ಪುಸ್ತಕಭಾಂಡಾರ ವ್ಯವಸ್ಥೆಗೆ ಒಂದು ಪ್ರತ್ಯೇಕ ಕಾಯದೆ ಇರಬೇಕೆಂಬ ಅಭಿಪ್ರಾಯವನ್ನು ಕೇಂದ್ರ ಸರಕಾರದವರು ನಿಯಮಿಸಿದ ಪುಸ್ತಕಭಾಂಡಾರ ಸಲಹಾ ಸಮಿತಿಯು ಅನುಮೋದಿಸಿದೆ. ಕಾಯದೆಯು ರಾಜ್ಯದಲ್ಲಿ ಒಂದೇ ತರಹದ ಹಾಗೂ ಏಕತ್ರಿತ ಪುಸ್ತಕಭಾಂಡಾರ ಸೇವೆ-ಯನ್ನು ಒದಗಿಸುತ್ತದೆ; ಮತ್ತು ಸಾರ್ವಜನಿಕ ಪುಸ್ತಕ ಭಾಂಡಾರಗಳನ್ನು ನಡೆಯಿಸಿಕೊಂಡು ಹೋಗುವ ಸರಕಾರದ ಹೊಣೆಯನ್ನು ದೃಢಪಡಿಸುತ್ತದೆ ಎಂಬುದಾಗಿ ಸಮಿತಿಯ ವರದಿಯಲ್ಲಿ ಸ್ಪಷ್ಟವಾಗಿ ಕಾಣಿಸಲಾಗಿದೆ.

ಹೀಗಿದ್ದರೂ ಕೂಡ ಭಾರತದಲ್ಲಿ ಎಲ್ಲ ರಾಜ್ಯಗಳಲ್ಲಿ ಪುಸ್ತಕಭಾಂಡಾರ ಕಾಯದೆ ಆಗಿಲ್ಲ. ಇನ್ನೂ ಹಲವು ರಾಜ್ಯ-ಗಳು ಕಾಯದೆಯ ಆವಶ್ಯಕತೆ ಇಲ್ಲದೆ ಈಗಿರುವಂತೆಯೇ ಸಹಾಯಧನ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಅಭಿಪ್ರಾಯವುಳ್ಳವುಗಳಾಗಿವೆ. ಏಕೆಂದರೆ, ಕಾಯದೆ ಮಾಡಬೇಕಾದರೆ ಅವಶ್ಯವಾಗಿ ಪುಸ್ತಕ ಭಾಂಡಾರ ಸುಂಕ (cess) ವನ್ನು ಹೇರಬೇಕಾಗುವದು. ಆದರೆ ಸುಂಕ ಹೇರುವದಕ್ಕೆ ಸಾರ್ವಜನಿಕ ಅಭಿಪ್ರಾಯ ಅನುಕೂಲ ವಿಲ್ಲೆಂದು ಹೇಳುತ್ತಾರೆ. ಸುಂಕ ಹೇರುವ ಯುಕ್ತಾಯುಕ್ತ

ತೆಯ ಬಗೆಗೆ ಸಾರ್ವಜನಿಕಾಭಿಪ್ರಾಯವನ್ನು ಪುಸ್ತಕಭಾಂಡಾರ ಸಲಹಾ ಸಮಿತಿಯ ವರದಿ (೧೯೫೮) ಯಲ್ಲಿ ಈ ಪ್ರಕಾರವಾಗಿ ಉಲ್ಲೇಖಿಸಲಾಗಿದೆ.

ಜಗತ್ತಿನ ಬಹು ಭಾಗದಲ್ಲಿ ಮತ್ತು ಭಾರತದ ಮೂರು ರಾಜ್ಯಗಳಲ್ಲಿ ಪುಸ್ತಕ ಭಾಂಡಾರಗಳ ಆದಾಯವು ಮೂಲತಃ ಒಂದು ವಿಶಿಷ್ಟ ತರಹದ ಸುಂಕದಿಂದ ಬರುತ್ತದೆ. ಇಂತಹ ಸುಂಕದ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯವು ತೀರ ಭಿನ್ನವಾಗಿರುತ್ತದೆ. ದಕ್ಷಿಣದ ನಾಲ್ಕು ರಾಜ್ಯಗಳ ಹೊರತಾಗಿ ಇತರ ರಾಜ್ಯಗಳಲ್ಲಿ ಶಾಸಕರ, ಅಧಿಕಾರಿಗಳ ಹಾಗೂ ಸಾರ್ವಜನಿಕರ ಅಭಿಪ್ರಾಯವು ಸುಂಕಕ್ಕೆ ವಿರೋಧವಾಗಿದೆ. ಮತ್ತು ಅವರು ಹೊಸದಾಗಿ ಸುಂಕ ವಿಧಿಸುವುದಕ್ಕೆ ಹಿಂಜರಿಯುತ್ತಾರೆ. ಆದರೆ ಅದಕ್ಕೆ ಪ್ರತಿಯಾಗಿ ದಕ್ಷಿಣದ ರಾಜ್ಯಗಳಲ್ಲೆಲ್ಲ ಸಾರ್ವಜನಿಕ ಅಭಿಪ್ರಾಯವು ಸುಂಕ ವಿಧಿಸುವದಕ್ಕೂ ಸಾರ್ವಜನಿಕ ಪುಸ್ತಕಭಾಂಡಾರಗಳ ಬಗ್ಗೆ ಕಾಯದೆ ಮಾಡಲಿಕ್ಕೂ ಅನುಕೂಲ ಅಭಿಪ್ರಾಯವುಳ್ಳದ್ದಾಗಿದೆ.

ಸಾರ್ವಜನಿಕ ಪುಸ್ತಕ ಭಾಂಡಾರ ಕಾಯದೆ ವಿಷಯವನ್ನು ವಿವೇಚಿಸುವಾಗ ಬ್ರಿಟಿಶ್ ಕಾಯದೆಯ ಹಿನ್ನೆಲೆಯಲ್ಲಿ ವಿಚಾರಮಾಡುವದು ಸಮಂಜಸವಾಗಿರುತ್ತದೆ; ಏಕೆಂದರೆ ಸಾರ್ವಜನಿಕ ಪುಸ್ತಕ ಭಾಂಡಾರ ಕಾಯದೆಯನ್ನು ೧೮೫೦ ರಲ್ಲಿಯೇ ಮಾಡಿ ಬ್ರಿಟಿಶರು ಈ ಕ್ಷೇತ್ರದಲ್ಲಿ ಮೊದಲಿಗರಾಗಿದ್ದಾರೆ, ಮುಂದಾಳಾಗಿದ್ದಾರೆ. ಈ ಕಾಯದೆಯು ಒಂದು ಮಾದರಿಯಾಗಿ ಪರಿಗಣಿಸಲ್ಪಡುತ್ತದೆ. ಅಲ್ಲದೆ ಭಾರತೀಯರಾದ ನಮಗೆ ಇನ್ನೂ ಅದರ ವಿಶೇಷ ಮಹತ್ವವುಂಟು,

ಏಕೆಂದರೆ ಐತಿಹಾಸಿಕ ಕಾರಣಗಳಿಂದಾಗಿ ನಾವು ಬ್ರಿಟಿಶರ ವಿಚಾರ ಪ್ರಣಾಲಿ, ಆಡಳಿತ ಪದ್ಧತಿಯನ್ನು ಅಂಗೀಕರಿಸಿದ್ದೇವೆ. ಮೇಲಾಗಿ ಭಾರತವು ಗ್ರೇಟ ಬ್ರಿಟನ್‌ದಂತೆ ಪ್ರಜಾಸತ್ತಾತ್ಮಕ ಆಡಳಿತ ರಾಷ್ಟ್ರವಾಗಿದ್ದು ಬ್ರಿಟಿಶರ ರೀತಿ ನೀತಿಗಳನ್ನು ಅನು-ಸರಿಸುವದು ಸರಿಯಾಗಿದೆ.

ಪ್ರಜಾಸತ್ತಾತ್ಮಕ ರಾಜ್ಯದಾಡಳಿತದಲ್ಲಿ ಸಾರ್ವಜನಿಕರ ಅಭಿಪ್ರಾಯಕ್ಕೆ ಬೆಲೆಯುಂಟು, ಬಲವುಂಟು. ಸರಕಾರ-ದವರು ಯಾವುದೇ ಹೊಸ ಹಂಚಿಕೆಯನ್ನು ಮಾಡಿದಾಗ ಜನತೆಯು ಅದಕ್ಕೆ ಅನುಕೂಲವಾಗಿರಬೇಕು, ಒಪ್ಪುವಂತಿರ ಬೇಕು, ಅದನ್ನು ಅಂಗೀಕರಿಸುವಂತಿರಬೇಕು. ಸಾರ್ವ-ಜನಿಕ ಪುಸ್ತಕ ಭಾಂಡಾರ ಕಾಯಿದೆಯನ್ನು ಬ್ರಿಟಿಶ್ ಪಾರ್ಲಿ ಮೆಂಟಿನಲ್ಲಿ ಮಂಡಿಸಿದಾಗ ಅದಕ್ಕೆ ಪ್ರಬಲ ವಿರೋಧವುಂಟಾ-ಯಿತು. ಆ ಕಾಯಿದೆಯು ಈಗಿನ ಕಾಲದಲ್ಲಿ ಹೊರಬರುವ ಕಾಯಿದೆಗಳಂತೆ ಕಡ್ಡಾಯ ರೀತಿಯದಾಗಿದ್ದಿಲ್ಲ. ಕೇವಲ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಈ ಕುರಿತು ಪರವಾನಗಿ ಕೊಡುವಂತಹದು ಆಗಿತ್ತು. ಆದರೂ ಕೂಡ ಅದಕ್ಕೆ ಉಗ್ರ ವಿರೋಧವಿತ್ತು. ಜನತೆಗೆ ಎಲ್ಲ ರೀತಿಯ ಅಭಿಪ್ರಾಯಗಳನ್ನು ಹಾಗೂ ಜ್ಞಾನವನ್ನು ದೊರಕಿಸುವ ಅವಕಾಶವನ್ನು ಒದಗಿಸು-ವದು ಗಂಡಾಂತರಕಾರಿಯೆಂದು ಅನೇಕರು ಭಾವಿಸಿದ್ದರು ಎಂದು ರಾಬರ್ಟ್ಸ್ ಕಮಿಟಿಯ ವರದಿ (೧೯೫೯) ಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಬಹಳಷ್ಟು ವಿರೋಧವಿದ್ದರೂ ಈ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಪಾಸುಮಾಡಿ ಕಾಯಿದೆ ಮಾಡುವುದರಲ್ಲಿ ಅದರ ಪ್ರತೋದಕರು ಯಶಸ್ವಿಯಾದರು.

ಇನ್ನು ಭಾರತದಲ್ಲಿ ಇದೇ ಬಗೆಯಾಗಿ ಇರುವ ಕೆಲವರ ಭಿನ್ನಾಭಿಪ್ರಾಯಗಳನ್ನು ಹೇಳುವದು ಸೂಕ್ತವಾಗಿದೆ. ಈ ಬಗೆಗೆ ಪುಸ್ತಕಭಾಂಡಾರ ಸಲಹಾ ಸಮಿತಿಯು ವರದಿಯಲ್ಲಿ ಹೀಗೆ ಹೇಳಲಾಗಿದೆ. ಸಾರ್ವಜನಿಕ ಪುಸ್ತಕ ಭಾಂಡಾರಗಳು ರೇಲ್ವೆ, ಅಂಚೆ ಕಚೇರಿ ಇವುಗಳಂತೆ ಪ್ರಯೋಜನಕಾರಕ ಸಂಸ್ಥೆಗಳಾಗಿವೆ. ಸಾರ್ವಜನಿಕರು ರೇಲ್ವೆ ಹಾಗೂ ಅಂಚೆ ಕಚೇರಿಗಳಿಂದ ಸೇವೆಯನ್ನು ಪಡೆಯುವಾಗ ವೆಚ್ಚವನ್ನು ಸಹಿಸುವಂತೆ ಪುಸ್ತಕಭಾಂಡಾರಗಳ ಸೇವೆಯಲ್ಲಿಯೂ ಇದೇ ತರಹದ ವ್ಯಾವಹಾರಿಕ ಮನೋಭಾವನೆಯಿಂದ ವೆಚ್ಚವನ್ನು ವಹಿಸಬೇಕು. ೧೯ ನೆಯ ಶತಮಾನದ ಇಂಗ್ಲೀಷ ಮಹಾತತ್ವಜ್ಞಾನಿಯಾದ ಹರ್ಬರ್ಟ ಸ್ಪೆನ್ಸರನು ಇಂತಹ ವಿಚಾರದ ಮುನ್ನಣೆವೆತ್ತ ಪ್ರತಿಪಾದಕನಾಗಿದ್ದನು. ಅವನ ಅಭಿಪ್ರಾಯದ ಪ್ರಕಾರ ಜನರು ತಾವು ಊಟ ಮಾಡುವ ಆಹಾರಕ್ಕಾಗಿ ಹಣ ಕೊಡಬೇಕಾಗಿದ್ದರೆ ಪುಸ್ತಕ ಭಾಂಡಾರದ ಸೇವೆಯ ಮೂಲಕವಾದ ಬೌದ್ಧಿಕ ಆಹಾರವನ್ನು ಪುಕ್ಕಟೆಯಾಗಿ ಒದಗಿಸಲಿಕ್ಕೆ ಸಬಲ ಕಾರಣಗಳು ಇಲ್ಲ. ಈ ಬಗೆಯಾಗಿ ವಾದ ಹೂಡುವವರು ಭಾರತದಲ್ಲಿ ಈಗಲೂ ಉಂಟು.

ಇಂತಹ ವಾದಗಳನ್ನು ಸಮಿತಿಯವರು ಈ ರೀತಿಯಾಗಿ ಖಂಡಿಸಿಸ್ಸಾರೆ. ಮೇಲಿನ ವಿಚಾರದ ವಿರುದ್ಧವಾಗಿ ಪ್ರಪಂಚ ಸಂಸ್ಥೆ (UNO) ಯವರು ಅನುಮೋದಿಸಿದ ಮಾನವೀಯ ಹಕ್ಕುಗಳ ಘೋಷಣೆಯನ್ನು ಸ್ಮರಿಸಬಹುದು. ಪ್ರಪಂಚ ಸಂಸ್ಥೆಯ ಸನದಿನ ೨೭ ಕಲಮಿನಲ್ಲಿ ಮಾನವನ ಚಾತುರ್ಯದಿಂದ ಲಭ್ಯವಾದ ಫಲಗಳಿಗೆ- ಕಲೆಯುಲ್ಲಾಗಲೀ, ವಿಜ್ಞಾನ

ದಲ್ಲಾಗಲೀ ಪ್ರತಿಯೊಬ್ಬ ವ್ಯಕ್ತಿಗೆ ಅನಿರ್ಬಂಧ ಪ್ರವೇಶವು ಜನ್ಮಸಿದ್ಧ ಹಕ್ಕು ಉಂಟೆಂದು ಹೇಳಿದೆ. ಪ್ರಕಟಿತ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೆ ಆಸ್ಪದ ಕೊಡುವುದರಿಂದ ವ್ಯಕ್ತಿಗಷ್ಟೇ ಲಾಭವಾಗದೆ ರಾಷ್ಟ್ರಕಲ್ಯಾಣವೂ ಆಗುವದು. ಒಂದು ಊರಿನಿಂದ ಬೇರೊಂದು ಊರಿಗೆ ಒಬ್ಬ ವ್ಯಕ್ತಿಯು ತನ್ನ ಸ್ವಂತ ಹಿತಕ್ಕಾಗಿ ವೆಚ್ಚಮಾಡಿ ಪ್ರವಾಸ ಮಾಡಬಹುದು. ಹೀಗೆ ಪ್ರವಾಸ ಮಾಡುವಲ್ಲಿ ರಾಷ್ಟ್ರೀಯ ಹಿತ ಕಲ್ಯಾಣಗಳೇನೂ ಅಡಕವಾಗಿಲ್ಲ ಆದರೆ ಪುಸ್ತಕ ಮೊದಲಾದವುಗಳ ಉಪಯೋಗಕ್ಕೆ ಪುಕ್ಕಟೆ ಆಸ್ಪದ ದೊರಕದಿರುವುದರಿಂದ ಮತ್ತು ಆ ಕಾರಣಗಳಿಂದಾಗಿ ಚಿರಗಹನ ಪುಸ್ತಕಗಳನ್ನು ಓದಲಾರದ ವ್ಯಕ್ತಿಯು ನಾಗರಿಕತೆಯ ಸರಪಳಿಯಲ್ಲಿ ಒಂದು ದುರ್ಬಲ ಕಳಿಗೆಯಾಗಿ ರಾಷ್ಟ್ರೀಯ ಜೀವನವನ್ನೇ ಬಡವಾಗಿಸಬಹುದು. ಪ್ರಜಾಸತ್ತೆಯ ಅಸ್ತಿತ್ವಕ್ಕೆ ಮೂಲಭೂತವಾಗಿ ಪುಕ್ಕಟೆಯಾಗಿ ಪ್ರಾಥಮಿಕ ಶಿಕ್ಷಣವು ಅಗತ್ಯವಿದ್ದರೆ ಪುಕ್ಕಟೆ ಸಾರ್ವಜನಿಕ ಪುಸ್ತಕಭಾಂಡಾರಗಳಿಗೆ ಅಂಥದೇ ಸ್ಥಾನಗೌರವವನ್ನು ನೀಡುವುದು ಅತ್ಯಂತ ಯೋಗ್ಯವಾಗಿದೆ.

ಗ್ರೇಟಬ್ರಿಟನ್‌ದಲ್ಲಿ ಒಂದು ಶತಮಾನದ ಹಿಂದೆ ಪುಸ್ತಕ ಭಾಂಡಾರ ಚಳವಳಿಯನ್ನು ಪ್ರಾರಂಭಿಸಲಿಕ್ಕೆ ವಿರೋಧವಿದ್ದರೆ, ಇತ್ತೀಚೆಗೆ ಭಾರತದಲ್ಲಿ ಇಂತಹ ಚಳವಳಿಗೆ ವಿರೋಧವಿರದೆ ಅದನ್ನು ಸಂಬಂಧಿಸಿದ ಹಿತಾಸಕ್ತಿಗಳ ವ್ಯಕ್ತಿಗಳಿಂದಲೇ ನಡೆಯಿಸಿಕೊಂಡು ಹೋಗಬೇಕೆಂಬ ಭಿನ್ನಾಭಿಪ್ರಾಯವು ತಕ್ಕಮಟ್ಟಿಗೆ ಕಂಡುಬರುತ್ತಿದೆ. ಬರಬರುತ್ತ ಈ ತರಹದ ವಿರೋಧವೂ ಮಾಯವಾಗಹತ್ತಿದೆ. ಇದಕ್ಕೆ ೧೯೬೫ ರಲ್ಲಿ

ಮೈಸೂರು ರಾಜ್ಯದಲ್ಲಿ ಕಾಯದೆ ಪಾಸು ಮಾಡುವಾಗ ಶಾಸನ ಸಭೆಯಲ್ಲಿ ವ್ಯಕ್ತಪಡಿಸಿದ ಕೆಲವರ ಭಿನ್ನಾಭಿಪ್ರಾಯಗಳು ನಿದರ್ಶನವಾಗಿವೆ. ಇವುಗಳ ಪ್ರಕಾರ ಈ ಪುಸ್ತಕಭಾಂಡಾರ ಚಳವಳಿಯು ಸಾರ್ವಜನಿಕ ಸ್ವರೂಪ ತಳೆಯಬೇಕಾದುದು ಸರ್ವಸಮ್ಮತ; ಆದರೆ ಅದಕ್ಕೆ ಕಾಯದೆ ಮಾಡಬೇಕಾಗಿಲ್ಲ ಎಂಬುದು ಆಗಿರುತ್ತದೆ. ವಿಶೇಷವಾಗಿ ಪ್ರಚಲಿತವಿರುವ ಸಹಾಯಧನ ಪದ್ಧತಿಯನ್ನೇ ಸುಧಾರಿಸಿ ಹಾಗೂ ವಿಸ್ತರಿಸಿ ಸಾರ್ವಜನಿಕ ಪುಸ್ತಕಭಾಂಡಾರ ಸೇವೆಯನ್ನು ಒದಗಿಸ-ಬಹುದು, ಇಲ್ಲವೆ ಇಂತಹ ಸೇವೆಯನ್ನು ಸುಂಕ ವಿಧಿಸದೆ ಸಂಪೂರ್ಣವಾಗಿ ಸರಕಾರದ ಬೊಕ್ಕಸದ ಹಣವನ್ನೇ ಉಪಯೋಗಿಸಿ ಯಶಸ್ವಿಯಾಗಿ ಮಾಡಬಹುದು, ಎಂಬುದು ಅವರ ಆಶಯವಾಗಿತ್ತು. ಈ ಪ್ರಕಾರದ ವಿರೋಧಾಭಿಪ್ರಾಯದ ಹಿನ್ನೆಲೆಯಲ್ಲಿ ಕಾಯದೆ ಪಾಸಾದುದು ಅದರ ಮಹತ್ವವನ್ನಲ್ಲದೆ ಅಗತ್ಯತೆಯನ್ನೂ ಬಿಂಬಿಸುವದು.

೭. ಕಾಯದೆಯ ರೂಪರೇಷೆ

ಪುಸ್ತಕಭಾಂಡಾರ ಕಾಯದೆಯೆಂದರೆ ಸಾರ್ವಜನಿಕ ಪುಸ್ತಕಭಾಂಡಾರಗಳ ಕಾಯದೆ ಎಂಬ ಗ್ರಹಿಕೆ ಸಾಮಾನ್ಯ-ವಾಗಿದೆ. ಏಕೆಂದರೆ, ಜಪಾನ ರಾಷ್ಟ್ರವೊಂದರ ಹೊರತಾಗಿ ಇತರ ರಾಷ್ಟ್ರಗಳು ಮಾಡಿದ ಪುಸ್ತಕಭಾಂಡಾರ ಕಾಯದೆಯು ಸಾರ್ವಜನಿಕ ಪುಸ್ತಕಭಾಂಡಾರಗಳಿಗೆ ಸಂಬಂಧಿಸಿದುದಾಗಿದೆ. ಆದರೆ ಜಪಾನದಲ್ಲಿ ಮಾತ್ರ ಸಾರ್ವಜನಿಕ ಪುಸ್ತಕಭಾಂಡಾರ ಗಳಿಗಾಗಿ ಕಾಯದೆ ಇರುವುದಲ್ಲದೆ ಮಾಧ್ಯಮಿಕ ಶಿಕ್ಷಣ ಶಾಲೆ ಗಳಲ್ಲಿರುವ ಪುಸ್ತಕಭಾಂಡಾರಗಳಿಗಾಗಿ ಒಂದು ಪ್ರತ್ಯೇಕ ಕಾಯದೆಯುಂಟು. ಆದ್ದರಿಂದ ಪುಸ್ತಕಭಾಂಡಾರ ಕಾಯದೆ ಯೆಂದರೆ ಸಾರ್ವಜನಿಕ ಪುಸ್ತಕಭಾಂಡಾರಗಳಿಗೆ ಸಂಬಂಧಿಸಿ-ದುದು ಎಂದು ತಿಳಿಯಬಹುದು.

ಕಾಯದೆಯ ಸ್ವರೂಪ

ಪುಸ್ತಕಭಾಂಡಾರ ಕಾಯದೆಯು ಎರಡು ತೆರನಾಗಿರು ವದು. ಒಂದು ಪರವಾನಗಿ ಕೊಡುವಂತಹದು; ಎರಡನೆ ಯದು ಕಡ್ಡಾಯವಾಗಿರುವದು. ಮೊದಲನೆಯದರ ಪ್ರಕಾರ ರಾಷ್ಟ್ರೀಯ ಇಲ್ಲವೆ ರಾಜ್ಯ ಸರಕಾರವು ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಾದ ಲೋಕಲ್ ಬೋರ್ಡ, ಮುನಿಸಿಪಾಲಿಟಿ, ಗ್ರಾಮ ಪಂಚಾಯತಿ ಇವುಗಳಿಗೆ ಪುಸ್ತಕಭಾಂಡಾರಗಳನ್ನು ಸ್ಥಾಪಿಸ ಲಿಕ್ಕೆ ಮತ್ತು ಅವುಗಳನ್ನು ನಡೆಯಿಸಿಕೊಂಡು ಹೋಗಲಿಕ್ಕೆ ಹಣವೊದಗಿಸಲು ಸಾಮಾನ್ಯವಾಗಿ ಸುಂಕವನ್ನು ಆಕರಿಸಿ,

ಕಾಯಿದೆಯಿಂದ ಪರವಾನಗಿ ಕೊಡುವದು. ಬೇಕಾದ ಸಂಸ್ಥೆಗಳು ಈ ಕಾಯದೆಯನ್ನು ಅಂಗೀಕಾರ ಮಾಡಿ ಅದರಂತೆ ಪುಸ್ತಕಭಾಂಡಾರಗಳ ವ್ಯವಸ್ಥೆಯನ್ನು ಏರ್ಪಡಿಸುವವು. ಎರಡನೆಯದು ಪುಸ್ತಕಭಾಂಡಾರಗಳನ್ನು ಕಾಯದೆ ಪ್ರಕಾರ ಸ್ಥಾಪಿಸಿ ನಡೆಯಿಸಿಕೊಂಡು ಹೋಗುವದನ್ನು ಸ್ಥಾನಿಕ ಸಂಸ್ಥೆಗಳ ಇಚ್ಛಾನುಸಾರವಾಗದೆ, ಅಗತ್ಯವಾಗಿ ಮಾಡಬೇಕಾಗುವದು. ಬ್ರಿಟಿಶ್ ಕಾಯದೆಯು ಮೊದಲನೆಯ ತರಹದ್ದಾಗಿರುವದು. (ತೀರ ಇತ್ತೀಚೆಗೆ ಅದು ಕಡ್ಡಾಯವಾಗಿದೆ). ಭಾರತದಲ್ಲಿ ಮದ್ರಾಸ, ಆಂಧ್ರಪ್ರದೇಶ ಮತ್ತು ಮೈಸೂರು ರಾಜ್ಯಗಳಲ್ಲಿ ಮಾಡಿರುವ ಕಾಯದೆಯು ಎರಡನೆಯ ತರಹದು ಅಂದರೆ ಕಡ್ಡಾಯವಾದದ್ದು ಆಗಿರುತ್ತದೆ.

ಮೂಲಭೂತಗಳು

ಇನ್ನು ಈ ಪುಸ್ತಕಭಾಂಡಾರ ಕಾಯದೆಯ ಮೂಲಭೂತ ವಿಷಯಗಳಾವವು ಎಂಬುವದನ್ನು ಆಲೋಚಿಸೋಣ

ಮೊದಲನೆಯದಾಗಿ ಸ್ವತಂತ್ರ ಆರ್ಥಿಕ ವ್ಯವಸ್ಥೆ: ಪ್ರಸ್ತುತ ನಾಗರಿಕತೆಯಲ್ಲಿ ಹಣವೇ ಮುಖ್ಯವಾದದ್ದು, ಅಗತ್ಯವಾದದ್ದು. ಹಣವಿದ್ದರೆ ಎಲ್ಲವೂ ಉಂಟು. ಹಣವಿಲ್ಲದಿದ್ದರೆ ಏನೂ ಇಲ್ಲ. ಅಥವಾ ಇದ್ದರೂ ಇದ್ದಂತೆ ಅಲ್ಲ, ಅರ್ಥಾತ್ ನಿರುಪಯುಕ್ತ. ಅಸ್ತಿತ್ವದಲ್ಲಿರುವ ಪುಸ್ತಕಭಾಂಡಾರಗಳಿಗೆ ಆರ್ಥಿಕ ಅಭಾವವೇ ಅವುಗಳ ಗತಿಹೀನ ಹಾಗೂ ವಿಫಲ ಸ್ಥಿತಿಗೆ ಕಾರಣ. ಮತ್ತು ಇದೇ ಕಾರಣದಿಂದಾಗಿ ಪುಸ್ತಕಭಾಂಡಾರ ಕಾಯದೆಯ ಅವಶ್ಯಕತೆಯನ್ನು ಈ ಮೊದಲು ಸ್ಪಷ್ಟಗೊಳಿಸಿದೆ.

ಎರಡನೆಯದಾಗಿ, ಪುಸ್ತಕಭಾಂಡಾರಗಳನ್ನು ಸ್ಥಾಪಿಸಿ ನಡೆಯಿಸಿಕೊಂಡು ಹೋಗುವ ಹೊಣೆಗಾರಿಕೆ ಯಾರ ಮೇಲೆ ಇರತಕ್ಕದ್ದು? ಆರಂಭದಲ್ಲಿ ಅದು ಸಂಬಂಧಿಸಿದ ಹಿತಾಸಕ್ತಿಗಳುಳ್ಳ ವ್ಯಕ್ತಿಗಳ ಮೇಲೆ, ಆನಂತರ ಅದು ಸಾರ್ವಜನಿಕರ ಬಳಿ ಸಾರಿದುದು, ತರುವಾಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಗಮನ ಸೆಳೆದು ಅದರ ನೆರವನ್ನು ಪಡೆದುದು, ಆ ಮೇಲೆ ಸರಕಾರದವರು ಈ ದಿಶೆಯಲ್ಲಿ ತಮ್ಮ ಕರ್ತವ್ಯ ಹೊಣೆಗಾರಿಕೆಯನ್ನು ಅರಿತು ಸಂಯುಕ್ತವಾಗಿ ಹೊಣೆ ಹೊತ್ತುದು; ಕೊನೆಯಲ್ಲಿ ಈ ಹೊಣೆ ಸಂಪೂರ್ಣವಾಗಿ ತನ್ನದೇ ಆದುದು, ಆ ಕಾರಣ ಅದನ್ನು ಪರಿಪಾಲಿಸುವದಕ್ಕಾಗಿ ಕಾಯದೆ ಮಾಡುವ ಅವಶ್ಯಕತೆಯನ್ನು ಸರಕಾರವು ಕಂಡುಕೊಂಡದ್ದಾಗಿದೆ.

ಮೂರನೆಯದಾಗಿ, ಸರಕಾರವು ತನ್ನ ಕರ್ತವ್ಯ ಹೊಣೆಗಾರಿಕೆಗಳನ್ನು ನಿರ್ವಹಿಸಲಿಕ್ಕೆ ಹಾಗೂ ಯಶಸ್ವಿಯಾಗಿ ಜಾರಿಗೊಳಿಸಲಿಕ್ಕೆ ಸರಕಾರದ ಆಡಳಿತ ಮಟ್ಟದಲ್ಲಿ ಒಂದು ಪ್ರತ್ಯೇಕ ಖಾತೆ 'ಸಾರ್ವಜನಿಕ ಪುಸ್ತಕಭಾಂಡಾರ ಖಾತೆ' ಯನ್ನು ಏರ್ಪಡಿಸುವದು.

ನಾಲ್ಕನೆಯದಾಗಿ, ಯೋಗ್ಯತೆಯುಳ್ಳ ಪೂರ್ಣ ಕಾಲಾವಧಿಯ ಅಧಿಕಾರಿಯನ್ನು ಈ ಖಾತೆಯ ಮುಖ್ಯಸ್ಥನನ್ನಾಗಿ ನೇಮಿಸುವದು.

ಐದನೆಯದು, ವಿವಿಧ ಮಟ್ಟಗಳಲ್ಲಿ ಪುಸ್ತಕಭಾಂಡಾರ ಸೇವೆಯನ್ನು ಸಮರ್ಪಕವಾಗಿ ಒದಗಿಸಲಿಕ್ಕೆ ಪ್ರತ್ಯೇಕ ಆಡಳಿತ ಮಂಡಳಿಗಳನ್ನು ನೇಮಿಸುವದು.

ಆರನೆಯದಾಗಿ, ಯೋಗ್ಯತೆಯುಳ್ಳ ನೌಕರ ಸೇವಾ ವರ್ಗವನ್ನು ನಿರ್ಮಿಸುವದು.

ಕೊನೆಯದಾಗಿ, ಒಂದು ಯಶಸ್ವಿ ಅಂತರ-ಪುಸ್ತಕ ಭಾಂಡಾರ ಕೊಡಕೊಳ್ಳುವ ಯೋಜನೆಗೆ ಅವಕಾಶವನ್ನುಂಟು ಮಾಡುವದು.

ತಳಹದಿ

ಇವೆಲ್ಲ ವಿಷಯಗಳನ್ನು ಬ್ರಿಟಿಶ್ ಪುಸ್ತಕ ಭಾಂಡಾರ ಕಾಯದೆಯನ್ನು ತಳಹದಿಯಾಗಿಟ್ಟುಕೊಂಡು ಆಲೋಚಿಸ ಲಾಗಿದೆ. ಏಕೆಂದರೆ, ಬ್ರಿಟಿಶರ ರೀತಿನೀತಿಗಳು ಭಾರತದ ಆಡಳಿತ ನೀತಿ, ಸಂಘ ಸಂಸ್ಥೆಗಳ ರೀತಿ ಇವುಗಳ ಮೇಲೆ ಪ್ರಭಾವ ಬೀರಿವೆ. ಬಂಗಾಲ ಪುಸ್ತಕಭಾಂಡಾರ ಮಸೂದೆಯು ಆದರಲ್ಲಿ ಕಡ್ಡಾಯದ ಕಲಮುಗಳಿದ್ದುದರ ಮೂಲಕ ಅದಕ್ಕೆ ಅವಶ್ಯವಿದ್ದ ಗವ್ಹರ್ನರ ಜನರಲ್ಲರ ಪೂರ್ವ ಮನ್ನಣೆಯು ದೊರಕ ಲಿಲ್ಲ; ಏಕೆಂದರೆ ಬ್ರಿಟಿಶರ ಕಾಯದೆಯು ಕಡ್ಡಾಯ ಸ್ವರೂಪದ್ದಾಗಿರದೆ ಪರವಾನಗಿ ಕೊಡುವ ಹಾಗೂ ಅಂಗೀಕರಿ ಸುವ ಸ್ವರೂಪದ್ದಾಗಿತ್ತು. ಪುಸ್ತಕಭಾಂಡಾರ ಕಾಯದೆ ಮಾಡ ಬೇಕೆಂಬ ಈ ಮೊದಲನೆಯ ಯೋಚನೆಯು ಮಣ್ಣುಗೂಡಿತು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

೮. ಹಣಕಾಸು

ಪುಸ್ತಕಭಾಂಡಾರ ಕಾಯದೆಯ ಉದ್ದೇಶವು ಪುಸ್ತಕ-ಭಾಂಡಾರಗಳ ವ್ಯವಸ್ಥೆಗೆ ಸ್ವಾತಂತ್ರ್ಯ, ಸ್ವಯಂ ಪರಿಪೂರ್ಣತೆ, ವ್ಯಕ್ತಿತ್ವ ಹಾಗೂ ಒಂದು ಹಕ್ಕು ದಯಪಾಲಿಸುವದಾಗಿದೆ. ಇವೆಲ್ಲವು ಉಂಟಾಗಬೇಕಾದರೆ ಅದಕ್ಕೆ ಒಂದು ಸ್ವತಂತ್ರ ಆರ್ಥಿಕ ವ್ಯವಸ್ಥೆ ಅಗತ್ಯ. ಇಲ್ಲದಿದ್ದರೆ ಪುಸ್ತಕಭಾಂಡಾರ ಚಳವಳಿಯು ಪರೋಪಜೀವಿಯಾಗಿ ಸಾಗಬೇಕಾಗುವದು. ಹೀಗೆ ಪರರ ಪಾಲನೆ, ಪೋಷಣೆ, ಕೃಪೆಗಳಿಗೆ ಪಕ್ಕಾದಾಗ ಯಾವ ಧ್ಯೇಯೋದ್ದೇಶವೂ ಉತ್ಕರ್ಷೆಯನ್ನು ಹೊಂದಲಾರದು. ಇದು ಅನುಭವದಿಂದ, ಇತಿಹಾಸದಿಂದ ಕಂಡು ಬಂದ ಸತ್ಯ ಸಂಗತಿ. ಪುಸ್ತಕಭಾಂಡಾರ ವ್ಯವಸ್ಥೆಯ ಬಗೆಗೆ ಕಾಯದೆ ಮಾಡಲಿಕ್ಕೆ ಈ ಪರಿಸ್ಥಿತಿಯೇ ಮೂಲಕಾರಣವಾಗಿದೆ.

ಸ್ವತಂತ್ರ ಹಣಕಾಸಿನ ವ್ಯವಸ್ಥೆಯಾದರೆ ಅದು ಕಾಯದೆ ಬದ್ಧವಾಗಿ, ತಪ್ಪದೆ, ನಿಶ್ಚಿತವಾಗಿ ಬರಬೇಕು. ಇದು ಎರಡು ರೀತಿಯಾಗಿ ಆಗಬಹುದು. ಸರಕಾರವು ಅದನ್ನು ತನ್ನ ಬೊಕ್ಕಸದಿಂದ ಪ್ರತ್ಯೇಕವಾಗಿ ಕೊಡಬೇಕು ಇಲ್ಲವೆ ಕರಾಕರಣೆಯ ಮೂಲಕ ನಿರ್ದಿಷ್ಟಗೊಳಿಸಬೇಕು. ಇವೆರಡರಲ್ಲಿ ಕರಾಕರಣೆಯೇ ಸುಗಮ ಮಾರ್ಗ. ಆದುದರಿಂದ ಪುಸ್ತಕಭಾಂಡಾರ ವ್ಯವಸ್ಥೆಗೆ ಕರವನ್ನು ಆಕರಿಸುವದೇ ಅನಿವಾರ್ಯ. ಬಹುತರವಾಗಿ ಎಲ್ಲ ಪುಸ್ತಕಭಾಂಡಾರ ಕಾಯದೆಗಳೂ ಇದನ್ನೇ ಅನುಸರಿಸಿವೆ. ಕರದಿಂದ ಬರುವ ಆದಾಯವೇ ಇಂತಹ ಕಾಯದೆಯ ಜೀವನಾಡಿ.

ಈ ರೀತಿಯ ಕರವು ಒಂದು ಮುಖ್ಯ ಇಲ್ಲವೆ ಮೂಲ ಕರವಾಗಿರದೆ, ಮುಖ್ಯ ಇಲ್ಲವೆ ಮೂಲ ಕರಕ್ಕೆ ಅನುಗಾಮಿಯಾದ ಸುಂಕವಾಗಿರುತ್ತದೆ.

ಸುಂಕ ಪ್ರಮಾಣ

ಪುಸ್ತಕಭಾಂಡಾರ ಪದ್ಧತಿಗೆ ಹಣ ಒದಗಿಸಬೇಕಾದರೆ ಎಷ್ಟು ಹಣ, ಯಾವ ಪ್ರಮಾಣದಲ್ಲಿ ಒದಗಿಸಬೇಕೆಂಬ ಪ್ರಶ್ನೆ ಉದ್ಭೂತವಾಗುವದು. ಈ ಪ್ರಮಾಣವನ್ನು ಮೂರು ಅಳತೆ-ಗೋಲಿನಿಂದ ಅಳೆಯಬಹುದು. (೧) ತಲೆವಾರ ಪದ್ಧತಿ (೨) ವಿವರ ಪದ್ಧತಿ (೩) ಪ್ರಮಾಣ ಪದ್ಧತಿ. ಮೊದಲನೆ ಪದ್ಧತಿಯಿಂದ ಪ್ರತಿಯೊಬ್ಬ ವ್ಯಕ್ತಿಗೆ ಇಂತಿಷ್ಟು ಸುಂಕ ಎಂದು ನಿಷ್ಕರ್ಷಿಸಲಾಗುವದು. ಎರಡನೆಯದರಿಂದ ಪುಸ್ತಕಭಾಂಡಾರ ಸೇವೆಯನ್ನು ಸಮರ್ಪಕವಾಗಿ ಏರ್ಪಡಿಸಲಿಕ್ಕೆ ತಗಲುವ ವೆಚ್ಚವನ್ನು ಲೆಕ್ಕಹಾಕಿ ಇಂತಿಷ್ಟು ದರದ ಸುಂಕ ಸರಿಯಾದುದು ಎಂದು ನಿಷ್ಕರ್ಷಿಸುವದು. ಮೂರನೆಯದರಿಂದ, ರಾಷ್ಟ್ರೀಯ ಇಲ್ಲವೆ ರಾಜ್ಯದ ಒಟ್ಟು ವೆಚ್ಚ ಮತ್ತು ಪ್ರಮುಖ ಬಾಬುಗಳ ಮೇಲೆ ಆಗುವ ವೆಚ್ಚ ಇವುಗಳನ್ನು ಗಣನೆಗೆ ತೆಗೆದುಕೊಂಡು ಪುಸ್ತಕಭಾಂಡಾರಗಳ ವೆಚ್ಚವು ಇಂತಿಷ್ಟು ಪ್ರಮಾಣದಲ್ಲಿ ಇರಬೇಕು ಎಂದು ನಿರ್ದೇಶಿಸುವದು. ಈ ಬಗೆಗೆ ಜಗತ್ತಿನಲ್ಲಿ ಸರಾಸರಿ ಪುಸ್ತಕಭಾಂಡಾರಗಳ ಮೇಲೆ ತಗಲುವ ವೆಚ್ಚದ ಮೇಲಿಂದ ಇಲ್ಲವೆ ಪುಸ್ತಕಭಾಂಡಾರಗಳ ಮೇಲೆ ಆಗಬೇಕಾದ ವೆಚ್ಚವು ರಾಷ್ಟ್ರದ ಇಲ್ಲವೆ ರಾಜ್ಯದ ಒಟ್ಟು ವೆಚ್ಚದ ಪ್ರತಿಶತ ೧ ರಂತೆ.

ಇಲ್ಲವೆ ಶಿಕ್ಷಣದ ಮೇಲೆ ಆಗುವ ವೆಚ್ಚದ ಪ್ರತಿಶತ ೬ ರಂತೆ ಇರತಕ್ಕದ್ದೆಂದು ಸರ್ವಮಾನ್ಯ ಅಭಿಪ್ರಾಯವಾಗಿದೆ.

ಗ್ರೇಟಬ್ರಿಟನ್

ಈ ದಿಶೆಯಲ್ಲಿ ಪುರೋಗಾಮಿಗಳಾದ ಬ್ರಿಟಿಶರು ೧೮೫೦ ರಲ್ಲಿ ಮಾಡಿದ ಕಾಯಿದೆ ಪ್ರಕಾರ ತಲೆವಾರ ಅಂದರೆ ಪ್ರತಿ ವ್ಯಕ್ತಿಗೆ ಅರ್ಧ ಪೆನಸು ಪುಸ್ತಕಭಾಂಡಾರಗಳ ಸುಂಕವಿರಬೇಕೆಂದು ವಿಧಿಸಿದರು. ಹೀಗೆ ವಿಧಿಸುವಾಗ ಈ ಸುಂಕದಿಂದ ಬಂದ ಹಣವನ್ನು ಪುಸ್ತಕ, ಪತ್ರಿಕೆ ಮೊದಲಾದ ಓದುವ ಸಾಮಗ್ರಿಗಳ ಮೇಲೆ ವೆಚ್ಚ ಮಾಡಕೂಡದೆಂದು ಹೇಳಲಾಗಿತ್ತು. ಮತ್ತು ಸಾರ್ವಜನಿಕ ಪುಸ್ತಕಭಾಂಡಾರಗಳಿಗೆ ಅವಶ್ಯವಾಗಿದ್ದ ಪುಸ್ತಕ, ಪತ್ರಿಕೆ ಮೊದಲಾದವು ಸಾರ್ವಜನಿಕರಿಂದ ದೇಣಿಗೆಯಾಗಿ ದೊರಕುವವೆಂದು ಗ್ರಹಿಸಿದ್ದರು. ಆದರೆ ಈ ತರಹದ ಗ್ರಹಿಕೆ, ಯೋಜನೆ ತಪ್ಪಾದುದು ಎಂದು ಶೀಘ್ರದಲ್ಲಿಯೇ ಕಂಡುಬಂದಿತು. ಆದುದರಿಂದ ೧೮೫೫ ರಲ್ಲಿ ಅಂದರೆ ಐದು ವರ್ಷಗಳ ಕಾಲಾವಧಿಯಲ್ಲಿಯೇ ೧೮೫೦ ರ ಕಾಯದೆಯನ್ನು ಸುಧಾರಿಸಿ ಅರ್ಧ ಪೆನಿಸಿನಷ್ಟು ಇರುವ ಸುಂಕವನ್ನು ಒಂದು ಪೆನಿಸಿಗೆ ಏರಿಸಿ, ಸುಂಕದಿಂದ ಬರುವ ಹಣವನ್ನು ಪುಸ್ತಕ ಹಾಗೂ ಪತ್ರಿಕೆಗಳನ್ನು ಕೊಳ್ಳಲು ವಿನಿಯೋಗಿಸಲಿಕ್ಕೆ ಸಮ್ಮತಿ ಕೊಡಲಾಯಿತು.

ಇಲ್ಲಿ ಒಂದು ಮಾತನ್ನು ಹೇಳುವದು ಅವಶ್ಯವೆಂದು ಕಂಡುಬರುತ್ತದೆ. ಸಾರ್ವಜನಿಕ ಪುಸ್ತಕಭಾಂಡಾರಗಳನ್ನು ನಡೆಯಿಸುವ ಹೊಣೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳದೆಂದು

ನಿಶ್ಚಯಿಸಿ ಅದಕ್ಕೆ ಆರ್ಥಿಕ ಅನುಕೂಲತೆಗಳನ್ನು ಒದಗಿಸುವ ಸಲುವಾಗಿ ಸುಂಕ ವಿಧಿಸಲಿಕ್ಕೆ ಪರವಾನಗಿ ಕೊಟ್ಟರೂ ಈ ಹಣ ದಿಂದ ಉದ್ದಿಷ್ಟ ಗುರಿಯನ್ನು ತಲುಪಲಾಗದೆಂದು ಪರಿಭಾವಿಸಿ, ಸಾರ್ವಜನಿಕ ಪುಸ್ತಕಭಾಂಡಾರಗಳು ಅವುಗಳ ಸರಿಯಾದ ಕಾರ್ಯ ಪ್ರಗತಿಗಾಗಿ ಸಾರ್ವಜನಿಕರ ನೆರವು ದೇಣಿಗೆಗಳನ್ನು ಅವಲಂಬಿಸ ಬೇಕು, ಪಡೆಯಬೇಕು ಎಂಬುದು ಅಪ್ರಕಟಿತ ಉದ್ದೇಶವಾಗಿತ್ತು.

ಆ್ಯಂಡ್ರ್ಯೂ ಕಾರ್ನೆಗಿ

ಕಾಲಾವಕಾಶದಲ್ಲಿ ಪುಸ್ತಕಭಾಂಡಾರಗಳ ಕಾರ್ಯವು ಹಾಗೂ ಬೆಳವಣಿಗೆಯು ಕುಂಠಿತವಾಗಿದೆ ಎಂದು ಕಂಡು ಬಂದಾಗ ದೈವವಶಾತ್ ಪುಸ್ತಕಭಾಂಡಾರಗಳ ಉದ್ಧಾರಕ್ಕಾಗಿ ಒಬ್ಬ ಮಹಾದಾನಿ ಒಡಮೂಡಿದನು. ಅವನೇ ಆ್ಯಂಡ್ರ್ಯೂ ಕಾರ್ನೆಗಿ. ಅವನು ೧೮೮೬–೧೯೧೩ ರೊಳಗೆ ಸಾರ್ವಜನಿಕ ಪುಸ್ತಕಭಾಂಡಾರಗಳ ಉತ್ಕರ್ಷೆಗೆ ೨೦ ಲಕ್ಷ ಪೌಂಡುಗಳಷ್ಟು ಹಣವನ್ನು ದೇಣಿಗೆಯಾಗಿ ಕೊಟ್ಟನು. ಸಾಮಾನ್ಯವಾಗಿ ಅವನ ದೇಣಿಗೆ ಹಣವು ಸಾರ್ವಜನಿಕ ಪುಸ್ತಕಭಾಂಡಾರಗಳನ್ನು ಒದಗಿಸಲಿಕ್ಕೆ ಬೇಕಾಗಿರುವ ಬಂಡವಲ (Capital) ವೆಚ್ಚಕ್ಕೆ ಮರ್ಯಾದಿತವಾಗಿತ್ತು, ಮತ್ತು ಸ್ಥಾನಿಕ ಪುಸ್ತಕಭಾಂಡಾರ ಅಧಿಕಾರ ಮಂಡಲಿಯು ತನ್ನ ಸಾರ್ವಜನಿಕ ಹಣದಿಂದ ಪುಸ್ತಕಭಾಂಡಾರಗಳನ್ನು ನಡೆಯಿಸಿಕೊಂಡು ಹೋಗುತ್ತಿತ್ತು. ಹೀಗಾಗಿ ಗ್ರೇಟಬ್ರಿಟನದಲ್ಲಿ ಸಾರ್ವಜನಿಕ ಪುಸ್ತಕಭಾಂಡಾರ ಚಳವಳಿಯು ಆ್ಯಂಡ್ರ್ಯೂ ಕಾರ್ನೆಗಿಯವರ ದೇಣಿಗೆಗಳಿಂದ ಅಧಿಕವಾದ ಪ್ರೋತ್ಸಾಹ ಪುರಸ್ಕಾರಗಳನ್ನು ಪಡೆಯಿತು.

ಆ ನಂತರ ೧೯೧೯ ರ ಕಾಯದೆಯು ಪ್ರಕಾರ ಸುಂಕ ಎತ್ತುವ ಪರಿಮಿತಿ (೧ ಪೆನಸು) ಯುನ್ನು ರದ್ದುಗೊಳಿಸಿ ಸ್ಥಾನಿಕ ಪುಸ್ತಕಭಾಂಡಾರ ಅಧಿಕಾರ ಮಂಡಲಿಯು ಅದಕ್ಕೆ ಸಮರ್ಪಕ ವೆನಿಸಿದಷ್ಟು ಸುಂಕವನ್ನು ವಿಧಿಸಲಿಕ್ಕೆ ಅವಕಾಶ ಮಾಡಿ ಕೊಟ್ಟಿತು.

ಇದರಿಂದ ಪ್ರಾರಂಭದ ದೆಶೆಯುಲ್ಲಿ ಹಾಗು ಸಾಕಷ್ಟು ಕಾಲಾವಧಿಯು ವರೆಗೆ ಪುಸ್ತಕಭಾಂಡಾರ ಚಳವಳಿಗೆ ಆವಶ್ಯ ವಿದ್ದಷ್ಟು ಹಣವನ್ನು ಎತ್ತಲಿಕ್ಕೆ ಅಪ್ಪಣೆ ಕೊಡದೆ ಸಣ್ಣ ಪ್ರಮಾಣದಲ್ಲಿ ಅವಕಾಶವು ಒದಗಿಸಲ್ಪಟ್ಟಿತು; ಮತ್ತು ಅದಕ್ಕೆ ಪ್ರಬುದ್ಧ ದೆಶೆಯು ಪ್ರಾಪ್ತವಾದಾಗ ಅನಿರ್ಬಂಧ ಹಣದ ಅನುಕೂಲತೆಯು ಒದಗಿಸಲ್ಪಟ್ಟಿತು.

ಭಾರತ

ಮದ್ರಾಸ ಕಾಯದೆ ೧೯೪೮

ಇನ್ನು ಗ್ರೇಟ ಬ್ರಿಟನ್ನಿನಿಂದ ಭಾರತದತ್ತ ಹೊರಳುವಾ. ಭಾರತದಲ್ಲಿ ಮೊದಲನೆಯ ಪುಸ್ತಕಭಾಂಡಾರ ಕಾಯದೆಯು ೧೯೪೮ ರಲ್ಲಿ ಮದ್ರಾಸ ರಾಜ್ಯದಲ್ಲಿ ಆಯಿತು. ಇದರಲ್ಲಿ ಆರ್ಥಿಕ ಅವಕಾಶಗಳನ್ನು ಕಲ್ಪಿಸುವಾಗ ಮೇಲೆ ಹೇಳಿದ ಯಾವುದೊಂದು ಪದ್ಧತಿಯುನ್ನು ಅನುಸರಿಸದೆ ಬ್ರಿಟನದ ಉದಾಹರಣೆಯುನ್ನು ಅನುಕರಿಸಿ ಸ್ವಲ್ಪ ಮಟ್ಟಿಗೆ ಹಣದ ಅನು-ಕೂಲತೆಯುನ್ನು ಒದಗಿಸಲಾಯಿತು. ಭಾರತೀಯರಿಗೆ ಅಪರಿಚಿತ ವಾದ ಮೊದಲನೆಯ ಇಂತಹ ಮುಂಚೂಣಿ ಕಾಯದೆಯು ಶಾಸಕರಿಗೆ ಗ್ರಾಹ್ಯವಾಗುವಂತೆ ಅನುಕೂಲಸಿಂಧು ತತ್ವವನ್ನನು

ಸರಿಸಿ ಆಸಿ ಕರದ ಮೇಲೆ ರೂಪಾಯಿಗೆ ೩ ಸೈಸೆಯಂತೆ ಅಲ್ಪವಾದ ಸುಂಕವನ್ನು ವಿಧಿಸಲಾಯಿತು. ಆದರೆ ಇದನ್ನು ಹೆಚ್ಚಿಸಲಿಕ್ಕೆ ಅವಕಾಶವನ್ನು ಮಾಡಿತು. ಸ್ಥಾನಿಕ ಪುಸ್ತಕಭಾಂಡಾರ ಅಧಿಕಾರ ಮಂಡಲಿಯು ಇಷ್ಟಪಟ್ಟರೆ ಇಲ್ಲವೆ ಸರಕಾರದವರು ಆದೇಶ ನೀಡಿದರೆ ಈ ಸುಂಕದ ದರವನ್ನು ಹೆಚ್ಚಿಸಲಿಕ್ಕೆ ಈ ಕಾಯಿದೆಯಲ್ಲಿ ಅವಕಾಶವಿದೆ. ಆದರೆ ೧೫ ವರುಷ ಗತಿಸಿದರೂ ಇನ್ನೂವರೆಗೆ ಅದೇ ಸುಂಕದ ದರವೇ ಅಸ್ತಿತ್ವದಲ್ಲಿ ಇದೆ. ಯಾವ ಪುಸ್ತಕಭಾಂಡಾರ ಅಧಿಕಾರ ಮಂಡಲಿಯಾದರೂ ಇಲ್ಲವೆ ಸರಕಾರವಾದರೂ ಅದನ್ನು ಹೆಚ್ಚಿಸಲಿಕ್ಕೆ ಇಷ್ಟಪಟ್ಟಿಲ್ಲ.

ಈ ರೀತಿಯು ಸುಂಕದಿಂದ ಅಲ್ಪ ಪ್ರಮಾಣದಲ್ಲಿ ಹಣ ದೊರಕುವದೆಂಬುದನ್ನು ಗಮನಿಸಿ ಹಾಗು ತಮ್ಮ ಕರ್ತವ್ಯ ಹೊಣೆಗಳನ್ನು ಲಕ್ಷಿಸಿ ಸರಕಾರದವರು ಸುಂಕದಿಂದ ದೊರಕುವ ಆದಾಯಕ್ಕೆ ಕಡಿಮೆಯಿಲ್ಲದಷ್ಟು ಹಣವನ್ನು ಸಹಾಯ ಧನವೆಂದು ಸ್ಥಳಿಕ ಪುಸ್ತಕಭಾಂಡಾರ ಅಧಿಕಾರಮಂಡಲಿಗೆ ಸಲ್ಲಿಸುವರು. ಇದರ ಹೊರತಾಗಿ ಸರಕಾರದವರು ಪುಸ್ತಕ ಭಾಂಡಾರಗಳಿಗೆ ಸಂಬಂಧಿಸಿದ ವಿಶಿಷ್ಟ ಉದ್ದೇಶಗಳಿಗಾಗಿ ವಿಶೇಷ ಸಹಾಯಧನವನ್ನು ಕೊಡಲಿಕ್ಕೆ ಈ ಕಾಯಿದೆಯಲ್ಲಿ ಅವಕಾಶವುಂಟು.

ಹೈದರಾಬಾದ ಕಾಯದೆ ೧೯೫೫

ಮದ್ರಾಸ ರಾಜ್ಯದ ನಂತರ ಪುಸ್ತಕಭಾಂಡಾರ ಕಾಯದೆಯನ್ನು ಮಾಡಿದ ಎರಡನೆಯ ರಾಜ್ಯವೆಂದರೆ ಪೂರ್ವದ

ಹೈದರಾಬಾದವ ಸಂಸ್ಥಾನವು. ಅದು ೧೯೫೫ ರಲ್ಲಿ ಆಯಿತು. ಹಾಗು ರಾಜ್ಯ ಪುನರ್ಘಟನೆಯು ಪರಿಣಾಮವಾಗಿ ಆಗುವ ಸ್ಥಿತ್ಯಂತರಗಳನ್ನು ಗಮನಿಸಿ ಅದನ್ನು ಕೂಡಲೇ ಜಾರಿಯಲ್ಲಿ ತರಲಾಯಿತು. ಅದರಲ್ಲಿಯು ಆರ್ಥಿಕ ಯೋಜನೆಗಳು ಮದ್ರಾಸ ರಾಜ್ಯದ ಕಾಯಿದೆಯಂತೆಯೆ ಇದ್ದವು. ಆದ್ದರಿಂದ ಅದರಲ್ಲಿ ವಿಶೇಷವಾಗಿ ಹೇಳಿಕೊಳ್ಳುವಂತಹದೇನೂ ಇರಲಿಲ್ಲ ಮೇಲಾಗಿ ರಾಜ್ಯ ಪುನರ್ಘಟನೆಯು ಪರಿಣಾಮವಾಗಿ ಹೈದರಾಬಾದ ಸಂಸ್ಥಾನವು ಅಸ್ತಂಗತವಾಗಿ ಅದರ ಭಾಗಗಳು ಹರಿದು ನೆರೆಯ ಮೂರೂ ರಾಜ್ಯಗಳಲ್ಲಿ ಹಂಚಿ ಹೋದುದರಿಂದ ಆ ಕಾಯುದೆಯ ಸ್ಪಷ್ಟ ಪರಿಣಾಮವು ಕಂಡುಬರಲೇ ಇಲ್ಲ.

ಆಂಧ್ರ ಪ್ರದೇಶ ಕಾಯುದೆ ೧೯೬೦

ಆಂಧ್ರ ಪ್ರದೇಶ ರಾಜ್ಯವು ಪೂರ್ವದ ಮದ್ರಾಸ ರಾಜ್ಯದ ಭಾಗಗಳನ್ನು ಹಾಗು ಹೈದರಾಬಾದ ಸಂಸ್ಥಾನದ ಭಾಗಗಳನ್ನು ಒಳಗೊಂಡು ೧೯೫೬ ರಲ್ಲಿ ನಿರ್ಮಾಣವಾಯಿತು. ಆದ್ದರಿಂದ ಈ ರಾಜ್ಯದಲ್ಲಿ ಮದ್ರಾಸ ೧೯೪೮ ರ ಕಾಯಿದೆ ಹಾಗೂ ಹೈದರಾಬಾದ ೧೯೫೫ ರ ಕಾಯಿದೆ ಆಯಾ ಭಾಗಗಳೊಂದಿಗೆ ಬಳುವಳಿಯಾಗಿ ಬಂದವು. ಆದುದರಿಂದ ಈ ಹೊಸ ರಾಜ್ಯಕ್ಕೆ ಪುಸ್ತಕಭಾಂಡಾರಗಳ ಹೊಸ ಕಾಯುದೆಯನ್ನು ಮಾಡುವ ಆವಶ್ಯಕತೆಯುಂಟಾಗಲಿಲ್ಲ. ಆದರೆ ಬದಲಾದ ಪರಿಸ್ಥಿತಿ-ಯಿಂದಾಗಿ ಅಸ್ತಿತ್ವದಲ್ಲಿದ್ದ ಕಾಯಿದೆಗಳನ್ನೇ ಒಂದುಗೂಡಿಸಿ ಹೊಸ ಪರಿಸ್ಥಿತಿಗೆ ಯೋಗ್ಯವೆಂದು ಕಂಡುಬಂದ ಕೆಲವು ಮಾರ್ಪಾಟುಗಳನ್ನು ಮಾಡಿ ೧೯೬೦ ರ ಕಾಯುದೆಯೆಂದು

ನಾಮಕರಣವಾಯಿತು. ಹಣಕಾಸಿಗೆ ಸಂಬಂಧಿಸಿದ ಕಲಮು ಗಳು ಮದ್ರಾಸ ಕಾಯದೆಯ ಮಾದರಿಯಲ್ಲಿಯೇ ಉಳಿದಿವೆ. ಆದರೆ ಆಧುನಿಕ ಪರಿಸ್ಥಿತಿಗೆ ಅವಶ್ಯವೆಂದು ಕಂಡುಬಂದಂತೆ ಸುಂಕದ ದರವನ್ನು ೩ ಪೈಸೆಯಿಂದ ೪ ಪೈಸೆಗೆ ಏರಿಸಲಾಗಿದೆ.

ಕೇಂದ್ರ ಸರಕಾರದ ಪುಸ್ತಕಭಾಂಡಾರ ಸಲಹಾ ಸಮಿತಿ ವರದಿ ೧೯೫೯

ಈ ಸಲಹಾ ಸಮಿತಿಯ ವರದಿಯು ಇತರ ವಿಷಯ ಗಳಲ್ಲಿಯಂತೆಯೇ ಹಣಕಾಸಿನ ವಿಷಯವಾಗಿ ಮಾಡಿದ ಶಿಫಾ ರಸು ಒಂದು ಮೈಲುಗಲ್ಲಾಗಿದೆ. ಏಕೆಂದರೆ ಈ ಸಮಿತಿ ಯವರು ಪುಸ್ತಕಭಾಂಡಾರಗಳ ಬೆಳವಣಿಗೆ ಅವಶ್ಯವಿದ್ದ ಹಣ ಕಾಸಿನ ವ್ಯವಸ್ಥೆಗೆ–ಅಸ್ತಿತ್ವದಲ್ಲಿರುವ ಕಾಯದೆಗಳು ಜನರಿಂದ ವಿರೋಧವುಂಟಾಗದಂತೆ ಅನುಕೂಲಸಿಂಧು ತತ್ವವನ್ನು ಆಧರಿ ಸದೆ–ಹಣದ ಅವಶ್ಯಕತೆ ಎಷ್ಟೆಂಬುದನ್ನು ವಿವರವಾಗಿ ಅಭ್ಯಸಿಸಿ, ಆಲೋಚಿಸಿ ಆರಂಭದ ಮಟ್ಟದಲ್ಲಿಯೇ ಅದು ಇಡೀ ಭಾರತದಲ್ಲಿ ೨೩ ಕೋಟಿ ರೂಪಾಯಿ ಆವರ್ತ ವೆಚ್ಚ ತಗಲುವದೆಂದು ಅಂದಾಜು ಮಾಡಲಾಗಿದೆ– ಅದಕ್ಕೆ ತಕ್ಕಷ್ಟು ಹಣವನ್ನು ಒದ ಗಿಸುವ ಶಿಫಾರಸು ಮಾಡಿದ್ದಾರೆ. ಈ ಕುರಿತು ಅವರು ಹೇಳಿ ರುವದೇನಂದರೆ “ಪುಸ್ತಕಭಾಂಡಾರ ಸೇವೆಯ ಹೊಣೆಯು ಸರಕಾರದವರ ಹೊಣೆಯಾಗಿರತಕ್ಕದ್ದು. ಇದರಿಂದ ಅದಕ್ಕೆ ಅವಶ್ಯವಿರುವ ಹಣವನ್ನು ಸಾರ್ವಜನಿಕ ಹಣಕಾಸಿನಿಂದ ಒದ ಗಿಸತಕದ್ದೆಂದು ಅರ್ಥವಾಗುತ್ತದೆ. ಉತ್ತರ ಕಂಡುಕೊಳ್ಳ ಬೇಕಾಗಿರುವ ಮೊದಲನೆಯ ಪ್ರಶ್ನೆಯು ಎಷ್ಟು ಹಣವು ಅವಶ್ಯ

ವಿದೆ, ಮತ್ತು ಎರಡನೆಯದು, ಅದನ್ನು ಹೇಗೆ ದೊರಕಿಸತಕ್ಕದ್ದು ಎಂಬುದು ಸ್ಪಷ್ಟವಾಗಿ ಕಂಡುಬರುವದು."

ಈ ಅಗತ್ಯತೆ ಹಾಗು ಆಧಾರಗಳಿಂದ ಮಧ್ಯಮ ತರಗತಿಯ ಪುಸ್ತಕಭಾಂಡಾರ ಸೇವೆಗಾಗಿ ಅವರು ಈ ರೀತಿಯಾಗಿ ಶಿಫಾರಸು ಮಾಡಿರುವರು.

(ಅ) ಸರಕಾರದವರು ಎಲ್ಲ ಸ್ಥಳಗಳಲ್ಲಿ ಆಸ್ತಿಕರದ ಮೇಲೆ ರೂಪಾಯಿಗೆ ೬ ಪೈಸೆಯಂತೆ ಸುಂಕವನ್ನು ಎತ್ತತಕ್ಕದ್ದು, ಮತ್ತು ಸ್ಥಾನಿಕ ಸಮಿತಿಗಳಿಗೆ ಅದನ್ನು ಎತ್ತರಿಸಲಿಕ್ಕೆ ಪರವಾನಗಿ ಇರತಕ್ಕದ್ದು.

(ಬ) ಭಾರತ ಸರಕಾರದವರು ರಾಜ್ಯದಲ್ಲಿ ವಸೂಲಾದ ಸುಂಕಕ್ಕೆ ಸರಿಯಾಗುವಷ್ಟು ಹಣವನ್ನು ಆಯಾ ರಾಜ್ಯದ ಪುಸ್ತಕಭಾಂಡಾರ ಫಂಡಿಗೆ ಕೊಡತಕ್ಕದ್ದು.

(ಕ) ಪ್ರಾರಂಭದಲ್ಲಿ ರಾಜ್ಯ ಸರಕಾರಗಳು ವಸೂಲಾದ ಸುಂಕಕ್ಕೆ ಸರಿಯಾಗುವಷ್ಟು ಸಹಾಯಧನವನ್ನು ಕೊಡತಕ್ಕದ್ದು ಮತ್ತು ಕ್ರಮಶಃ ಮುಂದಿನ ೨೫ ವರುಷಗಳಲ್ಲಿ ಸಹಾಯಧನವನ್ನು ವಸೂಲಾದ ಸುಂಕದ ಮೂರು ಪಟ್ಟಿನಷ್ಟು ಎತ್ತರಿಸತಕ್ಕದ್ದು.

(ಡ) ಸರಕಾರವು ಇಂತಹ ಸಹಾಯವನ್ನು ಹಣದ ರೂಪದಿಂದ ಇಲ್ಲವೆ ಸೌಕರವರ್ಗವನ್ನು ಒದಗಿಸುವ ಮೂಲಕ ಇಲ್ಲವೆ ಇವೆರಡೂ ರೀತಿಯಿಂದ ಕೊಡಬಹುದು.

(ಇ) ರಾಜ್ಯ ಸರಕಾರಗಳು ಇದನ್ನು ಕುರಿತು ಒಂದು ವ್ಯಾಪಕವಾದ ಪುಸ್ತಕಭಾಂಡಾರ ಕಾಯದೆಯನ್ನು ಮಾಡತಕ್ಕದ್ದು.

ಮೈಸೂರು ಕಾಯದೆ ೧೯೬೫

ಮೈಸೂರು ರಾಜ್ಯದ ಕಾಯದೆಯು ಶೀರ ಆಧುನಿಕವಿದ್ದು ಅದು ಈ ದಿಶೆಯಲ್ಲಿ ತಜ್ಞರ ಹಾಗೂ ಸಮಿತಿಗಳ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಪುರೋಗಾಮಿ ಅಂಶಗಳನ್ನು ಒಳಗೊಂಡಿದೆ. ಈ ಕಾಯದೆಯನ್ನು ವಾಡಿಕೆಯಂತೆ ಸರಕಾರದ ಸಂಬಂಧಿಸಿದ ಶಾಖೆಗಳ ವರಿಷ್ಠರು ರಚಿಸದೆ. ಅದಕ್ಕಾಗಿ ಪ್ರತ್ಯೇಕವಾಗಿ ನಿಯಮಿತವಾದ ಒಂದು ತಜ್ಞರ ಸಮಿತಿಯಿಂದ ರೂಪಿತವಾಯಿತು. ಆದುದರಿಂದ ಅದು ಇತರ ರಾಜ್ಯ ಕಾಯದೆಗಳಿಗೆ ಒಂದು ಮಾದರಿಯಾಗಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅದರಲ್ಲಿ ಒದಗಿದ ಹಣಕಾಸಿನ ಸಂಬಂಧವ ಯೋಜನೆಗಳೆಂದರೆ—

(ಅ) ಒಂದು ಲಕ್ಷಕ್ಕಿಂತ ಮೀರಿದ ಜನಸಂಖ್ಯೆ ಇರುವ ನಗರಗಳನ್ನು ಮತ್ತು ಜಿಲ್ಲೆಯ ಉಳಿದ ಭಾಗವನ್ನು ಪ್ರತ್ಯೇಕೀಕರಿಸಿ ಅವುಗಳಿಗೆ ಆರ್ಥಿಕ ಹಾಗೂ ಆಡಳಿತ ದೃಷ್ಟಿಯಿಂದ ಅವನ್ನು ಬೇರೆ ಬೇರೆ ಘಟಕಗಳನ್ನಾಗಿ ಮಾಡುವದು.

(ಬ) ಈ ಮೊದಲಿನ ಕಾಯದೆಗಳಲ್ಲಿ ಒದಗಿಸಿದ ಆದಾಯವನ್ನು ಬಲಪಡಿಸುವದು.

(ಗ) ಭಾರತದಲ್ಲಿಯ ಪ್ರಚಲಿತ ಕಾಯದೆಗಳು ಹಾಗು ಪುಸ್ತಕಭಾಂಡಾರ ಸಲಹಾ ಸಮಿತಿಯು ನಗರಗಳಲ್ಲಿ ಆಸ್ತಿಕರವನ್ನು ಮಾತ್ರ ವಿಧಿಸಿವರೆ, ಮೈಸೂರು ಕಾಯದೆಯಲ್ಲಿ ಇತರ

ಮೂರು ಸುಂಕ ಮೂಲಗಳನ್ನು ಕಂಡುಹಿಡಿಯಲಾಗಿದೆ. ಮತ್ತು ಇವುಗಳ ಮೇಲೆ ಸಹ ರೂಪಾಯಿಗೆ ೩ ಪೈಸೆಯಂತೆ ಸುಂಕ ವನ್ನು ವಿಧಿಸಲಾಗಿದೆ; (i) ಜಕಾತಿ (ii) ವಾಹನ ತೆರಿಗೆ ಮತ್ತು (iii) ವೃತ್ತಿತೆರಿಗೆ ಇವೇ ಹೆಚ್ಚಿನ ಆದಾಯ ಮೂಲ ಗಳಾಗಿವೆ. ಹೀಗೆ ದೊರಕಿಸಲಾದ ಅಂಕಿಸಂಖ್ಯೆಗಳಿಂದ ಆಸ್ತಿ ಕರ ಸುಂಕದಿಂದ ದೊರಕುವ ಆದಾಯಕ್ಕಿಂತ ಈ ಹೆಚ್ಚಿನ ಮೂಲಗಳಿಂದ ಅದರ ಎರಡರಷ್ಟು ಆದಾಯ ದೊರೆತು ಒಟ್ಟಿನ ಮೇಲೆ ಆದಾಯದ ಮೂರು ಪಟ್ಟು ಆಗುವದು. ನಗರ ಪುಸ್ತಕಭಾಂಡಾರ ಅಧಿಕಾರ ಮಂಡಲಿಗಳ ಆದಾಯಕ್ಕೆ ಇದೊಂದು ಹೊಸ ಉಪಯುಕ್ತ ಮತ್ತು ಲಾಭಕರವಾದ ಮಾರ್ಗ.

(ಖ) ಪ್ರಚಲಿತ ಕಾಯಿದೆಗಳು ಜಿಲ್ಲೆಯಲ್ಲಿ ಅಂದರೆ ನಗರಪ್ರದೇಶವನ್ನು ಹೊರತುಪಡಿಸಿ ಇರುವ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ತಿಕರವು ಮಾತ್ರ ಆದಾಯ ಮೂಲವಾಗಿದೆ. ಆದರೆ ಮೈಸೂರು ಕಾಯಿದೆಯಲ್ಲಿ ಅದರ ಜೊತೆಗೆ ಭೂಕಂದಾಯವೂ ಕೂಡ ಆದಾಯಕರವಾಗುವದು. ಆಯಾ ಜಿಲ್ಲೆಯಲ್ಲಿ ಸಂದಾಯವಾಗುವ ಭೂಕಂದಾಯದಲ್ಲಿ ನೂರಕ್ಕೆ ಮೂರರಷ್ಟು ಹಣವು ಜಿಲ್ಲಾ ಪುಸ್ತಕಭಾಂಡಾರ ಅಧಿ ಕಾರ ಮಂಡಲಿಗೆ ದೊರಕುವದು.

(ಕ) ಇದಲ್ಲದೆ ಈಗಿನ ಕಾಯಿದೆಗಳಲ್ಲಿ ಆಸ್ತಿಕರ ಸುಂಕವನ್ನು ಹೆಚ್ಚಿಸಲಿಕ್ಕೆ ಅವಕಾಶವಿರುವಂತೆ ಈ ಕಾಯಿದೆ ಯಲ್ಲಿ ಕೂಡ. ಪುಸ್ತಕಭಾಂಡಾರ ಅಧಿಕಾರ ಮಂಡಲಿಗಳಿಗೆ ಇಷ್ಟವಾದರೆ ಅದರಲ್ಲಿ ನಿರ್ದೇಶಿತವಾದ ಸುಂಕಗಳನ್ನು ೩ ಪೈಸೆ

ಗಳಿಂದ ೬ ಪೈಸೆಗಳ ವರೆಗೆ ಎತ್ತರಿಸುವ ಅವಕಾಶವನ್ನು ಮಾಡಲಾಗಿದೆ.

(ಡ) ಮೇಲೆ ಹೇಳಿದಂತೆ ಆದಾಯ ಮೂಲಗಳನ್ನು ಹೆಚ್ಚಿಸಲು ಮತ್ತು ಬಲಪಡಿಸಲು ಈ ಮೊದಲು ಬಗೆಯಲಾರದ ಹೊಸ ದಿಟ್ಟ, ಪ್ರೋತ್ಸಾಹಕರವಾದ ಹಾಗು ಪ್ರಗತಿಪರವಾದ ಹೆಜ್ಜೆಯೆಂದರೆ, ಇದಕ್ಕಿಂತಲೂ ಹೆಚ್ಚಿನ ಕುತೂಹಲಕರವಾದ ಹಾಗು ಆಶ್ಚರ್ಯವೆನಿಸುವ ಆರ್ಥಿಕ ಅವಕಾಶವು ನಗರ ಹಾಗೂ ಜಿಲ್ಲಾ ಪುಸ್ತಕಭಾಂಡಾರ ಅಧಿಕಾರ ಮಂಡಲಿಗಳಿಗೆ ಅಪರೋಕ್ಷವಾಗಿ ದಯಪಾಲಿಸಲ್ಪಟ್ಟಿರುವದು. ಅದೇನಂದರೆ. ರಾಜ್ಯದಲ್ಲಿರುವ ಪುಸ್ತಕಭಾಂಡಾರ ಸೇವೆಯ ನೌಕರವರ್ಗವೆಲ್ಲವೂ ಸರಕಾರೀ ನೌಕರರಾಗುವದು, ಮತ್ತು ಇವರ ಸಂಬಳ. ಸಾರಿಗೆ ಭತ್ತೆ ಮೊದಲಾದ ನೌಕರ ವೆಚ್ಚವನ್ನು ಸರಕಾರೀ ಬೊಕ್ಕಸದಿಂದಲೇ ಕೊಡಲಾಗುವದು. ಪುಸ್ತಕಭಾಂಡಾರ ಸಲಹಾ ಸಮಿತಿಯವರಾದರೂ ಇಂತಹ ಯೋಜನೆಯನ್ನು ಮಾಡಿದ್ದಿಲ್ಲ. ಅವರು ನೌಕರ ವರ್ಗವನ್ನು ಸರಕಾರದವರು ಕೆಲವಟ್ಟಿಗೆ ಒದಗಿಸಬೇಕೆಂದು ಸೂಚಿಸಿದ್ದರು. ಆದರೆ ಅದು ಸರಕಾರವು ಕೊಡುವ ಸಹಾಯಧನಕ್ಕೆ ಪ್ರತಿಯಾಗಿ ಇಲ್ಲವೆ ನೌಕರ ವರ್ಗದ ವೆಚ್ಚವನ್ನು ಸಹಾಯಧನದಲ್ಲಿ ಕಳೆದು ಕೊಡಬೇಕೆಂದು ಬಗೆದಿದ್ದರು ಆದರೆ ಈ ರೀತಿಯಾಗಿ ಸರಕಾರದವರು ನೌಕರ ವರ್ಗದ ವೆಚ್ಚವನ್ನು ತಾವೇ ವಹಿಸುವದು ಒಂದು ಅಪ್ರತಿಮ ವರವಾಗಿದೆ. ಇದು ಪುಸ್ತಕಭಾಂಡಾರದ ಬಗೆಗಿರುವ ಮೈಸೂರು ಸರಕಾರದವರ ವಿಶೇಷ ಉದಾರ ಬುದ್ಧಿ ಹಾಗೂ ಧೋರಣೆಗಳನ್ನು ನಿರ್ಧರಿಸುವ ಸ್ಪಷ್ಟ ದ್ಯೋತಕವಾಗಿದೆ

ಸರಿಯಾದ ಪುಸ್ತಕಭಾಂಡಾರ ಸೇವೆಯನ್ನು ಒದಗಿಸ ಲಿಕ್ಕೆ ಯೋಗ್ಯ ಆರ್ಥಿಕ ವ್ಯವಸ್ಥೆಯು ಜೀವಾಳವಾಗಿದೆ. ಆದು ದರಿಂದ ಪುಸ್ತಕಭಾಂಡಾರಗಳಿಗಾಗಿ ಹೆಚ್ಚು ಹೆಚ್ಚಾಗಿ ಹಣ ವೊದಗಿಸುವದು ಅವಶ್ಯವಾಗಿದೆ. ಕಾಲಕಾಲಕ್ಕೆ ತಯಾರಿಸಿದ ಪುಸ್ತಕಭಾಂಡಾರ ಕಾಯದೆಗಳು ಇದನ್ನೇ ನಿದರ್ಶಿಸುತ್ತವೆ.

೯. ರಾಜ್ಯಸರಕಾರದ ಹೊಣೆ

ಸಾರ್ವಜನಿಕ ಪುಸ್ತಕಭಾಂಡಾರ ಸೇವೆಯನ್ನು ಒದಗಿಸುವಲ್ಲಿ ಸರಕಾರವು ಮುಂದೆ ಬಂದು ಸಂಪೂರ್ಣ ಹೊಣೆಯನ್ನು ಅದುವೇ ಹೊರಬೇಕು ಮತ್ತು ಹೊರಬೇಕಾಗಿದೆಯೆಂಬುದನ್ನು ಈ ಮೊದಲೇ ಹೇಳಲಾಗಿದೆ. ಆದರೆ ಈ ದಿಶೆಯಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶ ಉಂಟು. ಇದರ ಪ್ರಕಾರ ಸರಕಾರದವರು ಸುಂಕ ಆಕರಣೆ ಹಾಗೂ ಇತರ ವಿಷಯಗಳನ್ನು ಕುರಿತು ಕಾಯದೆ ಮಾಡಿದರೂ ಪುಸ್ತಕಭಾಂಡಾರ ಸೇವೆಯ ಹೊಣೆಯನ್ನು ಸರಕಾರವೇ ಹೊರಬೇಕಾಗಿಲ್ಲ. ಪುಸ್ತಕ-ಭಾಂಡಾರ ಸೇವೆಯು ಸ್ಥಾನಿಕವಾದುದರಿಂದ ಇದನ್ನು ಸ್ಥಾನಿಕ ಸಂಸ್ಥೆಗಳಿಗೆ ಒಪ್ಪಿಸುವದು ಸಮಂಜಸ. ಸ್ಥಾನಿಕ ಅನು-ಕೂಲತೆ, ಅವಶ್ಯಕತೆ ಮತ್ತು ಇತರ ಸೇವೆಗಳನ್ನು ಮುನಸಿ-ಪಾಲಿಟಿ ಮುಂತಾದ ಸ್ಥಾನಿಕ ಸಂಸ್ಥೆಗಳು ಒದಗಿಸುವುದರಿಂದ ಪುಸ್ತಕಭಾಂಡಾರ ಸೇವೆಯನ್ನೂ ಕೂಡ ಅವರಿಗೆ ಒಪ್ಪಿಸಬೇಕೆಂದು ಕೆಲವರ ಅಭಿಪ್ರಾಯ. ಇದರ ಸಮರ್ಥನೆಗಾಗಿ ಅವರು ಬ್ರಿಟಿಶ್ ಪುಸ್ತಕಭಾಂಡಾರ ಕಾಯಿದೆಯನ್ನು (ಅದರಲ್ಲಿಯೂ ಕೂಡ ೧೯೬೪ ರ ಕಾಯದೆಯ ಪ್ರಕಾರ ಕೆಲವೊಂದು ಮಹತ್ವದ ಬದಲಾವಣೆಯಾಗಿದೆ) ತೋರಿಸುತ್ತಾರೆ. ಅಲ್ಲದೆ ಬ್ರಿಟಿಶ್ ಪಾರ್ಲಿಮೆಂಟು ಎಲ್ಲ ಪ್ರಜಾಸತ್ತಾತ್ಮಕ ಆಡಳಿತಗಳ ಶಾಸನಸಭೆಗಳ ಮಾತೃಸ್ಥಾನದಲ್ಲಿರುವಂತೆ ಬ್ರಿಟಿಶ್ ಪುಸ್ತಕಭಾಂಡಾರ ಕಾಯಿದೆಯು ಮಾತೃಸ್ಥಾನದಲ್ಲಿದ್ದು ಸ್ಫೂರ್ತಿ ಆಶೋತ್ತರಗಳನ್ನು ನೀಡುತ್ತದೆ ಎಂಬುದು ಅವರ ವಾದ.

ಆದರೆ ಬ್ರಿಟನ್‌ದಲ್ಲಿಯೇ ತಜ್ಞರ ಅಭಿಪ್ರಾಯವು ಈ ಬಗ್ಗೆ ಕುಂದನ್ನು ಸ್ಪಷ್ಟವಾಗಿ ತೋರಿಸಿ ಅದನ್ನು ಸರಿಪಡಿಸ ಬೇಕೆಂದು ಒತ್ತಾಯಿಸುತ್ತಿದ್ದಾರೆ. ಇತ್ತೀಚೆಗೆ ೧೯೫೮ ರಲ್ಲಿ ಬ್ರಿಟಿಶ ಸರಕಾರದವರು ರಾಬರ್ಟ್ಸ ಸಮಿತಿಯನ್ನು ನಿಯಮಿ-ಸಿದ್ದರು. ಅವರು ಪುಸ್ತಕಭಾಂಡಾರ ಸೇವೆಯ ಬಗ್ಗೆ ಸರಕಾರವು ಹೊಣೆಯನ್ನು ಹೊರಬೇಕೆಂದು ನಿಶ್ಚಯಿಸಿ ಈ ಪ್ರಕಾರ ಶಿಫಾರಸು ಮಾಡಿದ್ದಾರೆ.

"(೧) ಶಿಕ್ಷಣ ಮಂತ್ರಿಗಳು ಸಾರ್ವಜನಿಕ ಪುಸ್ತಕ ಭಾಂಡಾರ ಸೇವೆಯ ಮೇಲ್ವಿಚಾರಣೆ ಮಾಡುವ ಸಾಮಾನ್ಯ ಹೊಣೆಯನ್ನು ನಿರ್ವಹಿಸತಕ್ಕದ್ದು.

(೨) ಶಿಕ್ಷಣ ಮಂತ್ರಿಗಳಿಗೆ ತಪ್ಪಿತಸ್ಥವೆಂದು ಕಂಡು ಬಂದ ಸಾರ್ವಜನಿಕ ಪುಸ್ತಕಭಾಂಡಾರ ಅಧಿಕಾರಮಂಡಲಿ ಯನ್ನು ಅದು ತನ್ನ ಕಾಯದೆಬದ್ಧ ಕರ್ತವ್ಯಗಳನ್ನು ಈಡೇರಿಸಲಿಕ್ಕೆ ಒತ್ತಾಯಿಸುವ ಅಧಿಕಾರವಿರತಕ್ಕದ್ದು.

(೩) ಒಂದು ಯಶಸ್ವಿ ಸಾರ್ವಜನಿಕ ಪುಸ್ತಕಭಾಂಡಾರ ಸೇವೆಯನ್ನು ಒದಗಿಸುವದು ಪ್ರತಿಯೊಂದು ಸಾರ್ವಜನಿಕ ಪುಸ್ತಕಭಾಂಡಾರ ಅಧಿಕಾರ ಮಂಡಲಿಯ ಕಾಯದೆಬದ್ಧ ಕರ್ತವ್ಯವಾಗಿರತಕ್ಕದ್ದು."

ಈ ಶಿಫಾರಸುಗಳನ್ನು ಮಾನ್ಯಮಾಡಿ ೧೯೬೪ರ ಕಾಯಿದೆ ಯಲ್ಲಿ ಇವುಗಳನ್ನು ನಿರ್ದೇಶಿಸಲಾಗಿದೆ.

ಭಾರತ ಸರಕಾರದವರು ನಿಯಮಿಸಿದ ಸಲಹಾ ಸಮಿತಿಯು ಮುನಿಸಿಪಾಲಿಟಿಗಳಂಥ ಸ್ಥಾನಿಕ ಸಂಸ್ಥೆಗಳಿಗೆ

ಪುಸ್ತಕಭಾಂಡಾರ ಸೇವೆಯ ಹೊಣೆಯನ್ನು ಹೊರಿಸುವ ವಿಷಯವನ್ನು ಆಲೋಚಿಸಿ ಅದಕ್ಕೆ ಪ್ರತಿಕೂಲವಾಗಿರುವ ಅಂಶ ವನ್ನು ಹೇಳಿ ಸುಗಮ ಮಾರ್ಗವನ್ನು ತಿಳಿಸಿದ್ದಾರೆ. ಅವರು ಹೇಳಿರುವದೇನಂದರೆ– "ಜಿಲ್ಲಾ ಬೋರ್ಡ್ ಮತ್ತು ಮುನಿಸಿ-ಪಾಲಿಟಿಗಳಿಗಷ್ಟೇ ಪುಸ್ತಕಭಾಂಡಾರ ಸೇವೆಯನ್ನು ಒದಗಿಸಲಿಕ್ಕೆ ಪರವಾನಗಿ ಕೊಡುವದನ್ನು ನಾವು ಅನುಮೋದಿಸದಿದ್ದರೆ ಅದಕ್ಕೆ ಮುಖ್ಯ ಕಾರಣವೇನಂದರೆ, ಪ್ರತಿಯೊಂದು ಕಡೆಯ ಲ್ಲಿಯೂ ಅಧಿಕಾರಿಗಳು ಚುನಾಯಿತ ಮಂಡಲಿಗಳಿಂದ ವಿಮುಖರಾಗುತ್ತಿದ್ದಾರೆ ಮತ್ತು ಪ್ರತಿಯೊಂದು ದೇಶದಲ್ಲಿಯೂ ರಾಜ್ಯಸರಕಾರಗಳು ಪರಿಹಾರವನ್ನು ಒದಗಿಸಬೇಕಾಗಿರುವ ವಿವಿಧ ಸಮಸ್ಯೆಗಳಿಗೆ ತಮ್ಮ ಉತ್ತಮ ಜ್ಞಾನ ಮತ್ತು ಸಂಘಟನೆ ಗಳನ್ನು ಉಪಯೋಗಿಸಲಿಕ್ಕೆ ಹವಣಿಸುತ್ತಿದ್ದಾರೆ. ಆದ್ದರಿಂದ ಸ್ವಾಭಾವಿಕವಾಗಿ ಗ್ರಾಮಪಂಚಾಯತಿಯು ಒಂದು ತುದಿಗೆ ಮತ್ತು ರಾಜ್ಯ ಹಾಗೂ ಕೇಂದ್ರ ಸರಕಾರಗಳು ಮತ್ತೊಂದು ತುದಿಯಲ್ಲಿರುವ ಅಂತಸ್ತಂತಸ್ತವಾಗಿರುವ ಆಡಳಿತಾಧಿಕಾರದ ಕಡೆಗೆ ನಾವು ಹೊರಳುತ್ತೇವೆ. ಇವುಗಳ ನಡುವೆ ಜಿಲ್ಲೆಗಳು, ನಗರ ಕಾರ್ಪೊರೇಶನಗಳು ಮತ್ತು ಹೊಸ ವಿಚಾರದಿಂದುದಿಸಿದ 'ಬ್ಲಾಕು'ಗಳು ಇರುತ್ತವೆ. ನಾವು ರಾಜ್ಯಸರಕಾರವು ಈ ಆಡಳಿತ ಘಟಕಗಳಲ್ಲಿ ಇಟ್ಟಿರುವ ದೃಷ್ಟಾಂಶಗಳನ್ನು ಉಪ ಯೋಗಿಸತಕ್ಕದ್ದು. ಮತ್ತು ಅದೇ ಕಾಲಕ್ಕೆ ಪ್ರತಿಯೊಂದು ಕಾರ್ಯಮಟ್ಟದಲ್ಲಿ ಈ ಸ್ಥಾನಿಕ ಸಮಿತಿಗಳನ್ನು ಆಡಳಿತ ಘಟಕಗಳೊಂದಿಗೆ ಜೊತೆಗೂಡಿಸತಕ್ಕದ್ದು."

ಈ ವಿಷಯದಲ್ಲಿ ಹೇಳತಕ್ಕಂಥ ಮತ್ತೊಂದು ಪ್ರಮುಖ ಅಂಶವೆಂದರೆ- ಪುಸ್ತಕಭಾಂಡಾರ ಸೇವೆಯನ್ನು ಕಾರ್ಯತಃ ನೀಡುವ ನೌಕರ ವರ್ಗದ ಸಲುವಾಗಿ ಆಡಳಿತ ಘಟಕಗಳು ಸಣ್ಣಸಣ್ಣವಾಗಿದ್ದರೆ ನೌಕರ ವರ್ಗದವರಿಗೆ ಅನುಕೂಲವಾದ ಹಾಗೂ ತೃಪ್ತಿಕರವಾದ ಪರಿಸ್ಥಿತಿ ಹಾಗು ಸೇವಾ ನಿಯಮ ಗಳನ್ನು ಉಂಟುಮಾಡುವದು ಸಾಧ್ಯವಾಗಲಾರದು. ಇಂತಹ ಪ್ರಸಂಗಗಳ ಮೂಲಕ ಬ್ರಿಟನ್ನಿನ ಪುಸ್ತಕಭಾಂಡಾರಿಗರಲ್ಲಿ ಸೇವಾ ಪರಿಸ್ಥಿತಿಯ ಕುರಿತು ಅಸಂತೃಪ್ತಿ ಉಂಟೆಂಬುದನ್ನು ಇಲ್ಲಿ ಗಮನಿಸಬಹುದು. ಆದರೆ ರಾಜ್ಯಸರಕಾರವು ಪುಸ್ತಕ ಭಾಂಡಾರ ಸೇವೆಯ ಸಂಪೂರ್ಣ ಹೊಣೆ ಹೊತ್ತಾಗ ಇಡೀ ರಾಜ್ಯವೇ ಒಂದು ಸೇವಾ ಘಟಕವಾಗಿ ಪರಿಣಮಿಸಿ ಈ ತರಹದ ಅನನುಕೂಲತೆ ಅಸಂತೃಪ್ತಿಗಳಿಗೆ ಎಡೆಕೊಡಲಾರದು. ಈ ವಿಷಯವನ್ನು ಸರಿಯಾಗಿ ಗ್ರಹಿಸಿ ಮೈಸೂರು ಪುಸ್ತಕ ಭಾಂಡಾರ ಕಾಯದೆಯಲ್ಲಿ 'ಮೈಸೂರು ಪುಸ್ತಕಭಾಂಡಾರ ಸೇವಾ' ವರ್ಗವನ್ನು ಕಲ್ಪಿಸಿದ್ದಾರೆ. ಆದರೆ ಆಂಧ್ರಪ್ರದೇಶ ಮತ್ತು ಮದ್ರಾಸ ಕಾಯದೆಗಳು ಈ ತರಹದ ಪ್ರೋತ್ಸಾಹ-ದಾಯಕ ಪರಿಸ್ಥಿತಿಗೆ ಎಡೆಯುಂಟುಮಾಡಿಲ್ಲ. ಆ ಕಾಯದೆಗಳ ಪ್ರಕಾರ ಸ್ಥಾನಿಕ ಪುಸ್ತಕಭಾಂಡಾರ ಅಧಿಕಾರ ಮಂಡಲಿಗಳು ತಮಗೆ ಅವಶ್ಯವಿದ್ದ ನೌಕರ ವರ್ಗವನ್ನು ತಾವೇ ಆಯ್ಕೆ ಮಾಡಿ ಕೊಂಡು ಅವರ ಸೇವಾ ನಿಯಮಗಳನ್ನು ತಾವೇ ನಿಷ್ಕರ್ಷಿಸು ವರು ಇವು ಸರಕಾರದ ಸೇವಾ ನಿಯಮಗಳಷ್ಟು ಪ್ರೋತ್ಸಾಹ ದಾಯಕವಿರಲಾರವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

೧೦. ಪ್ರತ್ಯೇಕ ಖಾತೆ

ಹಣಕಾಸಿನ ಬಗ್ಗೆ ಹೇಳುವಾಗ ಕಾಯದೆಯ ಉದ್ದೇಶವು ಪುಸ್ತಕಭಾಂಡಾರ ವ್ಯವಸ್ಥೆಗೆ ಸ್ವಾತಂತ್ರ್ಯ. ಸ್ವಯಂ ಪರಿಪೂರ್ಣತೆ ಹಾಗೂ ವ್ಯಕ್ತಿತ್ವಗಳನ್ನು ಒದಗಿಸುವದಾಗಿರುತ್ತದೆ ಎಂದು ಹೇಳಲಾಗಿದೆ. ಇನ್ನು ಇಂತಹ ಸ್ವಾತಂತ್ರ್ಯ, ಪರಿಪೂರ್ಣತೆಗಳುಳ್ಳ ವ್ಯಕ್ತಿತ್ವ ಉಂಟಾಗಬೇಕಾದರೆ ಅದಕ್ಕೆ ಸರಕಾರದ ಮಟ್ಟದಲ್ಲಿ ಒಂದು ಪ್ರತ್ಯೇಕ ಖಾತೆ (Department) ಏರ್ಪಡಿಸಬೇಕು. ಏಕೆಂದರೆ ಇವು ಪ್ರತ್ಯೇಕ ಖಾತೆಯ ಗುಣ, ಲಕ್ಷಣಗಳು. ಪ್ರತ್ಯೇಕ ಖಾತೆ ಇಲ್ಲದಿದ್ದರೆ ಇವಾವೂ ಉಂಟಾಗಲಾರವು ಮತ್ತು ಅದಕ್ಕೆ ಸ್ವತಂತ್ರತೆ ಇಲ್ಲ. ಬೇರೊಂದು ಖಾತೆಯ ಅಂಗವಾಗಿರಬೇಕಾಗುವದು. ಈ ಅಂಶವನ್ನು ಯುನೆಸ್ಕೊದವರು ಹೊರಡಿಸಿರುವ (Public library extension) ಪುಸ್ತಕದಲ್ಲಿ ಒತ್ತಿ ಹೇಳಲಾಗಿದೆ. ಅದು ಈ ಪ್ರಕಾರ ಇದೆ. "ಪುಸ್ತಕಭಾಂಡಾರ ಕಾರಭಾರವು (೧) ರಾಜ್ಯ ಸರಕಾರದ ಒಂದು ಸ್ವತಂತ್ರ ಖಾತೆ ಇಲ್ಲವೆ 'ಮಿನಿಸ್ಟ್ರಿ' ಆಗಿರಬಹುದು ಇಲ್ಲವೆ (೨) ಮತ್ತೊಂದು 'ಮಿನಿಸ್ಟ್ರಿ'ಯ ಉಪಖಾತೆಯಾಗಿರಬಹುದು. ಮೊದಲನೆಯದು ಉತ್ತಮವಾದದ್ದು. ಯಾಕಂದರೆ ಒಂದು 'ಮಿನಿಸ್ಟ್ರಿ'ಯು ಇತರ ಕಾರ್ಯಕಲಾಪಗಳಿಗೆ ಅಧೀನವಾಗಿರುವ ಇಲ್ಲವೆ ಆ 'ಮಿನಿಸ್ಟ್ರಿ'ಯ ಇತರ ಉದ್ದೇಶಗಳ ಅಭಿವೃದ್ಧಿಗಾಗಿ ಉಪಯೋಗಿಸಲ್ಪಡುವ ಇಂತಹ ಗಂಡಾಂತರಗಳಾವುವೂ

ಆದರಲ್ಲಿ ಇರುವದಿಲ್ಲ.” ಒಂದು ಉಪಜಾತಿಯಾಗಿರುವುದರಿಂದ ಮಹತ್ವ, ಪ್ರತಿಷ್ಠೆಗಳು ದೊರಕಲಾರವು. ಮತ್ತು ಅದು ತಕ್ಕ ಬೆಳವಣಿಗೆಯನ್ನು ಹೊಂದುವದು ಕಠಿಣ. ಅದು ಕುಂಠಿತನಾದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಆದುದರಿಂದ ಸಾರ್ವಜನಿಕ ಪುಸ್ತಕಭಾಂಡಾರಗಳಿಗಾಗಿ ಒಂದು ಪ್ರತ್ಯೇಕ ಖಾತೆಯನ್ನು ಪ್ರತಿಪಾದಿಸಲಾಗಿದೆ.

ಪ್ರತ್ಯೇಕ ಖಾತೆಯ ಅವಶ್ಯಕತೆಯನ್ನು ಬಿಂಬಿಸುವ ಕೆಳಗಿನ ಉದಾಹರಣೆಗಳನ್ನು ಪರಿಶೀಲಿಸೋಣ. ಸಾರ್ವಜನಿಕ ಪುಸ್ತಕಭಾಂಡಾರ ವ್ಯವಸ್ಥೆಯನ್ನು ಮೊದಲು ಪ್ರಾರಂಭಿಸಿದ ಬಡೋದೆ ಸರಕಾರವು ಆಡಳಿತ ವ್ಯವಸ್ಥೆಯನ್ನು ಕುರಿತು ರಾಜ್ಯ ಮಟ್ಟದಲ್ಲಿ ಒಬ್ಬ ಪ್ರತ್ಯೇಕ ‘ ಕ್ಯೂರೇಟರ ಆಫ ಲಾಯಬ್ರರೀಜ ’ ಎಂಬ ಅಭಿದಾನದ ಅಧಿಕಾರಿಯನ್ನು ನಿಯಮಿಸಿತು. ಆದರೆ ಅದರಿಂದ ಸ್ವತಂತ್ರ ಖಾತೆ ಏರ್ಪಟ್ಟಂತಾಗಲಿಲ್ಲ. ಕ್ಯೂರೇಟರರಿಗೆ ಖಾತೆಯ ಮುಖ್ಯಸ್ಥನ ಸ್ಥಾನವಿರಲಿಲ್ಲ. ಅವರಿಗೆ ಆರ್ಥಿಕ ಬಲ (Financial control) ಇಲ್ಲವೆ ಸ್ವತಂತ್ರವಾದ ಆಯವ್ಯಯ ಪತ್ರಿಕೆ ಇರಲಿಲ್ಲ. ಹೆಚ್ಚಿಗೇನಾದರೂ ಹಣ ಬೇಕಾದರೆ ಅವರು ಸಂಬಂಧಿಸಿದ ಖಾತೆಯ ಮುಖ್ಯಾಧಿಕಾರಿಯ ಮುಂದೆ ಕೈಯೊಡ್ಡಬೇಕಾಗುತ್ತಿತ್ತು. ಕೈಯೊಡ್ಡಿದರೂ ಪರಿಣಾಮವೇನಾಗುತ್ತಿತ್ತೆಂಬ ಮಾತು ಬೇರೆ. ಹೀಗಿರುವುದರಿಂದ ಕಾಲಕಾಲಕ್ಕೆ ಪ್ರಗತಿ, ಬೆಳವಣಿಗೆಗೆ ಅವಶ್ಯವಿರುವ ಅಧಿಕ ಹಣವನ್ನು ದೊರಕಿಸುವದಾಗಲಿಲ್ಲ. ಹೀಗಾಗಿ ಪುಸ್ತಕಭಾಂಡಾರ ಚಳವಳಿಯು

ಪ್ರಾರಂಭವು ಉತ್ತಮವಾಗಿದ್ದರೂ ಕಾಲಾವಕಾಶದಲ್ಲಿ ಹಣದ ಅಭಾವದ ಮೂಲಕ ಅದು ಕುಂಠಿತವಾಯಿತು.

ಪುಸ್ತಕಭಾಂಡಾರ ಚಳವಳಿಯನ್ನು ಪ್ರಾರಂಭಿಸಿದ ಎರಡನೆಯ ಸರಕಾರವಾದ ಮುಂಬಯಿ ಪ್ರಾಂತವು ಈ ವಿಷಯದಲ್ಲಿ ಬಡೋದೆ ಸರಕಾರದ ಮಾದರಿಯನ್ನೇ ಅನುಕರಿಸಿತು. ಅದು ಕೂಡ ಪುಸ್ತಕಭಾಂಡಾರಗಳ ವ್ಯವಸ್ಥೆಗೆ ಕ್ಯೂರೇಟರ. ಅಸಿಸ್ಟಂಟ ಕ್ಯೂರೇಟರ ಇತ್ಯಾದಿ ಅಧಿಕಾರಿಗಳನ್ನು ನಿಯಮಿಸಿದರೂ ಅದಕ್ಕೆ ಒಂದು ಸ್ವತಂತ್ರ ಖಾತೆಯ ಸ್ಥಾನಮಾನ ಉಂಟಾಗಲಿಲ್ಲ. ಅದು ಶಿಕ್ಷಣ ಖಾತೆಯ ಒಂದು ಅಂಗವಾಯಿತು. ಹಾಗಿರುವುದರಿಂದ ಪುಸ್ತಕಭಾಂಡಾರ ವ್ಯವಸ್ಥೆಗೆ ಬಡೋದೆಯಲ್ಲಿ ದೊರಕಿದ ಗತಿಯೇ ಇಲ್ಲಿಯೂ ಸಹಜವಾಗಿ ದೊರಕುವಂತಾಯಿತು. ಶಿಕ್ಷಣ ಹಾಗೂ ಶಿಕ್ಷಣಕ್ಕಾಗುವ ವೆಚ್ಚ ಬೆಳೆದಂತೆಲ್ಲ ಪುಸ್ತಕಭಾಂಡಾರಗಳ ವ್ಯವಸ್ಥೆಗೂ ಸಹಜವಾಗಿ ಹೆಚ್ಚಿನ ಆರ್ಥಿಕಾವಕಾಶಗಳನ್ನು ಕಲ್ಪಿಸಿಕೊಡಬೇಕಾದುದು ವಾಸ್ತವ. ಆದರೆ ಪುಸ್ತಕಭಾಂಡಾರ ಚಳವಳಿಯನ್ನು ಪ್ರಾರಂಭಿಸಿ ೧೦ ವರುಷಗಳು ಗತಿಸಿದರೂ ಅದಕ್ಕೆ ಒಂದು ಕುರುಡು ಕಾಸು ಕೂಡ ಹೆಚ್ಚಿಗೆ ಒದಗಿಸಲಾಗಲಿಲ್ಲವೆಂಬುದು ಗಣನೀಯ. ತದ್ವಿರುದ್ಧವಾಗಿ ಪುಸ್ತಕಭಾಂಡಾರ ಶಾಖೆಯು ಅದು ಹೊಂದಿಕೊಂಡ ದೊಡ್ಡ ಖಾತೆಯ ಉದಾಹರಣೆಯನ್ನು ಕೇಂದ್ರ ಸರಕಾರದವರ ಸಲಹಾ ಸಮಿತಿಯ ವರದಿಯಲ್ಲಿ ಕಾಣಬಹುದು. ಅದರಲ್ಲಿ ಹೀಗೆ ಹೇಳಲಾಗಿದೆ. “ಒಂದು ಮಹತ್ವದ ರಾಜ್ಯದಲ್ಲಿಯ ಡಾಯರೆಕ್ಟರ ಆಫ್ ಪಬ್ಲಿಕ್ ಇನಸ್ಟ್ರಕ್ಶನ್ ಅವರನ್ನು

ಆದಾಯ ಮೂಲದ ತೊಂದರೆಗಳ ಕಾರಣ ತಮ್ಮ ವೆಚ್ಚವನ್ನು ಕಡಿಮೆ ಮಾಡಬೇಕೆಂದು ಕೇಳಿಕೊಂಡಾಗ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪುಸ್ತಕಭಾಂಡಾರಗಳ ಬೆಳವಣಿಗೆಗಾಗಿ ಒದಗಿಸಲಾದ ಹಣವನ್ನು ಹಾರಿಸಿದರು. ಇದು ಒಂದು ಅಗ್ರಿಕೆಯು ನಿದರ್ಶನವಾಗಿದೆ."

ಇವೆಲ್ಲ ಉದಾಹರಣೆಗಳು ಸಾರ್ವಜನಿಕ ಪುಸ್ತಕ ಭಾಂಡಾರ ವ್ಯವಸ್ಥೆಗೆ ಒಂದು ಪ್ರತ್ಯೇಕ ಖಾತೆ ಇಲ್ಲದುದರ ಮೂಲಕ ಉಂಟಾಗುವ ತೊಂದರೆ ಹಾಗು ಅಡಚಣೆಗಳನ್ನು ತೋರಿಸಿ ಅದರ ಅಗತ್ಯತೆಯನ್ನು ಅಪರೋಕ್ಷವಾಗಿ ಪ್ರತಿಪಾದಿಸುತ್ತವೆ. ಇನ್ನು ಸಾರ್ವಜನಿಕ ಪುಸ್ತಕಭಾಂಡಾರಗಳ ಬಗ್ಗೆ ಕಾಯಿದೆಯನ್ನು ನಿರ್ಮಿಸುವಾಗ ಈ ವಿಷಯವನ್ನು ಆಲೋಚಿಸಲಾಗಿದ್ದರೆ ಅದರ ಪರಿಣಾಮ ಹಾಗು ಕಾಯದೆಯಲ್ಲಿ ನಿರ್ದೇಶಿತ ಅಂಶ ಇವುಗಳನ್ನು ಗಮನಿಸುವದು ಸೂಕ್ತವಾಗಿದೆ.

ಪುಸ್ತಕಭಾಂಡಾರಗಳ ಬಗೆಗಿರುವ ಬ್ರಿಟಿಶ್ ಕಾಯಿದೆಯಲ್ಲಿ ಇದನ್ನು ಕಾಣಿಸಿಲ್ಲ. ಯಾಕಂದರೆ ಸಾರ್ವಜನಿಕ ಪುಸ್ತಕಭಾಂಡಾರಗಳ ಹೊಣೆಯನ್ನು ಸರಕಾರದವರು ತಮ್ಮ ಮೇಲೆ ಇರಿಸಿಕೊಳ್ಳದೆ ಸ್ಥಾನಿಕ ಸಂಸ್ಥೆಗಳ ಮೇಲೆ ಹಾಕಿರುವದರಿಂದ ಅದರ ಅವಶ್ಯಕತೆ ಇಲ್ಲ. ಮದ್ರಾಸ ಪುಸ್ತಕ ಭಾಂಡಾರಗಳ ಕಾಯದೆಯಲ್ಲಿ ಅದು ಸೂಚ್ಯವಾಗಿತ್ತು, ಸ್ಪಷ್ಟವಾಗಿರಲಿಲ್ಲ. ಹೀಗಾಗಿ ಅದರ ಉದ್ದಿಶ್ಯ ಈಡೇರಲಿಲ್ಲ. ತರುವಾಯ ಬಂದ ಹೈದರಾಬಾದ ಕಾಯದೆ (೧೯೫೫) ಯಲ್ಲಿ ಪ್ರತ್ಯೇಕ ಖಾತೆಯು ಉಲ್ಲೇಖವಿತ್ತು; ಮತ್ತು ಆ ನಂತರ

ಪಾಸಾದ ಆಂಧ್ರಪ್ರದೇಶ ಕಾಯದೆ (೧೯೬೦) ಯಲ್ಲಿ ಅದರ ಉಲ್ಲೇಖವಿದೆ. ಆದರೆ ಈ ಪ್ರತ್ಯೇಕತೆಯು ಬೇರೊಂದು ಕಾರಣದಿಂದ ಗ್ರಹಣ ಹಿಡಿದಂತಾಗಿದೆ. ಅದಕ್ಕೆ ಸ್ವತಂತ್ರತೆ ಉಂಟಾಗಿಲ್ಲ. ಅದಕ್ಕೆ ಕಾರಣ ಈ ಪ್ರತ್ಯೇಕ ಖಾತೆಗೆ ಒಬ್ಬ ಪ್ರತ್ಯೇಕ ಮುಖ್ಯಸ್ಥನು ಇರದೆ ಡಾಯರೆಕ್ಟರ ಅಫ್ ಪಬ್ಲಿಕ್ ಇನಸ್ಟ್ರಕ್ಶನ್ ಅವರು ಈ ಖಾತೆಯ ಮುಖ್ಯಸ್ಥರು ಆಗಿದ್ದಾರೆ. ಕೇಂದ್ರ ಸರಕಾರದವರು ನಿಯಮಿಸಿದ ಸಲಹಾ ಸಮಿತಿ ಯವರು ಪುಸ್ತಕಭಾಂಡಾರಗಳು ಹಾಗು ಸಮಾಜ ಶಿಕ್ಷಣಗಳಿ ಗಾಗಿ ಒಂದು ಪ್ರತ್ಯೇಕ ಖಾತೆ ಹಾಗು ಪ್ರತ್ಯೇಕ ಮುಖ್ಯಸ್ಥ ನಿರಬೇಕೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ಶಿಫಾರಸು ಒಂದು ಯೋಗ್ಯ ಹಾಗು ದಿಟ್ಟ ಹೆಜ್ಜೆಯಾಗಿರದೆ ಒಂದು ಮಧ್ಯಮ ಮಾರ್ಗ (Compromise) ವಾಗಿರುವದು. ಮೈಸೂರು ಸರಕಾರದವರು ಪ್ರತ್ಯೇಕ ಖಾತೆಯ ತತ್ವಪ್ರಣಾಲಿ ಹಾಗು ಅಗತ್ಯಗಳನ್ನು ಮನಗಂಡು ತಮ್ಮ ೧೯೬೫ ರ ಮೈಸೂರು ಪುಸ್ತಕಭಾಂಡಾರ ಕಾಯದೆಯಲ್ಲಿ ಪುಸ್ತಕ ಭಾಂಡಾರಗಳ ಬಗ್ಗೆ ಸ್ವತಂತ್ರ ಖಾತೆಯನ್ನು ನಿರ್ಮಿಸಿದ್ದಾರೆ. ಇದರ ಸಮಂಜಸತೆಯನ್ನು ಕುರಿತು ಬೇರೆ ಏನೂ ಹೇಳ ಬೇಕಾಗಿಲ್ಲ.

೧೧. ಖಾತೆಯ ಮುಖ್ಯಸ್ಥ

ಪ್ರತ್ಯೇಕ ಖಾತೆಗೆ ಅದರ ಮುಖ್ಯಸ್ಥ ಅನ್ಯೋನ್ಯವಾಗಿ ಹೊಂದಿಕೊಂಡಿರಬೇಕು. ಪ್ರತ್ಯೇಕ ಖಾತೆ ಇದ್ದು ಅದಕ್ಕೆ ಪ್ರತ್ಯೇಕ ಮುಖ್ಯಸ್ಥನಿಲ್ಲದಿದ್ದರೆ ಅದರ ಪ್ರತ್ಯೇಕತೆಗೆ ಮಹತ್ವವೇ ಇರುವದಿಲ್ಲ. ಅದು ನಿರುಪಯುಕ್ತವಾಗಿರುವದು. ಅದು ಒಂದು ಉಪಖಾತೆಯಾಗಿಯೇ ಪರಿಣಮಿಸುವದು. ಬೇರೊಂದು ಖಾತೆಯ ಮುಖ್ಯಸ್ಥನು ಈ ಖಾತೆಯ ಮುಖ್ಯಸ್ಥನಾಗಿ ಕಾರ್ಯ ನಿರ್ವಹಿಸುವನು.

ಜ್ಞಾನ, ವಿಜ್ಞಾನ ಮತ್ತು ಅನುಭವಗಳ ಕ್ಷೇತ್ರ ವಿಸ್ತಾರವಾಗುತ್ತ ಹೋದಂತೆ ವಿಶಿಷ್ಟತೆಯ (Specialisation) ಅವಶ್ಯಕತೆಯು ದೃಢವಾಗುವದು. ಆದುದರಿಂದ ವಿಶಿಷ್ಟ ಕ್ಷೇತ್ರಕ್ಕೆ ಆಯಾ ಕ್ಷೇತ್ರಗಳಲ್ಲಿಯ ಪರಿಣತರೇ ಅದರ ಕಾರ್ಯಕಲಾಪಗಳನ್ನು ನಿರ್ವಹಿಸಲು. ನಿಸ್ತರಿಸಲು ಯೋಗ್ಯರು ಎಂದು ಹೇಳುವ ಅವಶ್ಯಕತೆ ಇಲ್ಲ. ಅದು ಸ್ಪಷ್ಟವೇ ಆಗಿದೆ. ಆದುದರಿಂದ ಶಿಕ್ಷಣದ ವಿಶಿಷ್ಟ ಕ್ಷೇತ್ರಗಳಾದ ತಾಂತ್ರಿಕ ಶಿಕ್ಷಣ, ಮಹಾವಿದ್ಯಾಲಯ ಶಿಕ್ಷಣ ಇವುಗಳಿಗೆ ಪ್ರತ್ಯೇಕ– ಸಾರ್ವಜನಿಕ ಶಿಕ್ಷಣಾಧಿಕಾರಿಯ ಹೊರತಾಗಿ– ಡಾಯರೆಕ್ಟರ ಇರುವಂತೆ ಸಾರ್ವಜನಿಕ ಪುಸ್ತಕಭಾಂಡಾರಗಳಿಗಾಗಿ ಒಬ್ಬ ಪ್ರತ್ಯೇಕ ಮುಖ್ಯಾಧಿಕಾರಿ ಇರುವದು ಯಥೋಚಿತವಾಗಿದೆ. ಇಲ್ಲದಿದ್ದರೆ ಅವುಗಳ ಕಾರ್ಯಕಲಾಪಗಳು ಸರಿಯಾಗಿ, ಸುಗಮವಾಗಿ, ಯಥೋಚಿತವಾಗಿ ಸಾಗಲಾರವು; ಅಲ್ಲದೆ ಅದರಿಂದ ಬಾಧೆ

ಇಲ್ಲವೆ ಹಾನಿಯುಂಟಾದರೆ ಆಶ್ಚರ್ಯಪಡಬೇಕಾಗಿಲ್ಲ. ಪ್ರತ್ಯೇಕ ಮುಖ್ಯಸ್ಥನ ಅವಶ್ಯಕತೆಯನ್ನು ಪ್ರತಿಪಾದಿಸುವಾಗ ಕೇಂದ್ರ ಸರಕಾರದ ಪುಸ್ತಕಭಾಂಡಾರ ಸಲಹಾಸಮಿತಿಯು ತನ್ನ ವರದಿಯಲ್ಲಿ ಇಂತಹ ಕೆಲವು ಸಂಗತಿಗಳನ್ನು ಈ ರೀತಿಯಾಗಿ ಉಲ್ಲೇಖಿಸಿದೆ.

"ಶಿಕ್ಷಕರ ಹಾಗು ವಿದ್ಯಾರ್ಥಿಗಳ ಶಿಸ್ತು. ಕಟ್ಟುಪಾಡುಗಳ ವಾತಾವರಣದಲ್ಲಿ ನಿಯಮಿತ ಅಭ್ಯಾಸ ಕ್ರಮಗಳನ್ನು ನಿಶ್ಚಿತ ಕಾಲಾವಧಿಯಲ್ಲಿ ಕಲಿಸುವಂತಹ ಶಿಕ್ಷಣದ ಔಪಚಾರಿಕ ಕಾರುಭಾರುಗಳಿಂದ ಶಿಕ್ಷಣದ ಡಾಯರೆಕ್ಟರನ ಜೀವನರಂಗವು ರೂಪುಗೊಂಡುದರಿಂದ ಪುಸ್ತಕಗಳ ಸಮ್ಮೋಹಕ್ಕೆ ಒಲಿಯುವ ಸಂಪ್ರದಾಯವುಳ್ಳ ಪುಸ್ತಕಭಾಂಡಾರಗಳಿಗೆ ಅವನು ಯೋಗ್ಯ ಪ್ರಾಶಸ್ತ್ಯ ಕೊಡುವ ಸಂಭವವಿಲ್ಲ. ಯಾವ ಡಾಯರೆಕ್ಟರನೂ ತನ್ನ ಅಧಿಕಾರ ಬಲದಿಂದ ಶಾಲೆಗಳ ಪುಸ್ತಕಭಾಂಡಾರಗಳನ್ನು ಸುಧಾರಿಸಲಿಕ್ಕೆ ಪ್ರಯತ್ನ ಮಾಡಿಲ್ಲ. ಪುಸ್ತಕಭಾಂಡಾರ ಶಾಖೆಯು ಖಾತೆಗಳಲ್ಲಿಯ ಮಂದಬುದ್ಧಿಯವರಿಗೆ ಅನುಕೂಲ ಅವಕಾಶಗಳನ್ನು ಒದಗಿಸಲಿಕ್ಕೆ ಸುಸಂಧಿಯನ್ನು ಉಂಟು ಮಾಡುತ್ತಿರುವುದರಿಂದ ಆ ಖಾತೆಯಷ್ಟೇ ಅಲ್ಲದೆ ನೌಕರ ವರ್ಗವೂ ಕೂಡ ತೊಂದರೆಗೀಡಾಗುತ್ತಿತ್ತು. ಇತರ ದೇಶಗಳಲ್ಲಿ ಕಂಡು ಬಂದ ಅನುಭವಗಳಿಂದ ಪುಸ್ತಕಭಾಂಡಾರ ಚಟುವಟಿಕೆಗಳನ್ನು ವಿಸ್ತರಿಸಲಿಕ್ಕೆ ಸೂಚನೆಗಳನ್ನು ಪುಸ್ತಕಭಾಂಡಾರಿಗಳು ಕಳಿಸಿದರೆ ಅವುಗಳ ಉಪಯುಕ್ತತೆಗಿಂತ ವೆಚ್ಚಕ್ಕೆ ವಿಶೇಷ ಮಹತ್ವಕೊಟ್ಟು ಸರಕಾರದವರಲ್ಲಿ ಅವುಗಳ ಪರಿಣಾಮಗಳನ್ನು ಕೆಡಿಸುವಂತೆ ವಿಪರ್ಯಸ್ತಗೊಳಿಸಲಾಗು

ತ್ತಿತ್ತು. ಅಧಿಕಾರೇತರರ ಅಭಿಪ್ರಾಯದ ಪ್ರಕಾರ ಶಿಕ್ಷಣದ ಡಾಯರೆಕ್ಟರರು ಉಪಯುಕ್ತವಾಗುವದರ ಬದಲಾಗಿ ಒಂದು ಅಡ್ಡಗಲ್ಲಾಗುತ್ತಿದ್ದರು." ಇದಕ್ಕೆ ಒಂದು ಸ್ಪಷ್ಟ ನಿದರ್ಶನವನ್ನು ಹಿಂದಿನ ಅಧ್ಯಾಯದಲ್ಲಿ ಹೇಳಿದೆ. ಅಲ್ಲದೆ ಈ ಬಗೆಗೆ ಯುನೆಸ್ಕೊ ಪ್ರಕಟನೆಗಳಲ್ಲಿ ಹೇಳಲಾದ ಅಂತರ-ರಾಷ್ಟ್ರೀಯ ತಜ್ಞರ ಇಂತಹದೇ ಅಭಿಪ್ರಾಯವನ್ನು ಕೂಡ ಅದರಲ್ಲಿ ಹೇಳಲಾಗಿದೆ. ಆದ್ದರಿಂದ ಪುಸ್ತಕಭಾಂಡಾರ ಚಳವಳಿಯನ್ನು ಸನ್ಮಾರ್ಗದಲ್ಲಿರಿಸುವದಕ್ಕೆ ಸಾರ್ವಜನಿಕ ಪುಸ್ತಕಭಾಂಡಾರಗಳ ವ್ಯವಸ್ಥೆಗೆ ಒಂದು ಪ್ರತ್ಯೇಕ ಖಾತೆ ಇದ್ದು ಅದಕ್ಕೆ ಒಬ್ಬ ಪ್ರತ್ಯೇಕ ಯೋಗ್ಯ ಮುಖ್ಯಸ್ಥನಿರುವದು ಸಮಂಜಸವಾಗಿದೆ. ಇದನ್ನು ದೃಢಗೊಳಿಸಲು ಮೈಸೂರು ೧೯೬೫ ರ ಪುಸ್ತಕಭಾಂಡಾರ ಕಾಯದೆಯ ೧೨ ನೆಯ ಕಲಮಿನಲ್ಲಿ ಹೀಗೆ ನಿರ್ದೇಶಿಸಲಾಗಿದೆ.

"ಈ ಕಾಯದೆಯ ಉದ್ದೇಶಗಳಿಗಾಗಿ ರಾಜ್ಯ ಪುಸ್ತಕ-ಭಾಂಡಾರಿ (State Librarian)ಯು ಮುಖ್ಯಸ್ಥನಾಗಿದ್ದ ಒಂದು ಸಾರ್ವಜನಿಕ ಪುಸ್ತಕಭಾಂಡಾರಗಳ ಖಾತೆಯು ನಿರ್ಮಾಣವಾಗತಕ್ಕದ್ದು."

ಮತ್ತು ೧೪ (೧) ಕಲಮಿನಲ್ಲಿ

"ಪುಸ್ತಕಭಾಂಡಾರ ವೃತ್ತಿಯನ್ನು ಕೈಕೊಳ್ಳಲು ನಿರ್ದಿಷ್ಟ ಯೋಗ್ಯತೆಗಳುಳ್ಳ ಒಬ್ಬ ಪೂರ್ಣಾವಧಿಯ ಅಧಿಕಾರಿಯನ್ನು ರಾಜ್ಯ ಸರಕಾರದವರು ರಾಜ್ಯ ಪುಸ್ತಕಭಾಂಡಾರಿ ಎಂದು ನಿಯಮಿಸುವರು."

ಭಾರತದಲ್ಲಿ ಈ ಮೊದಲು ಆದ ಯಾವ ಪುಸ್ತಕ-ಭಾಂಡಾರ ಕಾಯದೆಯಾದರೂ ಇಂತಹ ಸಮಂಜಸ ಹಾಗು ಸ್ಪಷ್ಟ ಅವಕಾಶವನ್ನು ಕಲ್ಪಿಸಿಲ್ಲ. ಮದ್ರಾಸ ಕಾಯದೆಯ ನಿರ್ಮಾಪಕರು ಒಬ್ಬ ಪ್ರತ್ಯೇಕ ಪುಸ್ತಕಭಾಂಡಾರ ಮುಖ್ಯಸ್ಥನನ್ನು ಉದ್ದೇಶಿಸಿ ಅದರ ೪ನೆಯ ಕಲಮಿನಲ್ಲಿ "ಸರಕಾರದವರು ರಾಜ್ಯಕ್ಕೆ ಸಾರ್ವಜನಿಕ ಪುಸ್ತಕಭಾಂಡಾರಗಳ ಡಾಯರೆಕ್ಟರರೊಬ್ಬರನ್ನು ನಿಯಮಿಸ.ವರು" ಎಂದು ಉಲ್ಲೇಖಿಸಿದ್ದರು. ಆದರೆ ಹಾಗಾಗದೆ ಡಾಯರೆಕ್ಟರ್ ಆಫ್ ಪಬ್ಲಿಕ್ ಇನಸ್ಟ್ರಕ್ಶನ್ ಇವರನ್ನೇ ಸಾರ್ವಜನಿಕ ಪುಸ್ತಕ ಭಾಂಡಾರಗಳ ಡಾಯರೆಕ್ಟರರನ್ನಾಗಿ ಮಾಡಿದರು. ಇದು ಮೂಲ ಉದ್ದೇಶಕ್ಕೆ ವಿರುದ್ಧವಾದದ್ದಾಯಿತು. ಇದು ತಾತ್ಕಾಲಿಕ ವ್ಯವಸ್ಥೆ ಎಂದು ಪ್ರಾರಂಭದಲ್ಲಿ . ಹೇಳಿದರೂ ಅದೇ ಪರಿಸ್ಥಿತಿಯು ಇನ್ನೂವರೆಗೆ ಉಳಿದಿದೆ. ಆದುದರಿಂದ ಕಾಯಿದೆಯಲ್ಲಿ, ಮೈಸೂರು ಕಾಯದೆಯಲ್ಲಿ ಹೇಳಿದಂತೆ, ಸ್ಪಷ್ಟ ಉಲ್ಲೇಖವಿರುವದು ಸೂಕ್ತ.

೧೨. ಪ್ರತ್ಯೇಕ ಅಧಿಕಾರ ಮಂಡಲಿಗಳು

ಬ್ರಿಟಿಶರ ಪುಸ್ತಕಭಾಂಡಾರ ಕಾಯದೆಯು ಮುನಸಿಪಾಲಿಟಿಗಳಂತಹ ಸ್ಥಾನಿಕ ಸಮಿತಿಗಳಿಗೆ ಸುಂಕವನ್ನು ವಸೂಲ ಮಾಡಿ ಪುಸ್ತಕಭಾಂಡಾರಗಳನ್ನು ಸ್ಥಾಪಿಸಲಿಕ್ಕೆ ಸ್ವಯಂಸತ್ತೆಯು ಅವಕಾಶ ಮಾಡಿದೆಯೆಂದು ಈ ಮೊದಲೇ ಹೇಳಲಾಗಿದೆ. ಅಲ್ಲಿ ಲೋಕಲ್‌ಬೋರ್ಡ್ಸ್, ಮುನಸಿಪಾಲಿಟಿ, ಗ್ರಾಮಪಂಚಾಯತಿಗಳಂತಹ ಸ್ಥಾನಿಕ ಸಂಸ್ಥೆಗಳೇ ಪುಸ್ತಕಭಾಂಡಾರಗಳನ್ನು ಹಾಗು ಅವುಗಳ ಸೇವೆಯನ್ನು ಒದಗಿಸುತ್ತವೆ. ಅದಕ್ಕಾಗಿ ಪ್ರತ್ಯೇಕ(Ad hoc) ಅಧಿಕಾರ ಮಂಡಲಿಗಳಿಲ್ಲ. ಅದಕ್ಕೆ ಅಲ್ಲಿಯ ಕಾಯದೆಯ ಪರಿಸ್ಥಿತಿಯು ಕಾರಣವಾಗಿದೆ. ಆದರೂ ಅಲ್ಲಿಯ ಪುಸ್ತಕಭಾಂಡಾರಿಗರ ಅಭಿಪ್ರಾಯವು ಪುಸ್ತಕಭಾಂಡಾರಗಳ ವ್ಯವಸ್ಥೆಗೆ ಪ್ರತ್ಯೇಕ ಕಮಿಟಿಗಳು ಅವಶ್ಯವೆಂದು ಪ್ರತಿಪಾದಿಸುತ್ತದೆ. ಅದಕ್ಕೆ ಕಾರಣಗಳು—

(೧) ಸ್ಥಾನಿಕ ಸಂಸ್ಥೆಗಳು ದೊಡ್ಡ ದೊಡ್ಡ ಸಮಿತಿಗಳಾಗಿದ್ದು, ಹಲವಾರು ವಿಷಯಗಳನ್ನು ಆಲೋಚಿಸಿ ಕ್ರಮ ಕೈಕೊಳ್ಳಬೇಕಾಗಿರುವುದರಿಂದ ಪುಸ್ತಕಭಾಂಡಾರ ಸೇವೆಗಾಗಿ ಸಾಕಷ್ಟು ಲಕ್ಷ್ಯ ಹಾಗು ಮಹತ್ವ ದೊರಕುವದಿಲ್ಲ.

(೨) ಸಾರ್ವಜನಿಕರಿಂದ ನಿಯುಕ್ತ ಪ್ರತಿನಿಧಿಗಳು ಮತಗಳ ಪ್ರಾಧಾನ್ಯತೆಯಿಂದ ಆಯ್ಕೆಯಾಗಿ ಬರುವುದರಿಂದ ಅವರು ಪುಸ್ತಕಭಾಂಡಾರದಂಥ ಶೈಕ್ಷಣಿಕ ಹಾಗು ಸಾಂಸ್ಕೃತಿಕ ಪರಿಣಾಮಗಳನ್ನೊದಗಿಸುವ ವಿಷಯಗಳಲ್ಲಿ ಸಾಕಷ್ಟು ಆಸ್ಥೆ, ಅಭಿರುಚಿಗಳುಳ್ಳವರಾಗಿರುವದಿಲ್ಲ. ಇದರಿಂದಾಗಿ ಅವುಗಳ ಕಾರ್ಯ ಹಾಗು ಸೇವೆಯಲ್ಲಿ ಯೋಗ್ಯ ಪ್ರೋತ್ಸಾಹ ದೊರಕದಿರುವ ಸಂಭವವುಂಟು.

ಇವುಗಳ ಸ್ಪಷ್ಟ ನಿದರ್ಶನವಾಗಿ ಪುಸ್ತಕಭಾಂಡಾರ ಅಧಿಕಾರ ಮಂಡಲಿಗಳು ಯೋಗ್ಯತೆ ಪಡೆದ ಮುಖ್ಯ ಪುಸ್ತಕ ಭಾಂಡಾರಿಗಳನ್ನು ನಿಯಮಿಸಲಾಗುವದಿಲ್ಲವೆಂದು ಹೇಳಲಾಗುತ್ತಿದೆ.

ಆದರೆ ಭಾರತದಲ್ಲಿಯ ಪುಸ್ತಕಭಾಂಡಾರ ಕಾಯದೆಗಳು ಪ್ರತ್ಯೇಕ ಪುಸ್ತಕ ಭಾಂಡಾರ ಅಧಿಕಾರ ಮಂಡಲಿಗಳ ಅಸ್ತಿತ್ವವನ್ನು ಉಂಟುಮಾಡಿವೆ. ಇದು ಮೇಲಿನ ಕುಂದುಕೊರತೆಗಳನ್ನು ನೀಗಿಸುವುದಲ್ಲದೆ ಪುಸ್ತಕಭಾಂಡಾರ ಪದ್ಧತಿಗೆ ಆಧಾರಭೂತವಾಗಿದೆ. ಆರ್ಥಿಕ ಹಾಗು ಆಡಳಿತೆಯ ಸಮರ್ಪಕತೆಯಿಂದಾಗಿ ಪ್ರತಿಯೊಂದು ಮುನಸಿಪಾಲಿಟಿ ಇಲ್ಲವೆ ಗ್ರಾಮಪಂಚಾಯತಿ ಇವು ಪುಸ್ತಕಭಾಂಡಾರ ವ್ಯವಸ್ಥೆಯ ಕುರಿತು ಸ್ವತಂತ್ರ ಘಟಕಗಳಾಗಲಾರವು. ಆದುದರಿಂದ ಯೋಗ್ಯ ಕ್ಷೇತ್ರ ಮಟ್ಟದಲ್ಲಿ ಅಧಿಕಾರ ಮಂಡಲಿಗಳನ್ನು ನಿರ್ಮಿಸಬೇಕಾಗುವದು. ಆದ್ದರಿಂದ ನಗರಗಳನ್ನು ಹೊರತಾಗಿಸಿದರೆ ಜಿಲ್ಲೆಗಳೇ ಯೋಗ್ಯ ಘಟಕಗಳಾಗಿ ಪರಿಣಮಿಸಿ

ಜಿಲ್ಲೆಗೊಂದು ಪ್ರತ್ಯೇಕ ಅಧಿಕಾರ ಮಂಡಲಿಯನ್ನು ಯೋಚಿಸು ವದು ಸೂಕ್ತವಾಗಿದೆ. ಇಂತಹ ಮಂಡಲಿಗಳಲ್ಲಿ ಪುಸ್ತಕ ಭಾಂಡಾರಗಳಿಗೆ ಸಂಬಂಧಿಸಿದ ಹಾಗೂ ಹಿತಾಸಕ್ತಿಯುಳ್ಳ ಸಂಸ್ಥೆಗಳು ಭಾಗವಹಿಸುವವಲ್ಲದೆ ಅವುಗಳಿಗೆ ಸಂಬಂಧಪಟ್ಟ ವ್ಯಕ್ತಿಗಳೂ ಭಾಗವಹಿಸುವರು. ಇದರಿಂದಾಗಿ ರಾಜ್ಯ, ನಗರ, ಜಿಲ್ಲಾ ಮಟ್ಟಗಳಲ್ಲಿ ಸುಸಂಬದ್ಧ ಪದ್ಧತಿಯನ್ನು ನಿರ್ಮಿಸಲು ಹಗುರಾಗುವದು.

೧೩. ಸೌಕರ ವರ್ಗ

ಯೋಗ್ಯ ತರಗತಿಯ ಪುಸ್ತಕಭಾಂಡಾರಗಳನ್ನು ಜನ ಸೇವೆಗಾಗಿ ಒದಗಿಸುವಷ್ಟೇ ಯೋಗ್ಯತೆಯುಳ್ಳ ಸೌಕರ ವರ್ಗ ವನ್ನು ಸೇವೆಗಾಗಿ ಒದಗಿಸುವದು ಮಹತ್ವದ್ದಾಗಿದೆ. ಏಕೆಂದರೆ ಪುಸ್ತಕಭಾಂಡಾರವು ಸತ್ವತಃ ಒಂದು ಸೇವಾ ಸಂಸ್ಥೆ. ಆದ್ದ ರಿಂದ ಸೇವಾ ಕಾರ್ಯಕರ್ತರು ಯೋಗ್ಯರು. ದಕ್ಷರು. ತೃಪ್ತರು ಇಲ್ಲದಿದ್ದರೆ ಅವರಿಂದ ಯಶಸ್ವಿ ಕಾರ್ಯಾಚರಣೆಯು ಆಗಲಾರದು, ಎಂಬುದಕ್ಕೆ ಭಿನ್ನಾಭಿಪ್ರಾಯವಿರಲಾರದು. ಆದುದರಿಂದ ಪುಸ್ತಕಭಾಂಡಾರ ಕಾಯದೆಯು ಇತರ ಸಾರ್ವ ಜನಿಕ ಸೇವೆಗಳಿಗಾಗಿ ಸೌಕರ ವರ್ಗವನ್ನು ನಿರ್ಮಿಸುವಂತೆ ಪುಸ್ತಕಭಾಂಡಾರ ಸೇವೆಗಾಗಿ ಸಮರ್ಪಕ ಸೌಕರ ವರ್ಗ ಗಳನ್ನು (Cadres) ನಿರ್ಮಿಸುವದು ಕಾಯದೆಯ ಉದ್ದೇಶಗಳನ್ನು ಈಡೇರಿಸುವಲ್ಲಿ ಸರಿಯಾದ ಮಾರ್ಗವನ್ನು ಕಲ್ಪಿಸಿದಂತಾಗುವದು.

ಬ್ರಿಟನ್‌ದಲ್ಲಿ ಕಾಯದೆಯಾಗಿ ಶತಮಾನ ಕಳೆದರೂ ಅಲ್ಲಿಯ ಪುಸ್ತಕಭಾಂಡಾರಿಗರ ಹಾಗೂ ಭಾಂಡಾರಗಳ ಇತರ ಕಾರ್ಯಕರ್ತರ ಪರಿಸ್ಥಿತಿ. ಸ್ಥಾನಮಾನ ಹಾಗೂ ಅವಕಾಶಗಳು ಸರಿಯಾಗಿಲ್ಲವೆಂದು ಕೇಳಿಬರುತ್ತಿದೆ. ಇಂತಹದೇ ಪರಿಸ್ಥಿತಿ ಭಾರತದಲ್ಲಿ ಕಾಯದೆ ಮಾಡಿರುವ ರಾಜ್ಯಗಳಾದ ಮದ್ರಾಸ ಹಾಗು ಆಂಧ್ರ ಪ್ರದೇಶ ರಾಜ್ಯಗಳಲ್ಲಿಯೂ ಉಂಟು. ಇದಕ್ಕೆ ಕಾರಣ—

(೧) ಸಣ್ಣ ಸಣ್ಣ ಸೇವಾಘಟಕಗಳಾಗಿರುವದರಿಂದ ಯೋಗ್ಯ ಸಂಬಳ ಪ್ರಮಾಣಗಳನ್ನು ಕೊಡಲಿಕ್ಕೆ ಆಗುವದಿಲ್ಲ.

(೨) ಭಡತಿ (Promotions) ಗಳಿಗೆ ಅವಕಾಶ ವಿರುವದಿಲ್ಲ.

(೩) ಅನುಕೂಲನಾದ ಹಾಗೂ ಹಿತಕರವಾದ ಇತರ ಸೇವಾ ನಿಯಮುಗಳಿರುವದಿಲ್ಲ.

(೪) ಇವೆಲ್ಲ ಕಾರಣಗಳಿಂದಾಗಿ ಮೇಲಿಂದ ಮೇಲೆ ಅನುಕೂಲ ಸ್ಥಿತಿಗಳನ್ನು ದೊರಕಿಸುವದಕ್ಕಾಗಿ ಕಾರ್ಯಕರ್ತರು ಬೇರೆ ಬೇರೆ ಅವಕಾಶಗಳನ್ನು ದೊರಕಿಸಬೇಕಾಗುವದು.

ಆದುದರಿಂದ ಇವೆಲ್ಲ ಪ್ರತಿಕೂಲ ಪರಿಸ್ಥಿತಿಯನ್ನು ಹೋಗಲಾಡಿಸಿ ಅನುಕೂಲ ಪರಿಸ್ಥಿತಿಯನ್ನು ನಿರ್ಮಿಸಬೇಕಾದರೆ ರಾಜ್ಯದಾದ್ಯಂತ ವ್ಯಾಪ್ತಿ ಹಾಗೂ ಸ್ಥಾನಮಾನಗಳುಳ್ಳ ನೌಕರವರ್ಗವನ್ನು ನಿರ್ಮಿಸಬೇಕಾದುದು ಅಗತ್ಯವಾಗಿದೆ. ಅಲ್ಲದೆ ಸರಕಾರಿ ನೌಕರರ ದರ್ಜೆಯನ್ನು ಕೊಟ್ಟರೆ ಒಳ್ಳೆಯ ಪರಿಸ್ಥಿತಿಯುಂಟಾಗುವದು. ಮೈಸೂರು ಸರಕಾರದ ೧೯೬೫ ರ ಪುಸ್ತಕಭಾಂಡಾರ ಕಾಯದೆಯಲ್ಲಿ ಮೈಸೂರು ರಾಜ್ಯ ಪುಸ್ತಕ ಭಾಂಡಾರ ನೌಕರ ವರ್ಗ (Mysore State Library Service) ವನ್ನು ನಿರ್ಮಿಸುವದು ಯುಕ್ತವಾಗಿದೆ.

೧೪. ಪುಸ್ತಕಭಾಂಡಾರ ಸಹಕಾರ

ಪುಸ್ತಕಭಾಂಡಾರದ ಸಹಕಾರ ವಿಷಯುವನ್ನು ಕುರಿತು ಆನುಷಂಗಿಕವಾಗಿ ಈ ಮೊದಲೇ ಪುಸ್ತಕಭಾಂಡಾರ ಪದ್ಧತಿಯುನ್ನು ಹೇಳುವಾಗ ಪ್ರಸ್ತಾಪಿಸಿದ್ದುಂಟು. ಒಂದು ಯಶಸ್ವೀ ಪುಸ್ತಕಭಾಂಡಾರ ಸೇವೆಯನ್ನು ಒದಗಿಸುವಲ್ಲಿ, ಕಾರ್ಯಗತಗೊಳಿಸುವಾಗ ಪರಸ್ಪರ ಸಹಕಾರ ಅತ್ಯಗತ್ಯವಾದದ್ದು. ಪುಸ್ತಕಭಾಂಡಾರ ಕಾಯುದೆಯು ನಿರ್ಮಾಪಕರು ಇಂತಹ ಸಹಕಾರವನ್ನು ಗ್ರಹಿತವಾಗಿಟ್ಟುಕೊಂಡಿರುವರು. ಆದರೆ ಅದನ್ನು ಸ್ಪಷ್ಟವಾಗಿ ಕಾಯುದೆಯಲ್ಲಿ ನಿರೂಪಿಸಿದ ಹೊರತು ಅದರ ಕುರಿತು ಒಂದು ನಿರ್ದಿಷ್ಟ ಯೋಜನೆ ಹಾಗೂ ಕಾರ್ಯಕ್ರಮ ಕೈಕೊಳ್ಳುವದು ದುಸ್ತರವಾಗುವದು. ಪರಸ್ಪರ ತಿಳಿವಳಿಕೆಯಿಂದ ಪುಸ್ತಕ ಭಾಂಡಾರಗಳು ತಮ್ಮ ತಮ್ಮೊಳಗೆ ಅನಿರ್ದಿಷ್ಟವಾಗಿ ಪುಸ್ತಕ ಕೊಡಕೊಳ್ಳುವದನ್ನು ಮಾಡಿದರೂ ಅದು ಯೋಜಿತ ಮಟ್ಟ ಇಲ್ಲವೆ ಯುಶಸ್ಸನ್ನು ಹೊಂದಲಾರದು. ಇದಕ್ಕೆ ಬ್ರಿಟಿಶ್ ಕಾಯುದೆ ಒಂದು ನಿದರ್ಶನವೆನ್ನಬಹುದು. ಐಚ್ಛಿಕವಾಗಿ ಸ್ವಯಂಸ್ಫೂರ್ತಿಯಿಂದ ಪರಸ್ಪರ ಕಡಕೊಡುವ ಕಾರ್ಯವು ಬಹಳ ವರ್ಷಗಳಿಂದ ನಡೆದು ಬಂದಿದ್ದರೂ ಅದು ಒಂದು ತೃಪ್ತಿಕರ ಮಟ್ಟಕ್ಕೆ ಇನ್ನೂ ದೂರವಿದೆ ಎಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಆದುದರಿಂದ ತೀರ ಇತ್ತೀಚೆಗೆ, ೧೯೬೪ ರಲ್ಲಿ ಮಾಡಿದ ಕಾಯುದೆಯಲ್ಲಿ ಪುಸ್ತಕಭಾಂಡಾರಗಳ ಸಹಕಾರ ಕುರಿತು ಮತ್ತು ಆ ಜಗ್ಗೆ ಮಂತ್ರಿಗಳು ತೆಗೆದು

ಕೊಳ್ಳಬೇಕಾದ ಕ್ರಮ ಇವುಗಳ ಬಗ್ಗೆ ಸ್ಪಷ್ಟ ನಿರ್ದೇಶನವಿದೆ. ಭಾರತದಲ್ಲಿ ಈ ವರೆಗಾದ ಕಾಯದೆಗಳಲ್ಲಿ ಅಂತರ-ಪುಸ್ತಕ ಭಾಂಡಾರ ಸಹಕಾರದ ಬಗೆಗಾಗಿ ನಿರ್ದೇಶನವಿದ್ದಿಲ್ಲ. ಆದರೆ ಕಾಯದೆ ಉದ್ದೇಶವನ್ನು ನೆರವೇರಿಸುವಲ್ಲಿ ಪುಸ್ತಕಭಾಂಡಾರ ಸಹಕಾರದ ಮಹತ್ವದ ಪಾತ್ರವನ್ನು ಮನಗಂಡು ಮೈಸೂರು ಕರಡು ಮಸೂದೆ ಸಮಿತಿಯು ೧೯೬೩ ರಲ್ಲಿ ತಯಾರಿಸಿದ ಕರಡಿನಲ್ಲಿ ರಾಜ್ಯ ಕೇಂದ್ರ ಪುಸ್ತಕಭಾಂಡಾರದ ಅಂಗವಾಗಿ ಒಂದು ಅಂತರ-ಪುಸ್ತಕಭಾಂಡಾರ ಸಹಕಾರ ಕಾರುಭಾರವು ಇರಬೇಕೆಂದು ಹೇಳಿತ್ತು. ಅದನ್ನು ಅಂಗೀಕರಿಸಿ ಮೈಸೂರು ಪುಸ್ತಕಭಾಂಡಾರ ಕಾಯದೆ (೧೯೬೫) ಯಲ್ಲಿ ಯಥಾಪ್ರಕಾರ ಒದಗಿಸಲಾಗಿದೆ.

೧೫. ಆಶಯ

ಸಾರ್ವಜನಿಕ ಪುಸ್ತಕಭಾಂಡಾರಗಳ ಸ್ಥಾಪನೆ, ವ್ಯವಸ್ಥೆ ಇವು ಸರಕಾರದ ಕರ್ತವ್ಯ, ಹೊಣೆಗಳಾಗಿವೆ, ಮತ್ತು ಇವುಗಳನ್ನು ನೆರವೇರಿಸಲಿಕ್ಕೆ ಪ್ರತ್ಯೇಕವಾದ ಕಾಯದೆಯು ಆಧಾರ ಹಾಗೂ ಬಲ ಒದಗಬೇಕು ಎಂಬ ಅಭಿಪ್ರಾಯ ಕಾಲಾವಕಾಶದಲ್ಲಿ ಮೂಡಿ ಬರಬರುತ್ತ ದೃಢವಾಗಹತ್ತಿದೆ. ಇದು ಶೀಘ್ರದಲ್ಲಿಯೇ ಸಾರ್ವತ್ರಿಕವಾಗುವದೆಂಬುದರಲ್ಲಿ ಸಂಶಯವೇ ಇಲ್ಲ.

ಇಂತಹ ಕಾಯದೆಯು ಸಾಧನ, ಸಲಕರಣೆ, ಸಂಘಟನೆ ಮೊದಲಾದವುಗಳನ್ನು ಕುರಿತಾಗಿರುವದು, ಮತ್ತು ಅವುಗಳನ್ನು ಒದಗಿಸುವದು. ಇಷ್ಟಕ್ಕೆ ಮಾತ್ರ ಕಾಯದೆಯ ಉದ್ದೇಶ ಈಡೇರಲಾರದು. ಪುಸ್ತಕಭಾಂಡಾರಗಳು ಸತ್ವತಃ ಸೇವಾ ಸಂಸ್ಥೆಗಳು. ಸೇವೆಯನ್ನು ಒದಗಿಸಲಿಕ್ಕೆ ಅವಶ್ಯವಿದ್ದ ಆರ್ಥಿಕ ಸೌಲಭ್ಯ, ಸೇವೆಗಾಗಿ ಬೇಕಾಗಿರುವ ಪುಸ್ತಕ, ಪತ್ರಿಕೆ ಮೊದಲಾದ ಸಾಹಿತ್ಯ ಮತ್ತು ಸಾಮುಗ್ರಿ, ಸೇವೆಯನ್ನು ನೀಡಲಿಕ್ಕೆ ಅಗತ್ಯವಿರುವ ನೌಕರವರ್ಗ ಇವೆಲ್ಲವನ್ನು ಒದಗಿಸುವ ಏರ್ಪಾಟನ್ನು ಕಾಯಡೆಯು ಮಾಡುವದು; ಇಷ್ಟರಿಂದಲೇ ಉದ್ದೇಶ ಸಫಲವಾಗಲಾರದು. ಜನತೆಯು ಇವುಗಳ ಪ್ರಯೋಜನ ಹೊಂದಬೇಕಾಗಿರುವದು ಮುಖ್ಯ. ಓದುಗರು ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆದು ತೃಪ್ತಿ

ಗೊಳ್ಳುವದು ಮುಖ್ಯ; ಇವುಗಳಿಂದ ಕಾಯದೆಯು ಸಫಲತೆಯು ಉಂಟಾಗುವದು.

ಕಾಯದೆಯ ಮೂಲಕ ಪುಸ್ತಕಭಾಂಡಾರ ಸೇವೆಯನ್ನು ಒದಗಿಸುವಲ್ಲಿ ಗಣನೀಯ ಅಂಶವೆಂದರೆ- ಯಶಸ್ವೀ ಕಾರ್ಯಾಚರಣೆ. ಅದರ ಯಶಸ್ಸನ್ನು ಗುರುತಿಸುವ ಅಂಶಗಳಾವವು, ಅವುಗಳ ಪ್ರಮಾಣವೆಷ್ಟು, ಅವು ಎಷ್ಟರಮಟ್ಟಿಗೆ ಗಣನೀಯ ಇವುಗಳನ್ನು ಆಲೋಚಿಸುವದು ಸೂಕ್ತ. ಈ ಯಶಸ್ಸಿನ ಮೌಲ್ಯಮಾಪನೆಗಾಗಿ ಇವು ಸಾಮಾನ್ಯ ಅಂಶಗಳು:- (೧) ಸಾರ್ವಜನಿಕ ಪುಸ್ತಕಭಾಂಡಾರದ ವೆಚ್ಚದ ಪ್ರಮಾಣ. (೨) ಪುಸ್ತಕ, ಪತ್ರಿಕೆ ಮೊದಲಾದ ಓದುವ ಸಾಹಿತ್ಯ ಸಾಮಗ್ರಿಗಳ ಸಂಖ್ಯೆ. (೩) ಓದಲು ಪುಸ್ತಕಭಾಂಡಾರಕ್ಕೆ ಸಂದರ್ಶನವಿತ್ತವರ ಸಂಖ್ಯೆ. (೪) ಕಡ ಒಯ್ಯುವವರ ಸಂಖ್ಯೆ. (೫) ಪುಸ್ತಕಭಾಂಡಾರದ ಆವಾರದಲ್ಲಿ ಓದಿದ ಪುಸ್ತಕ, ಪತ್ರಿಕೆ ಮೊದಲಾದವುಗಳ ಸಂಖ್ಯೆ. (೬) ಮನೆಯಲ್ಲಿ ಓದಲು ಕೊಟ್ಟ ಪುಸ್ತಕಗಳ ಸಂಖ್ಯೆ. ಇವೆಲ್ಲ ಸಮಂಜಸ ಅಂಶಗಳ ಸಂಖ್ಯೆಯನ್ನು ಕುರಿತು ಯಾವದೊಂದು ನಿರ್ದಿಷ್ಟ ಪ್ರಮಾಣ (Standard) ವನ್ನು ಹೇಳುವದು ಕಠಿಣ; ಹಾಗೂ ಇವುಗಳಿಂದಲೇ ಮೌಲ್ಯಮಾಪನ ಅಸಾಧ್ಯ. ಯಾಕೆಂದರೆ ಇಂತಹ ಪ್ರಮಾಣ (Standard) ಗಳು ಕಾಲ, ದೇಶ, ಸ್ಥಳಿಕ ಪರಿಸ್ಥಿತಿ ಇವುಗಳ ಮೇಲೆ ಅವಲಂಬಿಸಿರುವವು. ಆದರೂ ಇವೆಲ್ಲ ಬಾಹ್ಯ ಹಾಗೂ ತೋರಿಕೆಯ ಮೌಲ್ಯಮಾಪನ ಅಂಶಗಳು. ತೋರಿಕೆಯಲ್ಲಿ ಈ ಅಂಶಗಳ ಸಂಖ್ಯೆಗಳು ಸಮಾಧಾನಕರವಾಗಿ ಕಂಡುಬಂದರೂ ಆಂತರಿಕವಾಗಿ ತೀರ

ಅಸಮಾಧಾನಕರವಾಗಿ ಇರಬಹುದು. ಕಾಯದೆ ಮಾತ್ರದಿಂದ ಸಕಲ ಇಷ್ಟಾರ್ಥಗಳು ಈಡೇರುವವೆಂದು ಹೇಳಲಿಕ್ಕಾಗದು. ಆದ್ದರಿಂದ ಪ್ರತಿಯೊಬ್ಬ ಓದು ಬರಹ ಬಲ್ಲ ಶ್ರೀಸಾಮಾನ್ಯನು ಸಾರ್ವಜನಿಕ ಪುಸ್ತಕಭಾಂಡಾರ ಸೇವೆಯಿಂದ ಬಯಸುವ ದೇನು ?

(೧) ಸುಲಭಗಮ್ಯ ಅಂತರದಲ್ಲಿ ಪುಸ್ತಕಭಾಂಡಾರ ಸೇವೆಯ ಅಸ್ತಿತ್ವ,

(೨) ಅಲ್ಲಿ ಆಕರ್ಷಕ ಹಾಗು ಸೊಗಸಾದ ವಾತಾವರಣ; ಅಲ್ಲದೆ ಆರಾಮವಾಗಿ ಕುಳಿತು ಓದಲಿಕ್ಕೆ ಸ್ಥಳಾವಕಾಶ ಹಾಗು ಪೀಠೋಪಕರಣಗಳು,

(೩) ಉಲ್ಲಾಸ ಮನೋವೃತ್ತಿಯ ಹಾಗು ಸೇವಾ ಭಾವನೆಯುಳ್ಳ ಯೋಗ್ಯ, ದಕ್ಷ ಕಾರ್ಯಕರ್ತರು,

(೪) ಓದುಗರಿಗೆ ಅವರವರ ಅವಶ್ಯಕತೆಗಳಿಗನುಸಾರ ವಾಗಿ ಸಹಾಯ ಹಾಗು ಮಾರ್ಗದರ್ಶನ ನೀಡುವ ಏರ್ಪಾಡು.

(೫) ಸಾಕಷ್ಟು ಸಂಖ್ಯೆಯಲ್ಲಿ ಹಾಗು ಓದುಗರ ವಿವಿಧ ಅವಶ್ಯಕತೆಗಳನ್ನು ಪೂರೈಸುವ ಸಂಖ್ಯೆಯಲ್ಲಿ ಇರುವ ಪುಸ್ತಕ ಹಾಗು ಪತ್ರಿಕೆಗಳ ಸಂಗ್ರಹ,

(೬) ಬೇಕಾದ ಸಾಹಿತ್ಯವನ್ನು ಕೂಡಲೇ ಇಲ್ಲವೆ ಶೀಘ್ರದಲ್ಲಿಯೇ ಪುಕ್ಕಟೆಯಾಗಿ ಒದಗಿಸುವ ಸೌಲಭ್ಯ, ಮತ್ತು

(೭) ಪುಸ್ತಕಭಾಂಡಾರವನ್ನು ಬೇಕಾದ ವೇಳೆಯಲ್ಲಿ, ಸಾಮಾನ್ಯವಾಗಿ ಜೀವನದ ಚಟುವಟಿಕೆಯ ವೇಳೆಯಲ್ಲಿ, ಸಂದರ್ಶಿಸುವ ಅವಕಾಶ.

ಇವುಗಳು ದೊರಕಿದಲ್ಲಿ ಸಾರ್ವಜನಿಕ ಪುಸ್ತಕಭಾಂಡಾರ ಸೇವೆಯು ತೃಪ್ತಿಕರವಾಗಿ ಸಾಗಿ ಪುಸ್ತಕಭಾಂಡಾರ ಕಾಯದೆಯ ಧ್ಯೇಯ ಧೋರಣೆಗಳನ್ನು ಸಫಲಗೊಳಿಸುವದೆಂದು ಹೇಳಬಹುದು. ಇವುಗಳನ್ನು ಈಗಿರುವ ಹಾಗು ಇನ್ನು ಮುಂದೆ ಬರಲಿರುವ ಕಾಯದೆಗಳು ಪೂರೈಸುವವೆಂದು ಆಶಿಸೋಣ.

ಅನುಬಂಧ

ಮಹಾರಾಷ್ಟ್ರ ಪುಸ್ತಕಭಾಂಡಾರ ಕಾಯಿದೆ

ಮಹಾರಾಷ್ಟ್ರ ಸರಕಾರವು ಪುಸ್ತಕಭಾಂಡಾರ ಕಾಯಿದೆಯನ್ನು ೧೯೬೭ ರಲ್ಲಿ ಪಾಸು ಮಾಡಿಕೊಂಡಿದೆ. ಅದರಲ್ಲಿ ಈ ಅಂಶಗಳಿವೆ. ಇವು ಈ ಪುಸ್ತಕದಲ್ಲಿ ಹೇಳಿರುವ ಕೆಲವು ಮಹತ್ವದ ವಿಷಯಗಳಲ್ಲಿ ಸರ್ವಗ್ರಾಹ್ಯವಾದ ಅಂಶಗಳಿಗೆ ವ್ಯತಿ-ರಿಕ್ತವಾಗಿವೆ. ಆದುದರಿಂದ ಈ ವಿಷಯಗಳಲ್ಲಿ ಅಪವಾದಾತ್ಮಕವಾಗಿದೆ ಎನ್ನಬಹುದಾಗಿದೆ. ಅದು ತನ್ನದೇ ಆದ ಸಂಪ್ರದಾಯದ ಮಾರ್ಗದಲ್ಲಿದೆ. ಮುಂಬಯಿ ಸರಕಾರವು ಪ್ರಥಮವಾಗಿ ಪುಸ್ತಕಭಾಂಡಾರ ಚಳವಳಿಯನ್ನು ಸ್ಥಾಪಿಸಲಿಕ್ಕೆ ಆಧರಿತವಾದ ಅಂಶಗಳನ್ನೇ ನಂತರದಲ್ಲಿ ನಿರ್ಮಾಣವಾದ ಮಹಾರಾಷ್ಟ್ರ ಸರಕಾರವು ಪ್ರಸ್ತಾಪಿಸಿದೆ.

ಪುಸ್ತಕಭಾಂಡಾರ ಕಾಯಿದೆಯ ಮೂಲ ತಳಹದಿಯು ಪುಸ್ತಕಭಾಂಡಾರಗಳನ್ನು ಸ್ಥಾಪಿಸಿ ಸುಗಮವಾಗಿ ನಡೆಯಿಸಿಕೊಂಡು ಹೋಗಲು ಭದ್ರವಾದ ಆರ್ಥಿಕ ತಳಹದಿಯು ಇರಬೇಕೆಂಬುದಾಗಿದೆ. ಈ ಸಂಬಂಧದಲ್ಲಿ ಪ್ರತ್ಯೇಕವಾದ ಸುಂಕವನ್ನು ವಿಧಿಸುವದೇ ಉಚಿತವೆಂಬುದು ಸರ್ವಗ್ರಾಹ್ಯವಾಗಿದೆ. ಮತ್ತು ಈ ವರೆಗೆ ಪಾಸಾದ ಎಲ್ಲ ಪುಸ್ತಕಭಾಂಡಾರ ಕಾಯದೆಗಳು ಆಸ್ತಿ ಹಾಗು ಮನೆಗಳ ಮೇಲೆ ಆಕರಿಸುವ ತೆರಿಗೆಯ ಮೇಲೆ ಸುಂಕವನ್ನು ವಿಧಿಸುತ್ತವೆ. ಆದರೆ ಮಹಾರಾಷ್ಟ್ರ ಪುಸ್ತಕ

ಭಾಂಡಾರ ಕಾಯುದೆಯು ಇಂತಹ ಸುಂಕವನ್ನಾಗಲಿ ತೆರಿಗೆಯನ್ನಾಗಲಿ ವಿಧಿಸಿರುವುದಿಲ್ಲ. ಅಭಿವೃದ್ಧಿ ಪರವಾಗಿ ಸಾಗಿರುವ ಸರಕಾರಗಳ ಹಣಕಾಸು ತೆರಿಗೆ ಹಾಗು ಸುಂಕಗಳ ಮೂಲಕವಾಗಿ ಪ್ರಗತಿಶೀಲವಾದುದರಿಂದ ಪರಿಸ್ಥಿತಿಗೆ ಹೊಂದಿಕೊಳ್ಳುವ ಯೋಗ್ಯತೆಯನ್ನು ಹೊಂದಿರುತ್ತದೆ. ಹೀಗೆ ಮಾಡದೆ ಮಹಾರಾಷ್ಟ್ರ ಸರಕಾರವು ಈ ಕಾಯುದೆ ಮೂಲಕ ಒಂದು ನಿರ್ದಿಷ್ಟವಾದ ಧನವನ್ನು ೨೫,೦೦,೦೦೦ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಒದಗಿಸಿರುವದರಿಂದ ಅದು ಗತಿವಿಹೀನವಾಗಿ ಕಾಲಕಾಲಕ್ಕೆ ಉಂಟಾಗುವ ಅವಶ್ಯಕತೆಗಳನ್ನು ಒದಗಿಸಲು ಸಮರ್ಥವಾಗಲಾರದು.

ಎರಡನೆಯದಾಗಿ, ಸಾರ್ವಜನಿಕ ಪುಸ್ತಕಭಾಂಡಾರವು ಸರ್ವವಿಧದಿಂದಲೂ ಸಾರ್ವಜನಿಕರಿಗಾಗಿ ಪುಕ್ಕಟೆಯಾದ ಸೇವೆಯನ್ನು ಒದಗಿಸಬೇಕಾಗುತ್ತದೆ. ಇದೇ ಸಾರ್ವಜನಿಕ ಪುಸ್ತಕಭಾಂಡಾರದ ಲಕ್ಷಣವು ಹಾಗು ಶೀಲವು. ಆದರೆ ಮಹಾರಾಷ್ಟ್ರದ ಕಾಯುದೆಯಲ್ಲಿ ಹೆಚ್ಚಾಗಿ ಸಹಾಯಧನ ಪಡೆಯುವ ಪುಸ್ತಕಭಾಂಡಾರಗಳಿಗೆ ಅವಕಾಶವಿರುವುದರಿಂದ ಮತ್ತು ಇಂತಹ ಪುಸ್ತಕಭಾಂಡಾರಗಳು ಅವುಗಳು ಸಾರ್ವಜನಿಕರಿಂದ ವರ್ಗಣಿ, ದೇಣಿಗೆ ಹಾಗು ಇಂತಹ ಇತರ ಮೂಲಗಳಿಂದ ಬರುವ ಆದಾಯದ ಮೇಲೆ ಅಸ್ತಿತ್ವವನ್ನು ಹೊಂದಿರುವುದರಿಂದ ಸಂಪೂರ್ಣವಾಗಿ ಸಾರ್ವಜನಿಕವೆನಿಸಲಾರವು.

ಸಾಮಾನ್ಯವಾಗಿ ಎಲ್ಲ ಪುಸ್ತಕಭಾಂಡಾರ ಕಾಯುದೆಗಳು ಪುಸ್ತಕಭಾಂಡಾರಗಳನ್ನು ಸ್ಥಾಪಿಸುವ, ನಡೆಯಿಸಿಕೊಂಡು

ಹೋಗುವ ಹಾಗು ಅಭಿವೃದ್ಧಿಗೊಳಿಸುವ ಹೊಣೆಯನ್ನು ಪ್ರತ್ಯೇಕ ವಾದ ಸ್ವತಂತ್ರ ಘಟಕಗಳಿಗೆ ಅಂದರೆ ಪುಸ್ತಕಭಾಂಡಾರ ಅಧಿಕಾರ ಮಂಡಲಿಗಳಿಗೆ ಒಪ್ಪಿಸುತ್ತವೆ. ಆದರೆ ಮಹಾರಾಷ್ಟ್ರ ಕಾಯದೆ ಯಲ್ಲಿ ಇಂತಹ ಹೊಣೆಯು ಜಿಲ್ಲೆಯ ಮಟ್ಟದಲ್ಲಿರುವ ಪುಸ್ತಕ ಭಾಂಡಾರ ಸಮಿತಿಗಳಿಗೆ ಇಲ್ಲ. ಆದುದರಿಂದ ಅವು ಕೇವಲ ಸಲಹಾತ್ಮಕ ಸಮಿತಿಗಳಾಗಿವೆ. ಈ ಕಾಯದೆಯು ಪುಸ್ತಕ ಭಾಂಡಾರಗಳ ಬಗೆಗೆ ಇರುವ ಹೊಣೆಯನ್ನು ಸಾಮಾನ್ಯವಾಗಿ ಸ್ಥಾನಿಕ ಅಧಿಕಾರಯುತ ಮಂಡಲಿ, ರಜಿಸ್ಟರ ಮಾಡಿಕೊಂಡಂಥ ಸಂಘ, ಸಾರ್ವಜನಿಕ ಜಿಮ್ಮೆ, ಅಂತಿಮ ಅನಿರೀಕ್ಷಿತ ಪ್ರಸಂಗ ದಲ್ಲಿ ಸರಕಾರ ಇವುಗಳಿಗೆ ವಹಿಸಿ ಕೊಡುತ್ತದೆ.

ಉಪಯುಕ್ತ ಸಾಹಿತ್ಯ

1. All India Library Conference, Baroda: Souvenior of Baroda, 1946
2 Bombay, Library Development Committee: Report 1939-40
3 Madras Public Libraries Act, 1948
4. Hyderabad Public Libraries Act, 1955
5. Andhra Pradesha Public Libraries Act, 1960
6. Mysore Public Libraries Act, 1965
7. Maharashtra Public Libraries Act, 1967
8. Ranganathan S. R : Library Legislation
9 Government of India, Advisory Committee for Libraries: Report, 1959
10. Mysore, Public Libraries Bill Committee: Report, 1963
11. Mc colvin, L. R. : Public Library Extension (Unesco Public Library Manuals, 2).
12. Roberts (Sydney), (Chairman) : Report on the structure of Public Library Sevice in England and Wales, 1959
13 Harrison, K. C. : Recent Legislation affecting British Public Libraries (Herald of Library Science, April, 1965)

ಗ್ರಂಥಸೂಚಿ

ಸಂಕ್ಷೇಪಗಳು

ಪು. ಭಾ.=ಪುಸ್ತಕ ಭಾಂಡಾರ
ನೋ.=ನೋಡಿರಿ
ಪ್ರ.=ಪ್ರತಿಯಾಗಿ
ಆ.ಸ.=ಆಂಧ್ರ ಸರಕಾರ
ಬ.ಸ.=ಬಡೋದೆ (ಸಂಸ್ಥಾನ) ಸರಕಾರ
ಹೈ.ಸ.=ಹೈದರಾಬಾದ ಸರಕಾರ
ಬ್ರಿ ಸ.=ಬ್ರಿಟಿಶ ಸರಕಾರ
ಭಾ.ಸ.=ಭಾರತ ಸರಕಾರ
ಮ.ಸ.=ಮದ್ರಾಸ ಸರಕಾರ
ಮಹಾ.ಸ.=ಮಹಾರಾಷ್ಟ್ರ ಸರಕಾರ
ಮುಂ.ಸ.=ಮುಂಬಯಿ ಸರಕಾರ
ಮೈ.ಸ.=ಮೈಸೂರ ಸರಕಾರ

—

ಈ ಮಾಲೆಯ

ಇತ್ತೀಚಿನ ಪ್ರಕಟನೆಗಳು

೧. ಹರಿಹರನ ಮೂರು ರಗಳೆಗಳು —ಎಂ. ಎಸ್. ಲಕ್ಠೆ
೨. ಪ್ರಾಚ್ಯವಸ್ತು ಸಂಶೋಧನೆ —ಅ. ಸುಂದರ
೩. ನವೋದಿತ ಬಂಗ್ಲಾ ದೇಶ —ಎ. ಎಂ. ರಾಜಶೇಖರಯ್ಯ
೪. ಕನ್ನಡದಲ್ಲಿ ಶತಕ ಸಾಹಿತ್ಯ —ಬಿ. ವಿ. ಗುಂಜೆಟ್ಟಿ
೫. ಕನ್ನಡದಲ್ಲಿ ಲಲಿತ ಪ್ರಬಂಧಗಳು —ವಿ. ಎಸ್. ಸಿಂಪಿ
೬. ಇಕ್ಕೇರಿ ಅರಸರು —ಕೆ. ಗುಂಡಾಜೋಯಿಸ
೭. ಭೂಕಂಪಗಳು ಹಾಗು ಜ್ವಾಲಾಮುಖಿಗಳು —ಎಂ. ಎಫ್. ಕರೆಣ್ಣವರ
೮. ಟೀಕಾಚಾರ್ಯರು —ಪಿ. ಎಂ. ಗಲಗಲಿ
೯. ಭಾರತದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು —ಟಿ. ಎಂ. ಪಂಡಿತ
೧೦. ರವೀಂದ್ರರ ಶೈಕ್ಷಣಿಕ ತತ್ವಜ್ಞಾನ —ಅನಂತ ಕುಲಕರ್ಣಿ
೧೧. ಷೇಕ್ಸಪಿಯರನ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ —ವ್ಹಿ. ಕೆ. ನವಲಗುಂದ

ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾ ರ ವಾ ಡ